

ಲಂಕೇಶ್

ಆಗಸ್ಟ್ 29, 2007 ರೂ.10/-



ರೇವಣ್ಣನ ದರ್ಬಾರಿನಲ್ಲಿ ಹಾಸನ ಬರ್ಬಾದ್



ತಿರುಕನ ಕನಸು!

ಲಿಂಗಾಯತರಿಗೆ ಕಿರುಕುಳ

ಚೆಡ್ಡಿಗಳಿಗೆ ಕ್ರೈಸ್ತರ ತಿರುಗೇಟು!

ಟ್ಲಿ ರಫೀಕ್ ಹತ್ಯೆ ಸೇಡು-ಗುಲಾಂಗೆ ಸ್ಕೆಚ್



150 ಕೋಟಿ BDA ಆಸ್ತಿ ಗುಳುಂ!

ಕೇರಳ ಕಮ್ಯುನಿಸ್ಟರ ಪೌರೋಹಿತ್ಯ

ಚೆಡ್ಡಿಚಟುರರೇ ಬೆರಗಾಗಿ ಕುಣಿದಾಡುವಂತಹ ನಿರ್ಧಾರವೊಂದನ್ನು ಕೇರಳದ ಸಿಪಿಎಂ ಕಾಮ್ರೇಡರು ಮಾಡಿದ್ದಾರೆ. ಅದು ವೇದ, ಮಂತ್ರ, ಪೌರೋಹಿತ್ಯದಲ್ಲಿ ಚೆನ್ನಾದ ತರಬೇತಿ ನೀಡಲು ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ವಿಚಾರ.

'ಕೇರಳದ ದೇವಸ್ಥಾನಗಳಲ್ಲಿ ಪೌರೋಹಿತ್ಯದ ಗುಣಮಟ್ಟ ಕಡಿಮೆ ಆಗುತ್ತಿದೆ. ಇದರಿಂದಾಗಿ ದೈವಭಕ್ತರು, ದೇವರಿಂದ ದೂರವಾಗುವ ಸಾಧ್ಯತೆ ಇದೆ....' ಎಂದು ಮುಜರಾಯಿ ಮಂತ್ರಿ ಜಿ. ಸುಧಾಕರನ್ ಹೇಳಿದ್ದಾರೆ. ಈತ ಕಮ್ಯುನಿಸ್ಟ್ ಎಂದರೆ ನೀವು ನಂಬಲೇಬೇಕು!

ಈ ಸಮಸ್ಯೆ ಸರಿಪಡಿಸಲು ಹಿಂದೂತ್ವ ವಿದ್ವಾಂಸರು, ವೇದ ಪರಿಣಿತರು ಹಾಗೂ ಹಿಂದೂ ಆಧ್ಯಾತ್ಮಿಕ ಗುರುಗಳು faculty ಆಗಿರುವ ಹೊಸ ವಿ.ವಿ. ಸ್ಥಾಪಿಸುತ್ತಿದ್ದೇವೆ ಅಂತಲೂ ಸುಧಾಕರನ್ ಹೇಳಿದ್ದಾರೆ.

ಇದೆಲ್ಲಾ ಶುರುವಾಗಿದ್ದು ಹೇಗೆ ಗೊತ್ತೆ?

ಕೇರಳದ ಮುಜರಾಯಿ ಇಲಾಖೆ ದೇವಸ್ಥಾನಗಳಲ್ಲಿ ಪೂಜಾರಿಗಳೇ ದುಡ್ಡು ಕದಿಯುತ್ತಾ ಭಕ್ತರಿಗೂ, ದೇವರಿಗೂ ಏಕಕಾಲದಲ್ಲೇ ಮೋಸ ಮಾಡುತ್ತಿದ್ದುದನ್ನು ಜಸ್ಟೀಸ್ ಪರಿಪೂಮಂ ಆಯೋಗ ಪತ್ತೆಹಚ್ಚಿತ್ತು. ಆಗಲೇ ಶಬರಿಮಲೆ ದೇವಸ್ಥಾನದ ಮುಖ್ಯ ಅರ್ಚಕ ಕಾಂತರಾರು ಮೋಹನಾರು ವಿಚಾರಣೆ ನಡೆದಾಗ ಆತನಿಗೆ ಸಂಸ್ಕೃತ, ವೇದಘೋಷ, ಮಂತ್ರಪಠಣ ಇದ್ಯಾವುದು ಗೊತ್ತಿಲ್ಲ ಎಂಬುದೂ ಗೊತ್ತಾಯಿತಂತೆ. ಕೇರಳದ ಬಹುತೇಕ ಪೂಜಾರಿಗಳು ಇದರಲ್ಲಿ ಫೇಲ್ ಗಿರಾಕಿಗಳು ಅಂತ ಪತ್ತೆಹಚ್ಚಿರುವ ಸಿಪಿಎಂ ಕಮ್ಯುನಿಸ್ಟರಿಗೆ ವಿಷಾದ, ಗಾಬರಿ ಆಯಿತಂತೆ. ಅದಕ್ಕೆ ಈಗ ಅವರು ಪೌರೋಹಿತ್ಯ ತರಬೇತಿ ವಿ.ವಿ. ಸ್ಥಾಪಿಸಲು ಹೊರಟಿದ್ದಾರೆ.

ಇಲ್ಲಿ ಇನ್ನೊಂದು ಘಟನೆಯ ಬಗ್ಗೆಯೂ ಹೇಳಬೇಕು. ಇ.ಎಂ.ಎಸ್. ನಂಬೂದರಿಪಾದ್ ಎಂಥ ನಿಷ್ಠೂರಿಯಾಗಿದ್ದರೆಂದರೆ ಕಾಲಡಿಯಲ್ಲಿ ಆದಿ ಶಂಕರಾಚಾರ್ಯ ಸಂಸ್ಕೃತ ವಿ.ವಿ. ಸ್ಥಾಪಿಸಬೇಕೆಂದು ಅದ್ವೈತಿಗಳು ಕೇಳಿದಾಗ 'ಸಂಸ್ಕೃತ ಸತ್ತ ಭಾಷೆ, ಈಗ ಅದಕ್ಕೆ ಯೂನಿವರ್ಸಿಟಿ ಮಾಡಿಕೊಟ್ಟರೆ ಅದರಿಂದ ಹಿಂದೂ ಕೋಮುವಾದಿಗಳಿಗೆ ಬೆಂಬಲ ಕೊಟ್ಟಂತೆ. ಹಾಗಾಗಿ ಬೇಕಿಲ್ಲ' ಎಂದಿದ್ದರು.

ಇವತ್ತಿನ ವಿಪರ್ಯಾಸ ಏನು ಗೊತ್ತೆ?

ಅಲ್ಲೀಗ ಸಂಸ್ಕೃತ ವಿ.ವಿ. ಇದೆ. ಜೊತೆಗೆ ನಂಬೂದರಿಪಾದ್ ಅಧ್ಯಯನ ಪೀಠವೂ ಅದರೊಳಗಿದೆ!

ನಾವೆಲ್ಲಾ ಸಿಪಿಎಂ-ಕಾಂಗ್ರೆಸ್, ಸಿಪಿಎಂ-ದಳ ಸಿಪಿಎಂ-ಬಂಡವಾಳಶಾಹಿಗಳ ಸ್ನೇಹ ನೋಡಿದ್ದೇವೆ. ಈಗ ಸಿಪಿಎಂ-ಹಿಂದೂ ಪುರೋಹಿತರ ಸರಸವನ್ನೂ ನೋಡಬೇಕಾಗಿ ಬಂತಲ್ರೀ!!

ಅಂದಹಾಗೆ ಈ ಸಿಪಿಎಂ ಕಾಮ್ರೇಡರು ಕೇರಳ ಪುರೋಹಿತರಿಗೆ ಮಂತ್ರ-ತಂತ್ರ ಎಷ್ಟು ಗೊತ್ತು ಅಂತ ಪರೀಕ್ಷೆ ಮಾಡಿದ್ದಾರಲ್ಲ, ಅದೇರೀತಿ ಯಾರಾದರೂ ಈ ಕಾಮ್ರೇಡರಿಗೆ ಮಾರ್ಕ್ಸ್‌ವಾದ ಎಷ್ಟು ಗೊತ್ತು? ಭೌತವಾದ ನಾಸ್ತಿಕತೆ, dialectics ಬಗ್ಗೆ ಏನು ಗೊತ್ತು ಅಂತ ಪರೀಕ್ಷೆ ಗಿರೀಕ್ಷೆ ಮಾಡಿದರೆ ಏನು ಗತಿ? ಪುರೋಹಿತರಿಗಿಂತ ಜಾಸ್ತಿ ಜನ ಕಾಮ್ರೆಡರೇ ಫೇಲ್ ಆಗಲ್ಲ ಅಂತ ಹೇಳೊ ಪರಿಸ್ಥಿತಿ ಇದೆಯಾ? ■

ಬಿಡಿ ಚಿತ್ರಗಳು

ಪಾರ್ವತೀಶ

ಅಣು ಒಪ್ಪಂದ ಮತ್ತು ಸಂಸತ್ತು

ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟ ಎಷ್ಟು ಕ...
ಹಾಗೂ ಜಾಳು ಎಂಬುದನ್ನು ತಿಳಿಯುವ ಸಂದ...
ಇದು.

ಭಾರತ-ಅಮೆರಿಕಾ ಮಧ್ಯೆ ಆಗಿರುವ ಅಣು...
ಒಪ್ಪಂದದ ಬಗ್ಗೆ ಸಂಸತ್ತಿನಲ್ಲಿ ಚರ್ಚಿಸಿ ನಿರ್ಣಯ ಮಾಡು...
ಅವಕಾಶ ಇಲ್ಲ ಎಂದು ಸ್ಪೀಕರ್ ಸೋಮನಾಥ ಚಟ...
ಹೇಳಿದ್ದಾರೆ. ಇದರಲ್ಲಿ ಸುಳ್ಳು ಮಾತೇನೂ ಇಲ್ಲ. ಯುಪಿ...
ಅಂಗಪಕ್ಷಗಳಾದ ಸಿಪಿಎಂ-ಸಿಪಿಐಗಳೂ ಈ ಬಗ್ಗೆ ಚರ್ಚೆ...
ಒತ್ತಾಯಿಸಿದ್ದವು. ಆದರೆ ಕೇಳಬೇಕಾದ ಪ್ರಶ್ನೆ ಏನೆಂದ...
ಸಂಸತ್ ಅಂದರೇನು? ಈ ದೇಶದ ಆಗುಹೋಗುಗಳನ...
ಬೇಕು-ಬೇಡಗಳನ್ನು ಸಂಸತ್‌ನಲ್ಲಲ್ಲದೆ ಇನ್ನೆಲ್ಲಿ ಚರ್ಚಿಸಬೇಕು...
WTO ಒಪ್ಪಂದವೂ ಸಂಸತ್‌ನಲ್ಲಿ ಚರ್ಚೆಯಾಗಲಿ...
ಯಾರೂ ಸಂಸತ್‌ನ ಒಪ್ಪಿಗೆ ಕೇಳಲಿಲ್ಲ ಎಂಬುದು ನಿಮ...
ನೆನಪಿದೆಯಾ?

ಮೊನ್ನೆ ಪ್ರಜಾವಾಣಿಯ ದೆಹಲಿ ಬಾತ್ಮೀದಾರ ದಿನೇ...
ಅಮಿನ್ ಮಟ್ಟು ಕಮ್ಯುನಿಸ್ಟರನ್ನು ಟೀಕಿಸಿ ಒಂದು ಲೇಖ...
ಬರೆದಿದ್ದಾರೆ.

"ಪ್ರಧಾನಿ ಮನಮೋಹನ್ ಸಿಂಗರಿಗೆ ಈ ಕಮ್ಯುನಿಸ್ಟ...
ಪ್ರತಿ ಹಂತದಲ್ಲೂ ಅಡ್ಡಿ ಮಾಡುತ್ತಿದ್ದಾರೆ. ಉದಾರೀಕರ...
ಕಾರ್ಮಿಕ ಹಕ್ಕು ರಕ್ಷಣೆ ಕಾಯ್ದೆ ವಿದೇಶಿ ಬಂಡವಾ...
ಈಗ ಅಣು ಒಪ್ಪಂದದ ವಿವಾದ ಇದೆಲ್ಲದರ ಬ...
ಕಿರಿಕಿರಿಯಾಗುವಂತೆ ಪ್ರಶ್ನಿಸುತ್ತಿದ್ದಾರೆ" ಎಂದು ಬರೆದರ...
ಇದೆಲ್ಲಾ ತಪ್ಪು, ಅಸಂಬದ್ಧ ಎಂಬ ಧೋರಣೆ ಅವ...
ಬರಹದ ಒಟ್ಟಾರೆ ತಾತ್ಪರ್ಯ. ಕಮ್ಯುನಿಸ್ಟರಾಗ...
ಮತ್ತಾರಾದರೂ ಆಗಲಿ ಇಂಥ ವಿಚಾರಗಳ ಬಗ್ಗೆ ಚರ್ಚೆ...
ಯಾಗಲಿ ಅಂದರೆ ಅದು ಕಿರಿಕಿರಿಯೇ?

ಪ್ರಜಾಪ್ರಭುತ್ವ ಅಂದರೆ ಅಷ್ಟು ಚಿಲ್ಲರೆ ವಿಚಾರಾನಾ... ■

ಎ.ಎಸ್. ಮೂರ್ತಿಗೆ ಬ್ರಾಹ್ಮಣರ ಅಭಿನಂದನೆ

ಜಾತಿ ಕುರಿತಂತೆ ನಿಲುವು ತಳೆಯಲು ನಮಗೆ ಮೂರ್ನಾಲ್ಕು ಸಾಧ್ಯತೆಗಳಿವೆ.


ಜಾತಿವಾದಿಯಾಗಿರುವುದು, ಜಾತಿಯನ್ನು ನಿರಾಕರಿಸಿ, ಆಚರಿಸದೇ ಇರುವುದು, ಸಂದರ್ಭಾನುಸಾರ ಪ್ರಜ್ಞಾಪೂರ್ವಕವಾಗಿ ಜಾತಿ ಚೌಕಟ್ಟನ್ನು ಮೀರುತ್ತಾ ಜಾತ್ಯತೀತ ವಲಯದಲ್ಲಿರುವುದು. ಈ ಮೂರರಲ್ಲಿ ಕೊನೆಯ ಆಯ್ಕೆ ಅತ್ಯುತ್ತಮವಾದದ್ದು ಅನ್ನಿಸುತ್ತೆ.

ಎ.ಎಸ್. ಮೂರ್ತಿಯವರಿಗೂ ಈ ಮಾತು ಹೇಳಬೇಕಿದೆ.

ನಾಟಕಕಾರ-ಕಲಾವಿದ-ನಟ-ಸಂಘಟಕ-ಪತ್ರಕರ್ತ-ಬೊಂಬೆ ಆಟದ ಚಿತ್ರಾಸಂಸ್ಥೆ-ಅಭಿನಯ ತರಂಗ, ಬಿಂಬಗಳ ರೂವಾರಿ-ನನ್ನ ಮಾವ..... ಎಂಬಿತ್ಯಾದಿ ಬಿರುದುಗಳಿಂದ ಪಾಂಪ್ಲೆಟ್ ಒಂದರಲ್ಲಿ ಬಣ್ಣಿಸಲ್ಪಟ್ಟಿರುವ ಎ.ಎಸ್. ಮೂರ್ತಿಯವರ ಸನ್ಮಾನ ಕಾರ್ಯಕ್ರಮ ನಿನ್ನೆ ಭಾನುವಾರ ಬೆಂಗಳೂರಿನಲ್ಲಿ ನಡೆದಿದೆ.

ನಮ್ಮೆಲ್ಲರ ಮೆಚ್ಚಿನ, ಹಿರಿಯ ಮಾತುಗಾರ ಎ.ಎಸ್. ಮೂರ್ತಿಯವರಿಗೆ 79 ವರ್ಷ ಆಯಿತೆಂದು ಈ ಸನ್ಮಾನ. ಈ ಬಿರುದುಗಳ ಲಿಸ್ಟ್‌ಗಳ ಪೈಕಿ ಕೊನೆಯದಾದ 'ನನ್ನ ಮಾವ' ಎಂಬುದು ಸುಂದರ ಪ್ರಕಾಶನದ host ಗೌರಿ ಸುಂದರರ ವೈಯಕ್ತಿಕ ನಂಟು. ಉಳಿದಂತೆ ಉಳಿದೆಲ್ಲಾ ಕ್ಷೇತ್ರಗಳಲ್ಲೂ ಮೂರ್ತಿಯವರು ಕೆಲಸ ಮಾಡಿರುವುದು ನಿಜ. ಕಳೆದ 50 ವರ್ಷಗಳಿಂದ ಸಾರ್ವಜನಿಕ ಬದುಕಿನಲ್ಲಿರುವ ಮೂರ್ತಿಯವರು ನಾಟಕಕಾರ, ನಟ, ಪತ್ರಕರ್ತ, ಸಂಘಟಕ ಮತ್ತು ಗೌರಿ ಸುಂದರರ ಮಾವ ಆಗಿರುವುದಂತೂ ನಿಜ. ಇಷ್ಟು ದೀರ್ಘ ಕಾಲ ನಿಜವಾಗಲೂ ಕ್ರಿಯಾಶೀಲ ಜೀವನ ನಡೆಸಿದವರ ಸಾಮಾಜಿಕ ವ್ಯಾಪ್ತಿ ಎಷ್ಟು ಅಗಾಧವಿರಬೇಕು ಅಂತ ನಾವಂದುಕೊಳ್ಳಬಹುದು.

ಆದರೆ ವಾಸ್ತವ ಹಾಗಿರುವುದಿಲ್ಲ ಎನ್ನಲು ಈ ಸನ್ಮಾನ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿರುವ ಗಣ್ಯರ ಪಟ್ಟಿಯಲ್ಲೇ ಸಾಕ್ಷಿ ಇದೆ. ದಯವಿಟ್ಟು ಸಹನೆ ಕಳೆದುಕೊಳ್ಳದೆ ಈ ಭಾಷಣಕಾರರ ಪಟ್ಟಿ ಓದಿ.



ಪ್ರೊ.ಜಿ. ವೆಂಕಟಸುಬ್ಬಯ್ಯ, ವ್ಯಾಸರಾಯ ಬಲ್ಲಾಳ, ವಿ.ಎಸ್. ಕೃಷ್ಣ ಅಯ್ಯರ್, ಎಂ. ರಾಮಾಜೋಯಿಸ್, ಎಸ್. ಶಿವರಾಂ, ಎಚ್.ಜಿ. ಸೋಮಶೇಖರ ರಾವ್, ಎಂ.ಎಸ್. ಉಮೇಶ್, ಜಿ.ಕೆ. ಗೋವಿಂದರಾವ್, ಗೀತಾ ರಾಮಾನುಜಂ, ಬಾಬು ಕೃಷ್ಣಮೂರ್ತಿ, ಬೇಲೂರು ರಾಮಮೂರ್ತಿ, ಎಚ್.ಎಸ್. ವೆಂಕಟೇಶ್‌ಮೂರ್ತಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಮಾಸ್ಟರ್ ಹಿರಣ್ಣಯ್ಯ ಜಿ.ಎನ್. ರಂಗನಾಥ್‌ರಾವ್, ಸಿ.ಆರ್. ಸಿಂಹ, ಬಿ.ಆರ್. ಲಕ್ಷ್ಮಣರಾವ್, ಎಲ್.ಎಸ್. ಶೇಷಗಿರಿರಾವ್, ನಟ ವಿಷ್ಣುವರ್ಧನ್, ನಟಿ ರಾಧಾರವಿ... ಹೀಗೆ ಆ ಪಟ್ಟಿಯಲ್ಲಿ ಒಟ್ಟು 27 ಹೆಸರುಗಳಿವೆ. ಮತ್ತು ಅವರೆಲ್ಲರೂ ಬೇರೆಬೇರೆ ಕ್ಷೇತ್ರದಲ್ಲಿ ಹೆಸರು ಮಾಡಿರುವ ಪ್ರಖ್ಯಾತ ಬ್ರಾಹ್ಮಣರೇ ಆಗಿದ್ದಾರೆ.

ಬೇಸರ ತರುವ ಸಂಗತಿ ಇದು.

ಎ.ಎಸ್. ಮೂರ್ತಿಗೆ ಬ್ರಾಹ್ಮಣ ಜಾತಿಯ ಅಹಂಕಾರ ಇದೆ ಅಥವಾ ಅವರು ಜಾತಿವಾದಿ ಅಂತ ನಾವು ನಂಬುವುದಿಲ್ಲ, ಇಲ್ಲಿ ನಮ್ಮ ಪ್ರಶ್ನೆ ಇಷ್ಟೆ.

ಮೂರ್ತಿಯವರು ನಾಟಕಕಾರ, ನಟ, ಪತ್ರಕರ್ತ ಇವೆಲ್ಲಾ ಆಗಿರುವುದೇ ನಿಜವಾದರೆ ಅವರು ಕರ್ನಾಟಕದ ಹತ್ತಾರು ಜಾತಿ ಜನಾಂಗಗಳ ನಡುವೆ ಒಡನಾಡಿರಲೇಬೇಕು ತಾನೆ? ಹಾಗಂದ ಮೇಲೆ ಮೂರ್ತಿಯವರ ಬಗ್ಗೆ ಹೊಗಳಿ ಟೀಕಿಸಿ ಮಾತಾಡಬಲ್ಲ ನಾನಾ ಹಿನ್ನೆಲೆಗಳ ಜನರೂ ಇದ್ದೇ ಇರಬೇಕು ತಾನೆ? ಅದು ಬಿಟ್ಟು ಕೇವಲ ಒಂದು ಜಾತಿಯ ಜನರನ್ನು ಮಾತ್ರ ಗುಂಪು ಸೇರಿಸಿ ಮೂರ್ತಿ ಸಾಧನೆ ಬಗ್ಗೆ ಡಂಗುರ ಹೊಡೆಸಿದರೆ ನೋಡಿದವರಿಗೆ ಜಿಗುಪ್ಸೆ ಬರುತ್ತದಷ್ಟೇ. ಈ ಅತಿಥಿ ಬ್ರಾಹ್ಮಣರ ಪೈಕಿ ಜಾತಿವಾದಿಗಳು, ಜಾತ್ಯತೀತರು, ಬಾಯಿಬಡುಕರು, ಕೋಮುವಾದಿ ಫ್ಯಾಸಿಸ್ಟರೆಲ್ಲಾ ಇದ್ದರು.

ಸೂಕ್ಷ್ಮತೆ ಇರುವವರು ಜಾತಿ ಸೂಚಕದಂತೆ ಕಾಣುವ ಇಂಥ ಕಾರ್ಯಕ್ರಮಕ್ಕೆ ಹೋಗಕೂಡದು. ಗೌರಿ ಸುಂದರ್ ಹೀಗೆ ಸ್ವಜಾತಿ ಬಾಂಧವರ ನಡುವೆ ಸನ್ಮಾನದ ನೆಪದಲ್ಲಿ ಎ.ಎಸ್. ಮೂರ್ತಿಯವರನ್ನು ಕೂರಿಸಿ, ಅವಮಾನಿಸಿದ್ದಾರೆ ಅಷ್ಟೇ. ಒಂದು ಮಾತಿನ ಈರಣ್ಣ ಮೂರ್ತಿಯವರಾದರೂ ಇದನ್ನು ಹೇಗೆ ಒಪ್ಪಿಕೊಂಡರೊ? ■

ದಸರೀ ದೇವಿ ಕ್ರಿಕೆಟ್ ಟೂರ್ನಿ-ಒಡೆಯರ್ ಕಪ್

ನಮ್ಮ ಮೈಸೂರಿನ ಒಡೆಯರ್ ರಾಜವಂಶದವರಿ...
ಯುದ್ಧ ಹೋರಾಟ ಅಂದರೇನೇ ಭಯ. ಹೈದರ್ ಅಲಿ...
ಟಿಪ್ಪು ತಮ್ಮಿಡೀ ಬದುಕನ್ನು ಯುದ್ಧ ಭೂಮಿಯ...
ಬಡಿದಾಡುತ್ತಲೇ ಸವೆಸಿ ಕೊನೆಗೆ ಅಲ್ಲೇ ಪ್ರಾಣ ತೆತ್ತರು...
ಆಮೇಲೆ ಬ್ರಿಟಿಷರ ಕೃಪೆಯಿಂದ ಅಧಿಕಾರಕ್ಕೇರಿ...
ಒಡೆಯರ್‌ಗಳು ನಿತ್ಯ ಡ್ಯಾನ್ಸು, ಸಂಗೀತ, ಶಿಕಾರಿ (ಹುಲಿಯನ್ನು...
ಮರಕ್ಕೆ ಕಟ್ಟಿ ಹಾಕಿಸಿ ಆಮೇಲೆ ವೀರೋಚಿತವಾಗಿ ಗುಂಡಿಟ್ಟು...
ಕೊಲ್ಲುತ್ತಿದ್ದರೆಂಬ ಅನುಮಾನ ಇದೆ)ಗಳಲ್ಲಿ ಮುಳುಗಿರುತ್ತಿದ್ದರು...
ಈ ಪಿಂಚಣಿ ರಾಜರಲ್ಲಿ ಕ್ಷಾತ್ರ ತೇಜಸ್ಸು ಕಡಿಮೆ ಇ...
ಬಿಡಿ. ಈಗಿನ ವಿಚಾರ ಏನೆಂದರೆ ಶ್ರೀಕಂಠದತ್ತ ಒಡೆಯರ್...
ಕರ್ನಾಟಕ ಕ್ರಿಕೆಟ್ ಸಂಸ್ಥೆ ಎಲೆಕ್ಷನ್‌ಗೆ ನಿಂತಿದ್ದಾರೆ. ಈ...
ತಾನು ಗೆಲ್ಲುತ್ತೇನೋ ಇಲ್ಲವೋ ಅಂತ ಪುಕ್ಕಲುತ...
ಶುರುವಾಯಿತೇನೋ.



ಮೊನ್ನೆ ತಿಪಟೂರಿನ ಬಳಿಯ ದಸರೀ ದೇವಿ ದೇವಸ್ಥಾನಕ್ಕೆ ಹೋಗಿ ಕವಡೆ ಶಾಸ್ತ್ರ ಕೇಳಿ 'ಗೆಲ್ಲುತ್ತೀಯಾ ಹೋಗು' ಅಂತ ಭವಿಷ್ಯ ಹೇಳಿಸಿಕೊಂಡು ಬಂದಿದ್ದಾರೆ.

ಅಸಲಿಗೆ ಈ ದಸರೀ ದೇವಿಗೂ ಕ್ರಿಕೆಟ್‌ಗೂ ಏನು ಸಂಬಂಧ? ಒಡೆಯರ್‌ನಂಥ ಮೂರ್ಖರು ಇಂಡಿಯಾದ ಕ್ರಿಕೆಟ್‌ನಲ್ಲಿ ರಾಶಿರಾಶಿ ಜನ ಇದ್ದಾರೆ. ಸಚಿನ್ ತೆಂಡೂಲ್ಕರ್ ಇತ್ತೀಚೆಗೆ ಸುಬ್ರಮಣ್ಯಕ್ಕೆ ಬಂದು ಸರ್ಪದೋಷ ನಿವಾರಣೆ ಪೂಜೆ ಮಾಡಿ ಹೋಗಿದ್ದ.

ಇದೆಲ್ಲದಕ್ಕಿಂತ ತಮಾಷೆ ಘಟನೆ ಇನ್ನೊಂದಿದೆ.

ಇಂಡಿಯನ್ ಕ್ರಿಕೆಟ್ ಟೀಂ ಕಳೆದ ಬಾರಿ ವಿಶ್ವಕ...
ಆಡಲು ಆಸ್ಟ್ರೇಲಿಯಾಗೆ ಹೊರಟಿದ್ದಾಗ ಇಲ್ಲಿನ ಚೆಡ್ಡಿಗ...
ದೇಶವ್ಯಾಪ್ತಿ ಆಂಜನೇಯ ಹೋಮ ಮಾಡಿಸಿದ್ದರ...
ನಮ್ಮವರಿಗೆ ಶಕ್ತಿ, ಧೈರ್ಯ ಬರಲಿ ಅಂತ! ಆದರೆ ಇಲ್ಲಿಂ...
5 ಸಾವಿರ ಮೈಲಿ ದೂರದ ಆಸ್ಟ್ರೇಲಿಯಾದಲ್ಲಿ ಆಂಜನೇಯ...
ಮಹಿಮೆ ನಡೆಯಲಿಲ್ಲ. ಅವರು ನಮ್ಮ ಕೋಕಾಕೋ...
ವೀರರ ಚೆಡ್ಡಿ ಒದ್ದೆಯಾಗುವಂತೆ ಬಡಿದು ಕಳಿಸಿದ್ದರು.

ಈಗ ಒಡೆಯರ್ ಕ್ರಿಕೆಟ್ ಸಂಸ್ಥೆ ಆಡಳಿತ ಕೈ...
ಮಾಡಿಕೊಳ್ಳಲು ದೇವತೆಯ influence ತರುತ್ತಿದ್ದಾ...
ಇದನ್ನು ಯಥಾ manager ತಥಾ player ಅ...
ಬಹುದಾ? ■

ಹಿಂಸೆ ಕುರಿತ ಕವನಗಳು

■ ನವೀನ್

ನಕ್ಸಲರ ಪರವಾಗಿ
ಮಾತನಾಡಬಾರದು
ನ್ಯಾಯದ ಪರವಾಗಿಯೂ
ಮಾತನಾಡಬಾರದೆ?

ಭಗವದ್ಗೀತೆ ಕೈಲಿ
ಹಿಡಿದುಕೊಂಡು
ಹಿಂಸೆ ಅಪರಾಧ ಎಂದ
ನ್ಯಾಯವಾದಿ

ನಾನು ಚಿವುಟಿದೆ
ತಂಗಿ ಹೊಡೆದಳು
ಹಾಗೆಲ್ಲ ಹೊಡೆಯಬಾರದು ಎಂದು
ಒಂದು ಗಂಟೆ ಪಾಠ ಮಾಡಿದೆ

"ಮಲೆನಾಡು ಈವರೆಗೆ
ಶಾಂತಿಯಿಂದಿತ್ತು"
"ಬೆಕ್ಕಿನ ಬಾಲಕ್ಕೆ ಕೊಳ್ಳಿ ಸುತ್ತಿದ
ಮೇಲೆ
ಹುಲಿಯ್ವಾಯಿತು ಬೆಕ್ಕು"

ಹಿಂಸೆ ಸಹಿಸೆನೆಂದು
ಹೇಳಿತು ಹದ್ದು
ಕೋಳಿ ಮರಿಗೆ ಒದ್ದು

ಸಿಂಹ ಮೊಲವನ್ನು
ತಿನ್ನುತ್ತಿರುವಾಗ
'ಹಿಂಸೆ ವಿರುದ್ಧ ನನ್ನ ಹೋರಾಟ'
ಎಂದು ಕೂತೇಳುತ್ತಿತ್ತು ನೊಣ!

ಅವನು ಮಾರಾಟಕ್ಕಾಗಿ ಕೊಲ್ಲಬೇಕೆಂದು
ಹುತ್ತದಿಂದ ಹಾವಿನ ಬಾಲ
ಹಿಡಿದೆಳೆದ. ಹಾವು ಕಚ್ಚಿತು
ಇಬ್ಬರೂ ಅಪರಾಧಿಗಳು ಎಂದ ಕವಿ
ಹಾವನ್ನು ಬಡಿದು ಹಾಕಲಾಯಿತು.

ಅಧಿಕಾರ ಹಸ್ತಾಂತರದ ಬಗ್ಗೆ ಈಗ ವಾದ-ವಿವಾದಗಳು ನಡೆಯುತ್ತಿರುವುದರಿಂದ ಈ ವಾರ ರಾಜಕೀಯ/ಅಧಿಕಾರ ಕುರಿತ ಹೇಳಿಕೆಗಳನ್ನು ನೀಡುತ್ತಿದ್ದೇವೆ...

ಸರಕಾರದ ಬಾಯಲ್ಲಿ ಬೆಣ್ಣೆ, ಬಗಲಲ್ಲಿ ದೊಣ್ಣೆ



ಕಂಡಹಾಗೆ

ನಮ್ಮ ರಾಜ್ಯವನ್ನು ಈಗ ಆಳುತ್ತಿರುವ ಜಾತಿವಾದಿ ಜನತಾದಳ ಮತ್ತು ಕೋಮುವಾದಿ ಬಿಜೆಪಿ ಪಕ್ಷಗಳ ಸಮ್ಮಿಶ್ರ ಸರ್ಕಾರ ಹೇಳೋದೊಂದು, ಮಾಡೋದೊಂದು ಎಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ.

ಸುಮಾರು ನಾಲ್ಕು ತಿಂಗಳ ಹಿಂದೆ ಮಂಡ್ಯದಲ್ಲಿರುವ ಐತಿಹಾಸಿಕ ಮೈ ಶುಗರ್ ಕಂಪನಿಯನ್ನು ಖಾಸಗಿಯವರಿಗೆ ಮಾರಬಾರದೆಂದೂ, ಬದಲಾಗಿ ಅದನ್ನು ಪುನಶ್ಚೇತನಗೊಳಿಸಿ ಅಲ್ಲಿನ ಕಬ್ಬು ಬೆಳೆಗಾರರಿಗೆ ನೆರವಾಗಬೇಕೆಂದೂ ಮಂಡ್ಯದ ರೈತ ಮುಖಂಡರು, ಜನಪರ ಹೋರಾಟಗಾರರು, ಬರಹಗಾರರು ಸರ್ಕಾರದ ಮುಂದೆ ಮನವಿ ಸಲ್ಲಿಸಿದ್ದರು.

ಆದರೆ ಅವರು ಬರೀ ಮನವಿಯೊಂದನ್ನು ಮಾತ್ರ ಕಳುಹಿಸಿ ಸುಮ್ಮನಾಗಿರಲಿಲ್ಲ. ಮೈ ಶುಗರ್ ಅನ್ನು ತಾಂತ್ರಿಕವಾಗಿ ಉತ್ತಮಗೊಳಿಸಲು ಏನೇನು ಮಾಡಬೇಕಿದೆ, ಅದನ್ನು ಸರಿಯಾಗಿ ನಡೆಸಿದರೆ ಪ್ರತಿ ತಿಂಗಳು ಎಷ್ಟು ಲಾಭ ಬರುತ್ತದೆ, ಎಷ್ಟು ರೈತರಿಗೆ ನೆರವಾಗುತ್ತೆ, ಸರ್ಕಾರಕ್ಕೂ ಎಷ್ಟು ಆದಾಯ ತರುತ್ತೆ, ಆ ಕಂಪನಿಯ ಈಗಿನ ಸಾಲಗಳೆಷ್ಟು, ಅದರ ಪುನಶ್ಚೇತನಕ್ಕೆ ಎಷ್ಟು ಹಣ ಬೇಕಾಗುತ್ತದೆ, ಆ ಹಣವನ್ನು ಎಷ್ಟು ತಿಂಗಳೊಳಗೆ ಹಿಂದೆ ಪಡೆಯಬಹುದು, ಕಂಪನಿಯ ಮೊಲಾಸೆಸ್‌ನಿಂದಲೇ ತಿಂಗಳಿಗೆ ಮೂರು ಕೋಟಿಗಿಂತಲೂ ಹೆಚ್ಚು ಲಾಭ ಸಾಧ್ಯ... ಹೀಗೆ ಎಲ್ಲದರ ಬಗ್ಗೆಯೂ ಅಧ್ಯಯನ ನಡೆಸಿ ಸರ್ಕಾರದ ಮುಂದೆ ಒಂದು ವರದಿಯನ್ನು ಸಲ್ಲಿಸಿದ್ದರು.

ಆ ವರದಿಯನ್ನು ಓದಿದ ಸರ್ಕಾರ ಅದನ್ನು ತಯಾರಿಸಿದ (ನಮ್ಮ ಹಿರಿಯ ಬರಹಗಾರ ಎಚ್.ಎಲ್. ಕೇಶವಮೂರ್ತಿಯವರೂ ಸೇರಿದಂತೆ) ತಂಡ ಮತ್ತು ಸ್ಥಳೀಯ ರೈತರ ಮುಖಂಡರನ್ನು ಮಾತುಕತೆಗೆ ಕರೆದಿತ್ತು. ತಮ್ಮ ಮನವಿ ಮತ್ತು ವರದಿಗೆ ಸರ್ಕಾರ ಸ್ಪಂದಿಸಿದ್ದನ್ನು ಕಂಡು ಅವರೆಲ್ಲಾ ಚಕಿತರಾಗಿದ್ದರು. ಅವರೆಲ್ಲ ತಮ್ಮ ಕೆಲಸ ಕಾರ್ಯಗಳನ್ನು ಬದಿಗಿಟ್ಟು ವಿಧಾನಸೌಧದಲ್ಲಿ ಕರೆದಿದ್ದ ಸಭೆಗೆ ಹಾಜರಾದರು. ತಮ್ಮ ಅನಿಸಿಕೆಗಳನ್ನು ಮುಖ್ಯಮಂತ್ರಿ ಕುಮಾರಸ್ವಾಮಿ, ಯಡಿಯೂರಪ್ಪ ಮತ್ತು ಅಧಿಕಾರಿಗಳ ಮುಂದೆ ವಿವರಿಸಿದಾಗ ಅವರೆಲ್ಲ ಸಕಾರಾತ್ಮಕವಾಗಿಯೇ ತಲೆಯಲ್ಲಾಡಿಸಿದ್ದರು.

ಅದನ್ನು ಕಂಡು ಮಂಡ್ಯದ ಜನಕ್ಕೆ ಸಂತಸ. ಪರವಾಗಿಲ್ಲ, ಈತ ಮತ್ತು ಮತ್ತೀತನ ಅಧಿಕಾರಿಗಳು ಅರ್ಥ ಮಾಡಿಕೊಂಡರಲ್ಲಾ ಎಂದು. ಅದೇ ಸಭೆಯಲ್ಲಿ ಮೈ ಶುಗರ್ ಕಂಪನಿಯ ಪುನಶ್ಚೇತನಕ್ಕೆ ಸರ್ಕಾರ 65 ಕೋಟಿ ರೂಪಾಯಿಗಳನ್ನು ಹಂತಹಂತವಾಗಿ ಬಿಡುಗಡೆ ಮಾಡುತ್ತದೆಂದೂ, ಮೊದಲ ಕಂತಿನಲ್ಲಿ ಕಂಪನಿಯು ರೈತರಿಗೆ ನೀಡಬೇಕಿರುವ 16 ಕೋಟಿ ರೂಪಾಯಿಗಳನ್ನು ಚುಕ್ತಾ ಮಾಡಿ ಅವರ ನೆರವಿಗೆ ಬರುತ್ತದೆಂದೂ ನಿರ್ಧರಿಸಲಾಯಿತು.

ಇದನ್ನೆಲ್ಲ ಕೇಳಿ, ಹಲವಾರು ದಶಕಗಳಿಂದ ರೈತರ ಮಿತ್ರನಾಗಿ ಕಾರ್ಯನಿರ್ವಹಿಸಿದ್ದ, ಮೈಸೂರು ರಾಜ್ಯ ಪ್ರದೇಶದಲ್ಲಿ ಐತಿಹಾಸಿಕ ಪಾತ್ರ ಹೊಂದಿರುವ ಮೈ ಶುಗರ್ ಕಂಪನಿ ಉಳಿಯುತ್ತದೆ ಎಂದು ಭಾವಿಸಿ ಅವರೆಲ್ಲಾ ನೆಮ್ಮದಿಯಿಂದ ಮಂಡ್ಯ ಸೇರಿದ್ದರು.

ಇದಾಗಿ ನಾಲ್ಕು ತಿಂಗಳುಗಳಾಗಿವೆ. ಮೈ ಶುಗರ್‌ಗೆ ಬಿಡುಗಡೆ ಮಾಡಬೇಕಿದ್ದ 65 ಕೋಟಿ ರೂಪಾಯಿಗಳಿರಲಿ, ಕನಿಷ್ಠ 65 ರೂಪಾಯಿಗಳೂ ಇಲ್ಲಿಯವರೆಗೂ ಬಿಡುಗಡೆಯಾಗಿಲ್ಲ; ಅದರ ಬಗ್ಗೆ ಕುಮಾರಸ್ವಾಮಿಯಾಗಲಿ, ಯಡಿಯೂರಪ್ಪನಾಗಲಿ, ಅಧಿಕಾರಿಗಳಾಗಲಿ ಮತ್ತೆ ತಲೆ ಕೆಡಿಸಿಕೊಂಡಿಲ್ಲ, ಆದರೆ ಇದೇ ಮಂಡ್ಯದ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳಲಾರಂಭಿಸಿದಾಗ ಇದೇ ಕುಮಾರಸ್ವಾಮಿ "ರೈತರೇ, ಆತ್ಮಹತ್ಯೆ ಮಾಡಿಕೊಳ್ಳಬೇಡಿ. ನನ್ನಲ್ಲಿಗೆ ಬನ್ನಿ, ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇನೆ" ಎಂದರು ಮಾತ್ರವಲ್ಲ, ಅವರನ್ನೆಲ್ಲ ಚರ್ಚೆಗೆಂದು ಬೆಂಗಳೂರಿಗೆ ಆಹ್ವಾನಿಸಿದರು.

ನಾಲ್ಕು ತಿಂಗಳ ಹಿಂದೆ ವಿಧಾನಸೌಧದ ಹವಾನಿಯಂತ್ರಿತ ಹಾಲಿನಲ್ಲಿ ಒಂದು ನಾಟಕ, ಅದಾದನಂತರ ಸೆಂಟ್ರಲ್ ಕಾಲೇಜಿನ ಹವಾನಿಯಂತ್ರಿತ ಸಭಾಂಗಣದಲ್ಲಿ ಮತ್ತೊಂದು ನಾಟಕ. ಒಂದು ದಿನ ನಾಲ್ಕು ಗಂಟೆಗಳ ಚರ್ಚೆ, ಮತ್ತೊಂದು ಬಾರಿ ದಿನವಿಡೀ ಚರ್ಚೆ. ಈ ಎರಡೂ ಕಾರ್ಯಕ್ರಮಗಳಿಂದ ಕುಮಾರಸ್ವಾಮಿಗೆ ಪ್ರಚಾರದ ಮೂಲಕ ಲಾಭ ಸಿಕ್ಕಿತೇ ಹೊರತು ರೈತರಿಗೆ ಸಿಕ್ಕಿದ್ದು ಮತ್ತದೇ ಆತ್ಮಹತ್ಯೆಯ ಹಗ್ಗ.

ಮಂಡ್ಯದ ಒಂದು ಕಂಪನಿಯನ್ನು ಸೆಟ್ಟಾಗಿಸಲಾರದವನು ಇನ್ನು ಇಡೀ ರಾಜ್ಯದ ರೈತರ ಸಮಸ್ಯೆಗಳನ್ನು ಪರಿಹರಿಸುತ್ತಾನೆಯೇ? ಹೋಗಲಿ, ಇವೆರಡೂ ಸಭೆಗಳಾದ ನಂತರ ಕುಮಾರಸ್ವಾಮಿ ನೇತೃತ್ವದ ಸರ್ಕಾರದಿಂದ ರೈತರ ಪರವಾದ ಒಂದೇ ಒಂದು ಯೋಜನೆ, ಚಿಂತನೆ ಹೊರಹೊಮ್ಮಿದೆಯೇ? ಇಲ್ಲವೇ ಇಲ್ಲ. ಈಗಾಗಲೇ ಸಾಲಮನ್ನಾ, ಶೇ. 4 ದರದಲ್ಲಿ ರೈತರಿಗೆ ಸಾಲ ಎಂಬ ಯೋಜನೆಗಳೂ ಪೊಳ್ಳು ಎಂದು ಎಲ್ಲರಿಗೆ ಗೊತ್ತಾಗಿದೆ. ಆದರೆ ಇಂತಹ ಢೋಂಗಿ ನಾಟಕಗಳಲ್ಲೇ ಜನರ ಸಮಯ ಮತ್ತು ಶ್ರಮವನ್ನೂ, ಸರ್ಕಾರದ ತಿಜೋರಿಯಲ್ಲಿರುವ ಜನರ ಹಣವನ್ನು ಜಾಹೀರಾತುಗಳಿಗಾಗಿ ಪೋಲು ಮಾಡುವುದನ್ನೂ ಮಾತ್ರ ಸರ್ಕಾರ ನಿಲ್ಲಿಸಿಲ್ಲ!

ಯಡಿಯೂರಪ್ಪನ ಮಾವನ ಮನೆ ಗಂಟಾಗಲಿ, ಕುಮಾರಸ್ವಾಮಿಯ ಅಪ್ಪನ ಮನೆ ಗಂಟಾಗಲಿ ಇಂತಹ ನಾಟಕಗಳಿಗೆ ಹೋಗುವುದಿಲ್ಲವಲ್ಲ... ಅವರಿಗಿನ್ನಾಕೆ ಚಿಂತೆ? ಇದೇ ಕಾರಣಕ್ಕೆ ಇರಬೇಕು, ಮಣ್ಣಿನ ಮಗ ಎಂಬ ಸ್ವಯಂಘೋಷಿತ ದೇವೇಗೌಡ ಕೂಡ "ರೈತರು ಸತ್ತರೆ ಸಾಯಲಿ ಬಿಡ್ರಿ" ಎಂದು ನೇಗಿಲಯೋಗಿಗಳ ಬಗ್ಗೆ ಅಸಡ್ಡೆಯಿಂದ ಹೇಳಿದ್ದು.

ಅಂದಹಾಗೆ ಗೌಡರ ಫ್ಯಾಮಿಲಿಯ ಸ್ವಾರ್ಥ ಯಾವ ಮಟ್ಟದ್ದು ಎಂದರೆ ಮಂಡ್ಯದ ರೈತರು ಸಾಯಲಿ, ಆದರೆ ತಮಗೆ ಓಟು ನೀಡುವ ರೈತರಾದರೂ



ಬಚಾವಾಗಲಿ (ಉದ್ಧಾರ ಆಗುವುದು ದೂರದ ಮಾತು, ಬಿಡಿ!) ಎಂಬ ಧೋರಣೆ ಅವರದ್ದು. ಅದಕ್ಕೆಂದೇ ಅವರೊಂದು ತಂತ್ರವನ್ನು ಹೂಡಿದರು. ಇಲ್ಲಿ ಮಂಡ್ಯದಲ್ಲಿ, ಕಬ್ಬು ಬೆಳೆದ ರೈತ ಸಕ್ಕರೆ ಕಾರ್ಖಾನೆಗಳು ತನ್ನ ಬೆಳೆಯನ್ನು ಖರೀದಿಸುತ್ತಿಲ್ಲ ಎಂದು ಕಂಗಾಲಾಗಿ ಕುಳಿತಿದ್ದರೆ, ಪಕ್ಕದ ಹಾಸನ ಜಿಲ್ಲೆಯ ಹಲವು ಮತ ಕ್ಷೇತ್ರಗಳಲ್ಲಿ (ಇಡೀ ಜಿಲ್ಲೆಯಲ್ಲಲ್ಲ) ಒಂದು ಅಚ್ಚರಿ ಮೂಡಿಸುವ ಪ್ರಸಂಗ ನಡೆಯಿತು.

ಹೊಳೆನರಸೀಪುರ ಮತ್ತು ಹಾಸನ ವಿಧಾನಸಭಾ ಕ್ಷೇತ್ರದಲ್ಲಿನ ರೈತರ ಕಬ್ಬು ಬೆಳೆಗಳನ್ನು ಕೆ.ಆರ್. ಪೇಟೆಯಲ್ಲಿ ಸಕ್ಕರೆ ಕಾರ್ಖಾನೆಗಳು ಖರೀದಿಸುವಂತೆ ಮಾಡಿ ಈ ರೈತರು ಆತ್ಮಹತ್ಯೆಗೆ ಶರಣಾಗಿ ತಮ್ಮ ಮಣ್ಣಿನ ಮಗ, ಮಣ್ಣಿನ ಮೊಮ್ಮಗ ಎಂಬ ಮುಖವಾಡಗಳು ಕಳಚಿ ಬೀಳದಂತೆ ನೋಡಿಕೊಂಡರು. ಹೀಗೆ ಹೊಳೆನರಸೀಪುರ ಮತ್ತು ಹಾಸನ ವಿಧಾನಸಭಾ ಕ್ಷೇತ್ರದಿಂದ ಕಬ್ಬನ್ನು ಖರೀದಿಸಿ ಅರೆದ ಕಾರ್ಖಾನೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಿದ್ದ ಅದೆಷ್ಟು ಆದಾಯಕ್ಕೆ ತಿಲಾಂಜಲಿ ಇಡಲಾಯಿತೋ, ಇನ್ನೂ ಗೊತ್ತಾಗಿಲ್ಲ.

ಇದೆಲ್ಲದರ ಅರ್ಥ ಇಷ್ಟೇ: ರೈತರು ಹಾಳಾಗಲಿ, ತಾವು ಮತ್ತು ತಮ್ಮ ಅಧಿಕಾರ ಉಳಿದರೆ ಸಾಕು! ಇಂಥವರನ್ನು ಯಾವ ಬಾಯಲ್ಲಿ ಮಣ್ಣಿನ ಮಗ/ಮೊಮ್ಮಗ, ರೈತರ ಬಂಧು, ರೈತಪರ ಹೋರಾಟಗಾರ ಎಂದು ಕರೆಯಲು ಸಾಧ್ಯ?

ಇದು ದಕ್ಷಿಣ ಕರ್ನಾಟಕದ ನತದೃಷ್ಟ ರೈತರ ಗೋಳಾಯಿತು. ಉತ್ತರ ಕರ್ನಾಟಕ ರೈತರ ಕತೆ ಇದಕ್ಕಿಂತ ಭಿನ್ನವಾಗಿಲ್ಲ. ಅಲ್ಲೂ ಕೂಡ ಹಲವಾರು ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡರು. ಹೀಗೆ ಸಾವಿಗೆ ಶರಣಾದ ಹಲವಾರು ರೈತರು ಬೆಳೆದಿದ್ದ ಕಬ್ಬನ್ನು ಖರೀದಿಸಲು ನಿರಾಕರಿಸಿದ್ದ ನಾಲ್ಕು ಖಾಸಗಿ ಸಕ್ಕರೆ ಕಾರ್ಖಾನೆಗಳು ನೆರೆಯ ಮಹಾರಾಷ್ಟ್ರ ರೈತರು ಬೆಳೆದಿದ್ದ ಕಬ್ಬನ್ನು ಖರೀದಿಸಿ ಅರೆದಿದ್ದರು. ಆ ಮೂಲಕ ಕನ್ನಡ ನಾಡಿನ ರೈತರಿಗೆ ನೆರವಾಗದಿದ್ದ ಆ ಕಂಪನಿಗಳು ಮಹಾರಾಷ್ಟ್ರದ ರೈತರ ನೆರವಿಗೆ ನಿಂತಿದ್ದವು.

ಇದರ ಬಗ್ಗೆ ಕುಮಾರಸ್ವಾಮಿ, ಯಡಿಯೂರಪ್ಪನ ಸರ್ಕಾರವೇನೋ COD ತನಿಖೆಗೆ ಆದೇಶಿಸಿತ್ತು, ಆದರೆ ಆ ತನಿಖೆ ಏನಾಯಿತು? ಯಾವ ಸಕ್ಕರೆ ಕಾರ್ಖಾನೆಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಯಿತು? ಇಂತಹ ವಿಷಯಗಳ ಬಗ್ಗೆ ನಮ್ಮ ನಿಮ್ಮೆಲ್ಲರಿಗಿರಲಿ, ಸ್ವತಃ ಕುಮಾರಸ್ವಾಮಿ-ಯಡಿಯೂರಪ್ಪ ಜೋಡಿಗೂ ಗೊತ್ತಿಲ್ಲ, ಗೊತ್ತಾಗುವುದೂ ಬೇಕಿಲ್ಲ!

ರೈತರ ಆತ್ಮಹತ್ಯೆ ಜೂನ್, ಜುಲೈ ತಿಂಗಳ ಸುದ್ದಿ. ಅದೀಗ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಹೊರತಾಗಿ ಎಲ್ಲರೂ ಮರೆತಿರುವ ವಿಷಯ (ನಮ್ಮಂತಹ ಕಿಡಿಗೇಡಿಗಳು ಮಾತ್ರ ಅಂತಹ ವಿಷಯಗಳ ಬಗ್ಗೆ ವಿನಾಕಾರಣ ಮಾತಾಡುತ್ತಿರುತ್ತೇವೆ). ಪ್ರಸ್ತುತ ವಿಷಯ ಹಲವಾರು ಜಿಲ್ಲೆಗಳಲ್ಲಿ ನೆರೆ ಹಾವಳಿಗೆ ಅಪಾರ ನಷ್ಟ ಮತ್ತು ನೋವನ್ನು ಕಂಡಿರುವವರದ್ದು. ಪಾಪ, ಅಂತಹ ಜನರ ನೋವಿಗೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಸಕಾರಾತ್ಮಕವಾಗಿಯೇ ಸ್ಪಂದಿಸಿದ್ದಾರೆ, ಏರಿಯಲ್ ಸರ್ವೇ ಮಾಡುವ ಮೂಲಕ. ದಾಂಪತ್ಯ ವಿರಸವಿದ್ದರೂ ಈ ಜೋಡಿ ಅಕ್ಕಪಕ್ಕ ಕೂತು "ಛೆ, ಛೇ, ಎಂತಹ ಅನಾಹುತ" ಎಂಬ ಮುಖ ಭಾವನೆ ಹೊತ್ತು ಸ್ಪಂದಿಸಿದರು. ಅವರ ಈ ಘನಕಾರ್ಯವನ್ನು ಟಿವಿ ಚಾನೆಲ್‌ಗಳೂ, ದಿನಪತ್ರಿಕೆಗಳೂ ಪ್ರಕಟಿಸಿದವು.

ಸಾಮಾನ್ಯವಾಗಿ, ಇಂತಹ ನೈಸರ್ಗಿಕ ದುರಂತಗಳು ಸಂಭವಿಸಿದಾಗ ಆ ಪ್ರದೇಶಗಳಿಗೆ ಸರ್ಕಾರಿ ಅಧಿಕಾರಿಗಳು ಧಾವಿಸುತ್ತಾರೆ, ಜನರ ಅಗತ್ಯಗಳಿಗೆ ಸ್ಪಂದಿಸುತ್ತಾರೆ. ಆದರೆ ಈಗಾಗಿರುವುದು ಏನು? ಅಧಿಕಾರ ಯಾರ ಕೈಗೆ ಹೋಗುತ್ತೋ ಎಂದು ಕಾಯುತ್ತಿರುವ ಅಧಿಕಾರಿಗಳು ತಮ್ಮ ಕುರ್ಚಿಗಳಿಗೆ ಅಂಟಿಕೊಂಡೇ ಕೂತಿದ್ದಾರೆ. ಈ ಮಧ್ಯೆ ಕನಿಷ್ಠ ಗಂಜಿ ಕೇಂದ್ರಗಳೂ ಇಲ್ಲದೆ ಜನ ಕಂಗಾಲಾಗಿದ್ದಾರೆ. ಮತ್ತದೇ "ಸತ್ತರೆ ಸಾಯಲಿ ಬಿಡ್ರೀ" ಎಂಬ ಧೋರಣೆ! ಇಂತಹ ಸರ್ಕಾರ ಪಡೆಯಲಿಕ್ಕೆ ಕನ್ನಡಿಗರು ಅದೆಷ್ಟು ಶತಮಾನಗಳ ಕಾಲ ಪುಣ್ಯ ಮಾಡಿದ್ದರೋ? ಗೋವುಗಳನ್ನು ಸಾಕುವ ಸಾಧನೆಗೆ ಸರ್ಕಾರದಿಂದ ಅನಾಮತ್ತು ಆರು ಕೋಟಿ ರೂಪಾಯಿಗಳನ್ನು ಪಡೆದ ಆ ರಾಘವೇಶ್ವರ ಸ್ವಾಮಿಯೇ ಬಲ್ಲ!

ಮೈ ಶುಗರ್ ಅನ್ನು ಉಳಿಸಲಿಕ್ಕೆ ಒಂದು ರೂಪಾಯಿಯೂ ಇಲ್ಲ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಬಗ್ಗೆ ಕಿಂಚಿತ್ತು ಚಿಂತೆಯೂ ಇಲ್ಲ, ನೆರೆಹಾವಳಿಗೆ ತುತ್ತಾಗಿರುವವರಿಗೆ ಒಂದು ಗಂಜಿ ಕೇಂದ್ರವೂ ಇಲ್ಲ. ಆದರೆ ರಾಜಕಾರಣಿಗಳ ಖಾಸಗಿ ಬ್ಯಾಂಕ್‌ಗಳಾಗಿರುವ ಮಠಗಳಿಗೆ ಅಧಿಕೃತವಾಗಿ ಜನರ ಹಣದಿಂದ ಕೋಟ್ಯಂತರ ರೂಪಾಯಿಗಳು, ರವಿಶಂಕರ್‌ನಂತಹ ವ್ಯಾಪಾರ ಗುರುವಿನ ಜನ್ಮಸ್ಥಳ ರಕ್ಷಿಸಲು ಬಜೆಟ್‌ನಲ್ಲೇ ಹಣ ನಿಗದಿ, ಹೈಟೆಕ್ ರೆಸಾರ್ಟ್‌ಗಳಲ್ಲಿ ನಾಯಕರ ಸಭೆಗಳು!

ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ, ನೆರೆಯ ಹಾವಳಿಯಲ್ಲಿ ಜನರ ಬದುಕೇ ಕೊಚ್ಚಿ ಹೋಗಲಿ, ಕುದುರೆಮುಖ ಆದಿವಾಸಿಗಳ ಪರ ದನಿ ಎತ್ತಿದ್ದ ಪರಮೇಶ್ವರ್ ಪೊಲೀಸರ ಬಂದೂಕಿಗೆ ಬಲಿಯಾಗಲಿ, ಆ ಪ್ರದೇಶದ ಜನ ಪೊಲೀಸರ ಭೀತಿಯಿಂದ ತತ್ತರಿಸಿ ಹೋಗಲಿ, ದಲಿತರಿಗೆ ಮತ್ತು ನಿರ್ಗತಿಕರಿಗೆ ಸಿಗಬೇಕಿದ್ದ ಬಗರ್‌ಹುಕುಂ ಭೂಮಿಯನ್ನು ಆರೋಗ್ಯ ಸಚಿವ ಆರ್. ಅಶೋಕ್ ಮತ್ತಾತನ ಚಡ್ಡಿ ಪಟಾಲಂ ಮುಕ್ಕುತ್ತಿರಲಿ... ಇಂತಹ ಕ್ಷುಲ್ಲಕ ವಿಷಯಗಳನ್ನು ಕಟ್ಟಿಕೊಂಡು ಈ ರಾಜ್ಯದ ನಾಯಕರಿಗೆ, ಮಾಧ್ಯಮಗಳಿಗೆ ಏನಾಗಬೇಕಿದೆ? ಏನೂ ಆಗಬೇಕಿಲ್ಲ. ಅದಕ್ಕೇ ಕುಮಾರಸ್ವಾಮಿ-ಯಡಿಯೂರಪ್ಪ ಇವೆಲ್ಲಕ್ಕಿಂತಲೂ ಮುಖ್ಯವಾದ ಅಧಿಕಾರ ಹಸ್ತಾಂತರದ ಬಗ್ಗೆಯೇ ತಲೆ ಕೆಡಿಸಿಕೊಂಡಿದ್ದಾರೆ. ಜಾತ್ಯತೀತ ಅಂದರೇನು ಎಂದೂ ಗೊತ್ತಿರದ ಅಜ್ಞಾನಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಮಾಡಿದ್ದೆಲ್ಲ ಹುಡುಗಾಟವಾದರೂ "ಮುಖ್ಯಮಂತ್ರಿ ಆಗುವುದು ಹುಡುಗಾಟದ ವಿಷಯವಲ್ಲ" ಎಂದು ಹೇಳುತ್ತಾರೆ. ಇದೇ ಹೊತ್ತಿಗೆ ಜನರ ಹಣದೊಂದಿಗೆ ಚೆಲ್ಲಾಟವಾಡುವುದು ತನ್ನ ಜನ್ಮಸಿದ್ಧ ಹಕ್ಕು ಎಂದೇ ಭಾವಿಸಿರುವ ಯಡಿಯೂರಪ್ಪ "ಹೇಗೆ ಕೊಡಲ್ಲ, ನಾನೂ ನೋಡ್ತಿನಿ" ಎಂಬ ದಾಟಿಯಲ್ಲಿ ಸವಾಲು ಹಾಕುತ್ತಾರೆ.

ಈ ನಿಟ್ಟಿನಲ್ಲೇ ದೇವೇಗೌಡರಾದಿಯಾಗಿ ಎಲ್ಲರೂ ಹೋಮ, ಹವನ, ತಂತ್ರ, ಕುತಂತ್ರ, ರಹಸ್ಯ ಸಭೆ, ಜಾತಿ ರಾಜಕಾರಣ, ನಿರುದ್ಯೋಗಿ ಜಾತಿವಾದಿಗಳ ಒತ್ತಡ, ಲೆಕ್ಕಕ್ಕಿಲ್ಲದ ಮಠಾಧೀಶರ ಶಿಫಾರಸ್ಸು, ಪೇಮೆಂಟ್ ಕೋಟಾದಲ್ಲಿ ಅಧಿಕಾರ, ಮೀಸಲಾತಿ ಕೋಟಾದಲ್ಲಿ ಹುದ್ದೆ, ಯಾವ ಪಕ್ಷ, ಯಾವ ಜಾತಿ, ಯಾವ ಲೆಕ್ಕಾಚಾರ... ಇಂತಹದರಲ್ಲೇ ಮುಳುಗಿಹೋಗಿದ್ದಾರೆ.

ಕುಮಾರಸ್ವಾಮಿಯಾಗಲಿ, ಇನ್ನಾರೇ ಆಗಲಿ ಈ ರಾಜ್ಯದ ಜನರಿಗೆ ಒಳ್ಳೆದಾಗಲಿ ಎಂದು ನಿಷ್ಕಳಂಕವಾಗಿ ಆಶಿಸಿದ್ದಾಗಲಿ, ರಾಜ್ಯದ ಸಮಸ್ಯೆಗಳು ಬಗೆಹರಿಸುವುದಕ್ಕಾಗಿ ನಿಜವಾಗಲೂ ಶ್ರಮಿಸಿದ್ದಾಗಲಿ, ತಮ್ಮ ಸ್ವಾರ್ಥವನ್ನು ಬದಿಗಿಟ್ಟು ರಾಜ್ಯದ ಉದ್ಧಾರದ ಬಗ್ಗೆ ಚಿಂತಿಸಿದ್ದಾಗಲೀ, ಅವೆಲ್ಲವನ್ನು ಕಾರ್ಯರೂಪಕ್ಕೆ ತಂದಿದ್ದ ಉದಾಹರಣೆಯಾಗಲಿ, ಸಿಕ್ಕುತ್ತದೆಯೇ?

ಕಳೆದ ಮೂರು ವಾರಗಳಿಂದ ಆರ್. ಅಶೋಕ್ ಎಂಬ ಚಡ್ಡಿ ಮಂತ್ರಿ ದಲಿತರಿಗೆ, ಭೂರಹಿತರಿಗೆ ಸೇರಬೇಕಿದ್ದ ನೂರಾರು ಎಕರೆ ಭೂಮಿಯನ್ನೂ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಹೇಗೆ ತನ್ನ ಚಡ್ಡಿ ಪಟಾಲಂಗೆ ವಿತರಿಸಿದ್ದಾನೆ ಎಂಬುದರ ಬಗ್ಗೆ ದಾಖಲೆಗಳ ಸಮೇತ ನಮ್ಮ ಹಿರಿಯ ವರದಿಗಾರ ರಾ. ಸೋಮನಾಥ್ ಬರೆದ ತನಿಖಾ ವರದಿಗಳನ್ನು ಪ್ರಕಟಿಸಿದ್ದೇವೆ.

ಹಿಂದೆಲ್ಲಾ ರಾಮಕೃಷ್ಣ ಹೆಗಡೆಯ ಅಳಿಯನ ಐದಾರು ಎಕರೆಯ ರೇವಜೀತು, ಇಪ್ಪತ್ತು ಎಕರೆ NRIHA ಹಗರಣಗಳ ಬಗ್ಗೆ ಪತ್ರಿಕೆ ವರದಿ ಮಾಡಿದ್ದಾಗ ವಿರೋಧ ಪಕ್ಷಗಳು ಕೋಲಾಹಲವನ್ನೇ ಎಬ್ಬಿಸಿದ್ದವು. ಆದರೆ ಈಗ ದೇವೇಗೌಡರ ಸೊಸೆ ಕವಿತಾ ಒಂದೇ ವಾರದಲ್ಲಿ 200 ಎಕರೆ ಭೂಮಿಯನ್ನು ಖರೀದಿಸಿದರೂ, ಒಂದೇ ವರ್ಷದಲ್ಲಿ ನೂರಾರು ಎಕರೆಗಳನ್ನು ಅಶೋಕ್ ತನ್ನ ಹಿಂಬಾಲಕರಿಗೆ ವಿತರಿಸಿದರೂ, ಕಟ್ಟಾ ಸುಬ್ರಮಣ್ಯ ನಾಯ್ಡು ಬೆಂಗಳೂರು ಅಭಿವೃದ್ಧಿಯೇ ತನ್ನ ಅಭಿವೃದ್ಧಿ ಎಂದು ಭಾವಿಸಿದ್ದರೂ ಯಾರೂ ಸೊಲ್ಲೆತ್ತುತ್ತಿಲ್ಲ, ಇದು ಭ್ರಷ್ಟಾಚಾರ ಎಂದು ಗೊತ್ತಾದ ಮೇಲೂ ದನಿ ಎತ್ತುತ್ತಿಲ್ಲ.

ಯಾಕೆ ಗೊತ್ತಾ? ಎಸ್.ಎಂ. ಕೃಷ್ಣ ತನ್ನ ಅಳಿಯನ ಹೆಸರಲ್ಲಿ ಇಂತದ್ದೇ ಅವ್ಯವಹಾರಗಳಲ್ಲಿ ತೊಡಗಿದ್ದರೆ, ಧರಂಸಿಂಗ್ ತನ್ನ ಆಪ್ತ ವಲಯದಿಂದ ಹಿಡಿದು ಮನೆ ಕೆಲಸದವಳಿಗೂ ಕೋಟ್ಯಂತರ ರೂಪಾಯಿ ಮೌಲ್ಯದ ಸೈಟುಗಳನ್ನು ಹಂಚಿದ್ದರು. ಇಂಥವರಲ್ಲಿ ದೇವೇಗೌಡ ಮತ್ತಾತನ ವಂಶದವರು, ಯಡಿಯೂರಪ್ಪ ಮತ್ತಾತನ ಸಂಘ ಪರಿವಾರದ ದಂಡಪಿಂಡಗಳು ಎಸಗುತ್ತಿರುವ ಅವ್ಯವಹಾರಗಳ ಬಗ್ಗೆ ಸೊಲ್ಲೆತ್ತುವ ನೈತಿಕತೆ ಉಳಿದಿರುವುದಾದರೂ ಹೇಗೆ?

ಕರ್ನಾಟಕ ಇವತ್ತು ಹರಾಜಾಗುತ್ತಿದೆ. ಹೀಗೆ ರಾಜ್ಯವನ್ನು ಹರಾಜಿಗಿಟ್ಟು ತಮ್ಮ ಜೇಬುಗಳನ್ನು ತುಂಬಿಸಿಕೊಳ್ಳುತ್ತಿರುವವರು ಜಾತಿವಾದಿ ಜನತಾದಳ, ಕೋಮುವಾದಿ ಬಿಜೆಪಿ, ದಿಕ್ಕುದೆಸೆ ಇಲ್ಲದಂತಿರುವ ಕಾಂಗ್ರೆಸ್‌ನ ನಾಯಕರು. ಈ ಪ್ರಕ್ರಿಯೆಯಲ್ಲಿ ನಿರ್ಗತಿಕರಾಗುತ್ತಿರುವವರು ತಮ್ಮ ಭೂಮಿ ಮತ್ತು ಬದುಕನ್ನು ಕಳೆದುಕೊಳ್ಳುತ್ತಿರುವ ನಿಜವಾದ ಮಣ್ಣಿನ ಮಕ್ಕಳು.

ಮೊನ್ನೆ ತಾನೇ ಈ ರಾಜ್ಯವನ್ನು ಒಳಗೊಂಡಂತೆ ದೇಶಕ್ಕೆ ಸ್ವಾತಂತ್ರ್ಯ ಬಂದ 60 ವರ್ಷಗಳನ್ನು ಆಚರಿಸಲಾಯಿತು. ಅಂದು, ಆಗಸ್ಟ್ 15 ರಂದು ಆಫೀಸಿಗೆ ಬರುತ್ತಿದ್ದಾಗ ಒಂದು ದೃಶ್ಯವನ್ನು ಕಂಡೆ. ಕೇಸರಿ ಬಣ್ಣದ ಸೀರೆಯನ್ನು ತೊಟ್ಟಿದ್ದ, ತನ್ನ ಎಡಗೈಯಲ್ಲಿ ತ್ರಿವರ್ಣದ ಬ್ಯಾಂಡ್ ಒಂದನ್ನು ಧರಿಸಿದ್ದ, ಸೀರೆಯ ಸೆರಗಿನ ಮೇಲೆ ಭಾರತದ ಪುಟ್ಟಧ್ವಜವನ್ನು ಸಿಕ್ಕಿಸಿಕೊಂಡಿದ್ದ ಮಹಿಳೆಯೊಬ್ಬಳು ಸಿಗ್ನಲ್ ಲೈಟ್‌ನಲ್ಲಿ ಭಿಕ್ಷೆ ಬೇಡುತ್ತಿದ್ದಳು. ಅಂದು ತಮ್ಮ ಆಟೋಗಳಿಗೆ, ದ್ವಿಚಕ್ರ ವಾಹನಗಳಿಗೆ, ಕಾರಿನ ಮುಂಭಾಗಗಳಿಗೆ ಭಾರತದ ಧ್ವಜವನ್ನು ಸಿಕ್ಕಿಸಿಕೊಂಡಿದ್ದವರೆಲ್ಲರೂ ಆಕೆಗೆ ಹಣ ನೀಡುತ್ತಿದ್ದರು. ಈ ದೇಶದ ಸ್ವಾತಂತ್ರ್ಯವನ್ನೂ, ತಮ್ಮ ದೇಶಪ್ರೇಮವನ್ನೂ ಪ್ರದರ್ಶಿಸುವಂತೆ. ಆಕೆ ನನ್ನ ಕಾರ್ ಹತ್ತಿರ ಬಂದು ನಿಂತಳು. ಅವಳು ಹಿಜಡಾ ಆಗಿದ್ದಳು. ಸ್ವಾತಂತ್ರ್ಯಾಭಿಮಾನ, ದೇಶಪ್ರೇಮದ ನೆಪದಲ್ಲಿ ಹಣ ಕೇಳಲು ಆಕೆ ಮಾಡಿದ್ದ ತಂತ್ರ ಕಂಡು ಬೆರಗಾಯಿತು. ಇದೆಲ್ಲದರ ಬಗ್ಗೆ ಚಿಂತಿಸುತ್ತಲೇ ಆಕೆಗೆ ಒಂದಿಷ್ಟು ಚಿಲ್ಲರೆ ನೀಡಿ ಮುಂದೆ ಸಾಗಿದೆ.

ಆ ಹಿಜಡಾಳಾದರೋ ತನ್ನ ಜೀವನೋಪಾಯಕ್ಕೆ ದೇಶಾಭಿಮಾನದ ತಂತ್ರ ಹೂಡಿ ಹಣ ಗಳಿಸುತ್ತಿದ್ದಳು. ಆದರೆ ತಮ್ಮ ತಮ್ಮ ಸ್ವಾರ್ಥಕ್ಕಾಗಿ ಈ ರಾಜ್ಯದ ಜನರನ್ನೇ ಹರಾಜು ಹಾಕುತ್ತಿರುವ ಈ ಕೋ-ಜಾ ಸರ್ಕಾರಕ್ಕೆ ನಾವೆಲ್ಲ ನಂಬಿಕೆಯ, ಬೆಂಬಲದ ಭಿಕ್ಷೆಯ ನೀಡಿದ್ದು ಸಾಕು ಎನಿಸುತ್ತಿದೆ......

-ಗೌರಿ ಲಂಕೇಶ್

ಮಾನವನ ಪರಮ ವೈರಿಯೇ ಸರಕಾರ -ಜಾನ್ ಗಾಲ್ಟ್

ಕೋಮುವಾದಿ ಯಡ್ಡಿ ಸಿಎಂಗಿರಿ


ತಿರುಕನ ಕನಸು

ಶ್ರೀನಿವಾಸ್ ಯಡಿಯೂರಪ್ಪ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಆಗುವುದಿಲ್ಲ....!

ಹಾಗೆಂದು ಜಾತ್ಯತೀತ ದಳದ ಶಾಸಕರು ತೀರ್ಮಾನಿಸಿದ್ದಾರೆ.

ಕರ್ನಾಟಕದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರಕೂಡದೆಂದು ಕಾಂಗ್ರೆಸ್ ಬಯಸಿದೆ. ಇದೆಲ್ಲದಕ್ಕಿಂತಾ ಮಜಾ ಏನೆಂದರೆ ಬಿಜೆಪಿಗೆ ಅಧಿಕಾರ ಸಿಗುತ್ತೊ ಬಿಡುತ್ತೋ, ಯಡಿಯೂರಪ್ಪ ಮಾತ್ರ ಸಿಎಂ ಆಗಕೂಡದೆಂದು ಬಿಜೆಪಿಯ ಬಹುತೇಕ ಶಾಸಕರೇ ಆಶಿಸುತ್ತಿದ್ದಾರೆ. ಇಷ್ಟಾದ ಮೇಲೆ ಸಿಎಂ ಆಗುತ್ತೇನೆಂಬ ಯಡ್ಡಿಯ ಕನಸು ತಿರುಕನ ಕನಸಾಗದೇ ಇರುತ್ತದೆಯೇ?

ರಾಜ್ಯ ರಾಜಕೀಯದಲ್ಲಿ ಕಳೆದ ಒಂದು ವಾರದ



ಬೆಳವಣಿಗೆಯ ಒಟ್ಟು ಸಾರಾಂಶ ಇದು. ಎಲ್ಲಾ ರಾಜಕೀಯ ಪಕ್ಷಗಳ ನಿಲುವು-ಚಟುವಟಿಕೆಗಳ ಟ್ರೆಂಡ್ ನೋಡುತ್ತಿದ್ದರೆ ಹೊಸ ರಾಜ್ಯಪಾಲರು ಅಧಿಕಾರ ವಹಿಸಿಕೊಂಡ ಒಂದು ವಾರದಲ್ಲೇ ಕೆಲ ಹೊಸ ಬೆಳವಣಿಗೆಗಳು ಕಾಣಿಸುವುದು ಖಚಿತ.

ಎಸ್.ಎಂ. ಕೃಷ್ಣ, ಸಿದ್ಧರಾಮಯ್ಯ, ಡಿ.ಕೆ. ಶಿವಕುಮಾರ್ ಮುಂತಾದವರು ಏನೇ ವಿರೋಧ ವ್ಯಕ್ತಪಡಿಸಿದರೂ ಜೆಡಿಎಸ್ ಜೊತೆಗಿನ ಮರು ಮೈತ್ರಿ ಸಾಧ್ಯತೆಯನ್ನು ಸೋನಿಯಾ ಗಾಂಧಿ ಪೂರ್ತಿ ತಳ್ಳಿ ಹಾಕಿಲ್ಲ ಎಂಬುದು ಸ್ಪಷ್ಟವಾಗೇ ಕಾಣುತ್ತಿದೆ.

ಬಿಜೆಪಿಗಳಿಗೇ ಯಡ್ಡಿ ಬೇಡ


ಅಧಿಕಾರ ಹಸ್ತಾಂತರಕ್ಕೆ ನಾವು ರೆಡಿ. ಆದರೆ ಯಡಿಯೂರಪ್ಪ ಸಿಎಂ ಆಗಲು ಅವರ ಪಾರ್ಟಿ ಶಾಸಕರೇ ಒಪ್ಪಬೇಕಲ್ಲ ಎಂಬರ್ಥದ ಮಾತುಗಳನ್ನು ಕುಮಾರಸ್ವಾಮಿ ಒಮ್ಮೆ ಹೇಳುವವರೆಗೂ ಯಾರಿಗೂ ಆ ಪಕ್ಷದೊಳಗಿನ ಮುಸುಕಿನ ಗುದ್ದಾಟದ ಸ್ಪಷ್ಟ ಚಿತ್ರಣ ಇರಲಿಲ್ಲ ಎಂದೇ ಹೇಳಬಹುದು. ಯಡ್ಡಿ ವಿರುದ್ಧ ಅನಂತಕುಮಾರ್, ಅರವಿಂದ ಲಿಂಬಾವಳಿ, ಮುಖ್ಯಮಂತ್ರಿ ಚಂದ್ರು, ಆನೇಕಲ್ ನಾರಾಯಣಸ್ವಾಮಿ ಮುಂತಾದವರಿದ್ದಾರೆಂಬುದು ಗೊತ್ತಿರುವ ವಿಚಾರ. ಆದರೆ ಬಹಿರಂಗವಾಗಿರದ ಇನ್ನೊಂದು ಸಂಗತಿ ಏನೆಂದರೆ ಅದೇ ಬಿಜೆಪಿಯ ಶಾಸಕರಾದ ಬನ್ನೂರಿನ ಸುನೀತಾ ವೀರಪ್ಪಗೌಡ, ಹೊಸನಗರದ ಬೇಳೂರು ಗೋಪಾಲಕೃಷ್ಣ ವಿರಾಜಪೇಟೆಯ ಬಸವರಾಜು, ಅನಿಲ್ ಲಾಡು, ಮೈಸೂರಿನ ಶಂಕರಲಿಂಗೇಗೌಡ, ಬಸವಣ್ಣಪ್ಪಗಳಿಗೆ ತಮ್ಮ ಪಾರ್ಟಿ ಲೀಡರ್ ಯಡ್ಡಿಗಿಂತ ಕುಮಾರಸ್ವಾಮಿ ಜೊತೆಗೆ ಹೆಚ್ಚು ಒಡನಾಟ, ಆಪ್ತತೆ ಇದೆ. ಇದರಲ್ಲಿ ಮರಳು ಸಾಗಣೆ, ಅದಿರು ಪಂಥ, ರಿಯಲ್ ಎಸ್ಟೇಟ್ ವ್ಯವಹಾರಗಳೆಂಬ ಲಾಭ-ಲೋಭಗಳಿರಡೂ ಇವೆ. ಹಾಲಿ 79 ಬಿಜೆಪಿ ಶಾಸಕರ ಪೈಕಿ ಕನಿಷ್ಠ 10 ಜನ ಕುಮಾರಸ್ವಾಮಿ ಮೂಲಕ ಕೋಟಿಗಟ್ಟಲೆ ಲಾಭ ತರುವ ತರೇವಾರಿ ಅನುಕೂಲತೆಗಳನ್ನು ಪಡೆದುಕೊಂಡಿದ್ದಾರೆ. ಉಳಿದಂತೆ ಒರಿಜಿನಲ್ ಬಿಜೆಪಿ ಅಲ್ಲದ ಹದಿನೆಂಟಿಪ್ಪತ್ತು ಮಂದಿ ಶಾಸಕರು ಎಲೆಕ್ಷನ್ ಟೈಂನಲ್ಲಿ ಬಿಜೆಪಿಗೆ ಕಾಲಿಟ್ಟು ತಮ್ಮ ಸ್ವಂತ ಶಕ್ತಿಯಿಂದ ಬಡಿದಾಡಿ ಶಾಸಕರಾಗಿರುವವರು. ಬಿಜೆಪಿಯ ಚೆಡ್ಡಿ ಬುದ್ಧಿ ಇರದ ಇವರಿಗೆಲ್ಲಾ ತಕ್ಷಣದಲ್ಲಿ ಎಲೆಕ್ಷನ್ ಬೇಕಾಗಿಲ್ಲ, ಯಡ್ಡಿ ಸೀಕು ಬೇಡಗಳೂ ಅವರ ಆದ್ಯತೆಯಲ್ಲ, ಕುಮಾರಸ್ವಾಮಿಯಿಂದ ಲಾಭ ಸಿಗುವುದಾದರೆ ಅವರೇ





ಸಿಎಂ ಆಗಿ ಮುಂದುವರೆಯಲಿ ಬಿಡಿ. ಇಲ್ಲಿದ್ರೆ ಗೌರ್ಮೆಂಟ್ ಡಿಸಾಲ್ವ್ ಆಗಿಬಿಟ್ಟೀತೆಂಬ ಆತಂಕ ಅವರಿಗೆ. ಇದೆಲ್ಲಕ್ಕಿಂತ ವಿಶೇಷ ಸಂಗತಿ ಏನೆಂದರೆ ಯಡ್ಡಿ ಬೇಡ ಕುಮಾರಸ್ವಾಮಿಯೇ ಸಿಎಂ ಆಗಿ ಮುಂದುವರೆಯಲಿ ಎಂದು ಅಶೋಕ್ ಹಾಗೂ ಕಟ್ಟಾನಾಯ್ಡು ನಿಲುವು ತಾಳಿರುವುದು. ಕುಮಾರಸ್ವಾಮಿ ಸಿಎಂ ಆದ ಮೇಲೆ ಸಾವಿರಾರು ಕೋಟಿಗಳ ರಿಯಲ್ ಎಸ್ಟೇಟ್ ಡೀಲ್‌ಗಳನ್ನು ನಡೆಸಿರುವ ಇವರಿಬ್ಬರಿಗೂ ಅಧಿಕಾರ ಹಸ್ತಾಂತರವಾದರೆ ತಮ್ಮ ಖಾತೆಗಳಿಗೂ ಹಾಗೂ ವ್ಯವಹಾರಗಳಿಗೂ ಧಕ್ಕೆ ಎಂಬ ಲೆಕ್ಕಾಚಾರಗಳಿವೆ. ಈಗ ನಡೆದುಕೊಂಡು ಹೋಗುತ್ತಿರುವ ವ್ಯವಸ್ಥೆಯನ್ನೇನಾದರೂ ಬದಲಿಸಲು ಹೋದರೆ ಇರೋದೂ ಕೈಬಿಟ್ಟು ಹೋಗುತ್ತಲ್ಲಾ ಅಂತ ಬಹುತೇಕರ ಸಂಕಟ.

ಈ ಬೆಳವಣಿಗೆಗಳ ಮಧ್ಯೆ ಬಿಜೆಪಿ ಕಾರ್ಯಕಾರಿಣಿಯ ಸಭೆಯೊಂದು ನಡೆದು, ಅನಿವಾರ್ಯವಾದರೆ ಯಡ್ಡಿ ಕಾರಣಕ್ಕೇ ಅಧಿಕಾರ ಹಸ್ತಾಂತರ ಆಗುವುದಿಲ್ಲ ಎಂಬ ಪರಿಸ್ಥಿತಿ ಉದ್ಭವಿಸಿದಲ್ಲಿ ಪರ್ಯಾಯ ಸಿಎಂ ಕ್ಯಾಂಡಿಡೇಟುಗಳಾಗಿ ಈಶ್ವರಪ್ಪ ಜಗದೀಶ್ ಶೆಟ್ಟರ್‌ರವರ ಹೆಸರನ್ನು ಪರಿಗಣಿಸಲಾಗಿತ್ತು. ಈ ಸುದ್ದಿ ಕೇಳಿ ಥ್ರಿಲ್ಲಾದ ಕಟ್ಟಾನಾಯ್ಡು ತನ್ನ ಮಗನ ಮದುವೆ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಿ ನೇರ ದೆಹಲಿಗೆ ಹೋಗಿ ಪೇಮೆಂಟ್ ಕೋಟಾದಲ್ಲಿ ತನ್ನನ್ನು ಸಿಎಂ ಹುದ್ದೆಗೆ ಪರಿಗಣಿಸುವಂತೆ ಅರ್ಜಿ ಹಾಕಿ ಬಂದಿದ್ದಾರೆ.



ಒಟ್ಟಾರೆ ಬಿಜೆಪಿಯೊಳಗೆ ಅಧಿಕಾರ ಹಸ್ತಾಂತರವೆಂಬುದು ಪಾರ್ಟಿಗೆ ಸಂಬಂಧಿಸಿದ್ದು ಎಂಬುದಕ್ಕಿಂತ ಕೇವಲ ಯಡಿಯೂರಪ್ಪನ ವೈಯಕ್ತಿಕ ವ್ಯವಹಾರ ಎಂಬ ಭಾವನೆ ಬೆಳೆದು ಬಿಟ್ಟಿದೆ. ಬಿಜೆಪಿ ಎಂಬ ಮುರುಕು ಧರ್ಮ ಶಾಲೆಯಲ್ಲಿ ಸಿಎಂ ಕನಸು ಕಾಣುತ್ತಾ ಮಲಗಿರುವ ಯಡ್ಡಿ ಪರಿಸ್ಥಿತಿ ಇದು.

ಕಾಂಗ್ರೆಸ್ ಚಿಕ್ಕಟ್ಟುಗಳು

ಆಗಸ್ಟ್ 16 ರಂದು ದೆಹಲಿಗೆ ಹೋಗಿದ್ದ ಎರಡು ಡಜನ್ ಕಾಂಗ್ರೆಸ್ ಶಾಸಕರು ಗೌಡರೊಂದಿಗೆ ಯಾವ ಕಾರಣಕ್ಕೂ ಮರುಮೈತ್ರಿ ಬೇಡ ಎಂದೇ ಸೋನಿಯಾಗೆ ಅಹವಾಲು ಒಪ್ಪಿಸಿ ಬಂದಿದ್ದಾರೆ. ಸೋನಿಯಾ ಭೇಟಿಗೂ ಮೊದಲು ಆಕೆಯ ಆಪ್ತ ವಲಯದ ಮಾಧವ ನಂಬಿಯಾರ್ ಪಿಳ್ಳೆ ಜೊತೆ ಭೇಟಿಯಾಗಬೇಕಾಗಿ ಬಂದ ಡಿಕೆ ತಂಡ ಏನೆಲ್ಲಾ ತರ್ಕ, ವಿಶ್ಲೇಷಣೆ ನೀಡಿದ್ದರೂ ಸಹ ಅಂತಿಮವಾಗಿ ಸೋನಿಯಾ ಬಾಯಿಂದ "ಮೈತ್ರಿ ಸಾಧ್ಯತೆ ಖಂಡಿತಾ ಇಲ್ಲ" ಎನ್ನುವ ಮಾತು ಬರಲೇ ಇಲ್ಲ. ಈ ನಿಯೋಗದವರ ಅಹವಾಲನ್ನು ಕೇವಲ ಎರಡು ನಿಮಿಷ ಕೇಳಿದ ಸೋನಿಯಾ ಇಂಡೋ-ಅಮೆರಿಕನ್ ಅಣು ಒಪ್ಪಂದದ ಬಗ್ಗೆ ಸಿಪಿಐ-ಸಿಪಿಐಂ ವಿರೋಧದ ಬಗ್ಗೆಯೇ ಜಾಸ್ತಿ ಟೆನ್ಸ್ ಆಗಿದ್ದರು. ಹಾಗೆ ಹೇಳಬೇಕೆಂದರೆ ಜೆಡಿಎಸ್‌ನೊಂದಿಗಿನ ಮರುಮೈತ್ರಿ ಸಾಧ್ಯತೆಗಳು ಕೇಂದ್ರದ ಯುಪಿಎ ಸರ್ಕಾರದ ಅಳಿವು ಉಳಿವಿನ ವಿದ್ಯಾಮಾನಗಳ ಮೇಲೂ ಅವಲಂಬಿಸಿವೆ. ಸೋನಿಯಾಗೀಗ ದೇಶಾದ್ಯಂತ ಇತರ ಪಕ್ಷಗಳೊಂದಿಗೆ ಮೈತ್ರಿ ಬೇಕಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಎದುರು ಯುಪಿಎ ಮೈತ್ರಿಕೂಟ ಬಲಿಷ್ಠಗೊಳಿಸುವುದು ಹಾಗೂ ಚಂದ್ರಬಾಬು ನಾಯ್ಡು ಜಯಲಲಿತಾ ಕಟ್ಟಲು ಯತ್ನಿಸುತ್ತಿರುವ



ಮೂರನೇ ನ್ಯಾಷನಲ್ ಫ್ರಂಟ್‌ಗೆ ಗೌಡರೂ ಹೋಗದಂತೆ ತಡೆಯಲು ಕಾಂಗ್ರೆಸ್‌ಗೆ ಈ ಮರುಮೈತ್ರಿ ಅಗತ್ಯವಿರಬಹುದು. ಅಂತ ಸಂದರ್ಭ ಬಂದಾಗ ಡಿ.ಕೆ., ಸಿದ್ಧರಾಮಯ್ಯ, ಎಸ್.ಎಂ. ಕೃಷ್ಣರಂಥವರ ವಿರೋಧಗಳು ಲೆಕ್ಕಕ್ಕೇ ಬರುವುದಿಲ್ಲ ಎಂಬುದು ರಾಜಕಾರಣ ಬಲ್ಲವರಿಗೆ ಗೊತ್ತಿದೆ. ದೇವೇಗೌಡರಿಗಂತೂ ಇನ್ನೂ ಚೆನ್ನಾಗಿ ಈ **equation** ಅರ್ಥವಾಗುತ್ತವೆ. ಗೋವಾದಂತಹ ಜುಜುಬಿ 40 ಶಾಸಕ ಬಲದ ಚಿಕ್ಕ ರಾಜ್ಯದಲ್ಲೇ ಅಧಿಕಾರ ಉಳಿಸಿಕೊಳ್ಳಲು ಎಲ್ಲಾ ರೀತಿಯ ಸರ್ಕಸ್ ಮಾಡಿ ಗೆದ್ದ ಕಾಂಗ್ರೆಸ್ ಹೈಕಮಾಂಡ್ ಇನ್ನು ಕರ್ನಾಟಕದಂತಹ ದೊಡ್ಡ ರಾಜ್ಯದಲ್ಲಿ ಅಧಿಕಾರವೇ ಹುಡುಕಿಕೊಂಡು ಬಂದರೆ ಬೇಡ ಅನ್ನುವ ಸ್ಥಿತಿಯಲ್ಲಿಲ್ಲ.

ಕಾಂಗ್ರೆಸ್-ಜೆಡಿಎಸ್ ಮರುಮೈತ್ರಿ ಸಂಬಂಧ ಬಗೆಹರಿಯಬೇಕಾದರೆ ಒಂದೆರಡು ಪ್ರಮುಖ ವಿಚಾರಗಳಿವೆ. ಆದರಲ್ಲಿ ಮುಂದಿನ ಮುಖ್ಯಮಂತ್ರಿ ಯಾವ ಪಾರ್ಟಿಯವರು ಎಂಬುದೇ ಪ್ರಮುಖವಾದದ್ದು.

ಗೌಡರ ಕೈಲಿರುವ ಅಸ್ತ್ರಗಳು

ಬಿಜೆಪಿಯಿಂದ ಬಿಡಿಸಿಕೊಳ್ಳುವಾಗ ಜೆಡಿಎಸ್‌ಗೆ ಹೆಚ್ಚು ಹಾನಿಯಾಗದಂತೆ ಏನೇನು ಮಾಡಬೇಕೆಂದು ದೇವೇಗೌಡ ಈಗಾಗಲೇ ಸ್ಕೆಚ್ ರೆಡಿ ಮಾಡಿಕೊಂಡಿದ್ದಾರೆ. ಮಂಗಳೂರಿನಲ್ಲಿ ಬಿಜೆಪಿಗಳು ನಡೆಸಿದ ಗಲಭೆ, ಹಿಂಸಾಚಾರಗಳ ಬಗ್ಗೆ ಸಿಓಡಿ ತನಿಖೆ ಮಾಡಿಸಿ ಅದರ ವರದಿಯನ್ನು ಗೌಡರು ತಮ್ಮ ಕೈಲಿಟ್ಟುಕೊಂಡಿದ್ದಾರೆ. ಬಿಜೆಪಿ ನಾಯಕತ್ವಕ್ಕೂ ಇದು ಗೊತ್ತಿದೆ. ಇದನ್ನೂ ಸಹ ಸರಿಯಾದ ಸಮಯದಲ್ಲಿ ಉಪಯೋಗಿಸಿಕೊಂಡು ಬಿಜೆಪಿ ಕೋಮುವಾದಿ ಎಂದೂ ಜೆಡಿಎಸ್ ಸೆಕ್ಯೂಲರ್ ಎಂದೂ ಬಿಂಬಿಸಲು ಗೌಡರು ಬಳಸಿಕೊಳ್ಳುವುದು ಗ್ಯಾರಂಟಿ. ಜೊತೆಗೆ ಯಡ್ಡಿ ಬಜೆಟ್‌ನಲ್ಲಿ ಮಠ ಮಂದಿರಗಳಿಗೆ ಕೋಟ್ಯಂತರ ರೂಪಾಯಿ ಅನುದಾನ ನಿಗದಿ ಮಾಡಿದಾಗಲೇ ಅಪಸ್ವರ ತೆಗೆದಿದ್ದ ಜೆಡಿಎಸ್ ಮುಂದೆ ಡೈವೋರ್ಸ್ ಕೇಳುವಾಗ ಅದನ್ನು ಒಂದು ಅಂಶವಾಗಿ ಎತ್ತಿ ತೋರಿಸಲಿದೆ.

ಜೊತೆಗೆ ಕಟ್ಟಾ ನಾಯ್ಡು ತನ್ನ ಬೃಹತ್ ಕೈಗಾರಿಕಾ ಇಲಾಖೆ ಮೂಲಕ ನಡೆಸಿರುವ ಅನೇಕ ಭೂಕಬಳಿಕೆ ಡೀಲ್‌ಗಳು, ದಾಖಲೆಸಹಿತ ಗೌಡರ ಕೈ ಸೇರಿವೆ. ಇದೆಲ್ಲಾ ಗೌಡರಿಗೆ ರಾತ್ರೋರಾತ್ರಿ ಸೆಕ್ಯೂಲರ್ ಮೌಲ್ಯಗಳ ನೆನಪಾಗಿದ್ದರಿಂದ ಆಗುತ್ತಿರುವ ಬೆಳವಣಿಗೆ ಎಂದು ಯಾರೂ ಭಾವಿಸಬೇಕಾಗಿಲ್ಲ, ದೇವೇಗೌಡ ಪಕ್ಕಾ ಲೆಕ್ಕಾಚಾರದ ರಾಜಕಾರಣಿ. ಬಿಜೆಪಿಗೆ ಸಿಎಂಗಿರಿ ಬಿಟ್ಟು ಕೊಟ್ಟು ಜೆಡಿಎಸ್ ಹಿಂದಿನ ಸೀಟಿನಲ್ಲಿ ಕುಳಿತರೆ ಮುಂದಿನ 20 ತಿಂಗಳಲ್ಲಿ ಜೆಡಿಎಸ್ ಅಸ್ತಿತ್ವವೇ ಕುಸಿದುಬೀಳುತ್ತದೆ ಎಂಬುದು ಗೌಡರಿಗೆ ಚೆನ್ನಾಗಿ ಗೊತ್ತಿದೆ. ಅಧಿಕಾರ ಸಿಕ್ಕಗಳಿಗೆಯಿಂದಲೇ ಬಿಜೆಪಿ ತನ್ನ ಪಾರ್ಟಿ ಬೆಳೆಸುತ್ತಾ, ಸಾಕಷ್ಟು ದುಡ್ಡು, ಬೆಂಬಲಿಗರನ್ನು ರೆಡಿ ಮಾಡಿಕೊಳ್ಳುತ್ತಾರೆ ಎಂಬುದೂ ಗೌಡರಿಗೆ ಗೊತ್ತಿದೆ. ಆ ನಂತರ ಚುನಾವಣೆಗೆ ಹೋದರೆ ಕಾಂಗ್ರೆಸ್-ಬಿಜೆಪಿ ಸೆಣಸಾಟದಲ್ಲಿ ಜೆಡಿಎಸ್ ಅಪ್ಪಚ್ಚಿಯಾದರೆ ಗತಿಯೇನೆಂಬುದೇ ಗೌಡರಿಗಿರುವ ಭೀತಿ. ಯಡಿಯೂರಪ್ಪನವರಿಗೆ ಬರೀ ಸಿಎಂ ಕನಸು ಬೀಳುತ್ತಿದೆ. ಆದರೆ ದೇವೇಗೌಡ ಹಾಗೂ ಕಾಂಗ್ರೆಸ್ ಮುಂದೆ ಅನೇಕ ರಾಜಕೀಯ ಸವಾಲುಗಳಿವೆ. ಅಸ್ತಿತ್ವದ ಪ್ರಶ್ನೆಯೂ ಇದೆ. ಸವಾಲು ಎದುರಿಸಲು ಹೊರಡುವವರು ಏನನ್ನಾದರೂ ಆಗಲಿ ಸಾಧಿಸುತ್ತಾರೆ. ಆದರೆ ಬರೀ ಕನಸು ಕಾಣುತ್ತಾ ಕುಳಿತಿರುವವರು ಕುಳಿತಲ್ಲೇ ಇರಬೇಕಾಗುತ್ತದೆ.

ಬಹುಶಃ ಸೆಪ್ಟೆಂಬರ್ ತಿಂಗಳು ಕರ್ನಾಟಕ ರಾಜಕೀಯದ ಸಂಕ್ರಮಣ ಕಾಲ.

–ಈಶ

ಯಡ್ಡಿ ಚೇಂಬರ್‌ನಲ್ಲಿ ತಮಾಷೆ ದೃಶ್ಯಗಳು

ಮುಂಗೋಪಿ, ಸಿಡುಕ, ಬಾಯಿಬಡುಕ ಎಂದೆಲ್ಲಾ ಬಿರುದಾಂಕಿತ ಯಡ್ಡಿ ತಾವೀಗ ಬಹಳ ತಾಳ್ಮೆ ಕಲಿತಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಆದರೆ ಅದು ಅಷ್ಟು ನಿಜ ಅಲ್ಲ, ತಮಗೆ ಸಿಎಂಗಿರಿ ಸಿಗುತ್ತೋ ಇಲ್ಲವೋ ಎಂಬ ಟೆನ್ಷನ್‌ನಲ್ಲೇ ಕಾಲ ಕಳೆಯುತ್ತಿರುವ ಯಡಿಯೂರಪ್ಪನವರ ದಿನಚರಿ ಬಗ್ಗೆ ಬಿಜೆಪಿಯ ಪ್ರಮುಖ ಲೀಡರ್ ಒಬ್ಬರು ಇತ್ತೀಚೆಗೆ 'ಲಂಕೇಶ್'ಗೆ ಹೇಳಿದ್ದು ಸ್ವಾರಸ್ಯಕರವಾಗಿದೆ.

ಯಡ್ಡಿಗೆ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ಕೆಲ ಹೊತ್ತು ವಾಕ್ ಮಾಡುವ ಅಭ್ಯಾಸವಿದೆ. ಈ ಹಿಂದೆಯಾದರೆ ನಡುವಯಸ್ಸಿನ ಉಬ್ಬಲ್ಲು ಸುಂದರಿಯೊಬ್ಬಳು ಯಡ್ಡಿ ಜೊತೆ ಇರುತ್ತಿದ್ದಳು. ಆಮೇಲೆ ಆರ್‌ಎಸ್‌ಎಸ್‌ನವರು ಈ ಬಹಿರಂಗ ರೋಮಾನ್ಸ್‌ನಿಂದ ತಮ್ಮ ಹಿಂದೂ ನಾಯಕನ ಇಮೇಜ್ ಹಾಳಾದೀತೆಂದು ಆಕೆಯನ್ನು ದೂರ ಓಡಿಸಿದ್ದರು. ಇದು ಹಳೇ ವಿಷಯ ಬಿಡಿ. ಅಧಿಕಾರ ಹಸ್ತಾಂತರದ ಟೆನ್ಷನ್‌ನಲ್ಲೇ ಕಳೆದ ತಿಂಗಳು ಯಡ್ಡಿ ಬಿಪಿ ಯದ್ವಾತದ್ವಾ ಏರಿ ರಾತ್ರೋರಾತ್ರಿ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು.

ಈಗ ಯಡ್ಡಿಗೆ ಇನ್ನೊಂದು ಕಾಯಿಲೆ ಶುರುವಾಗಿದೆಯಂತೆ. ಯಾವುದೇ ಸಮಯವೇ ಆಗಿರಲಿ ಯಡ್ಡಿ ತಮ್ಮ ಚೇಂಬರಿನಲ್ಲಿದ್ದಾಗ ಕುರ್ಚಿ ಮೇಲೆ ಕೂತಿದ್ದನ್ನು ಯಾರೂ ನೋಡಿಲ್ಲವಂತೆ. ಸದಾ ಉದ್ವೇಗದಿಂದ ಏನನ್ನೋ ಯೋಚಿಸುತ್ತಾ ಚೇಂಬರಿನಲ್ಲೇ ಈ ತುದಿಯಿಂದ ಆ ತುದಿ, ಆ ಮೂಲೆಯಿಂದ ಈ ಮೂಲೆಗೆ ಶಥಪಥ ಹಾಕುತ್ತಲೇ ಇರುತ್ತಾರಂತೆ ಯಡ್ಡಿ, ದಿಢೀರೆಂದು ಬಾಗಿಲು ತೆಗೆದು ಯಾರಾದರೂ ಒಳಬಂದರೆ ಮುಖ ನೋಡದೆ ಗದರಿಸಿ ಓಡಿಸುವುದು ಇತ್ತೀಚೆಗೆ ಜಾಸ್ತಿಯಾಗಿದೆ. ಇನ್ನೂ ತಮಾಷೆ ಏನೆಂದರೆ ಯಡ್ಡಿಗೆ ತಮ್ಮದೇ ಬಿಜೆಪಿ ಪಾರ್ಟಿಯ ಶಾಸಕರುಗಳ ಹೆಸರು, ಮುಖ ಪರಿಚಯ ಮರೆತು ಹೋಗಿರುವುದು. ಡಿಸಿಎಂ ತನಗೆ ಗೊತ್ತು ಅಂತ ಜಂಬದಿಂದ ಹೇಳಿಕೊಂಡು ತನ್ನ ಜೊತೆ ಹತ್ತಾರು ಹಿಂಬಾಲಕರನ್ನು ಶಾಸಕನೊಬ್ಬ ಕರೆದುಕೊಂಡು ಯಡ್ಡಿ ಚೇಂಬರಿಗೆ ಬಂದರೆ ಒಂದೋ ಬೈಯ್ಗುಳ ಕೇಳಬೇಕು. ಅಕಸ್ಮಾತ್ ಬೈಯದಿದ್ದರೂ ಅವಮಾನವಂತೂ ಗ್ಯಾರಂಟಿ. ಮಾಲೂರಿನ ಶಾಸಕ ಕೃಷ್ಣಯ್ಯ ಶೆಟ್ಟಿಗೆ "ಏನ್ರಿ ನಾಗರಾಜ್ ಬನ್ನಿ... ಬನ್ನಿ" ಎಂದು ಬಿಡುವುದು, ಆನೇಕಲ್ ಶಾಸಕ ನಾರಾಯಣಸ್ವಾಮಿ ಹೋದರೆ "ಹೇಳಿ ಮಂಜುನಾಥರವರೆ, ಏನಾಗಬೇಕು" ಎಂತೆಲ್ಲಾ ಅರಳುಮರಳಿನಂತೆ ಯಡ್ಡಿ ಮಾತನಾಡುವುದನ್ನು ನೋಡಿ ಅನೇಕರಿಗೆ ಗಾಬರಿಯಾಗಿದೆ.

ಯಡ್ಡಿ ಆರೋಗ್ಯಕ್ಕೆ ಇದು ಖಂಡಿತಾ ಒಳ್ಳೆಯದಲ್ಲ, ತನಗೆ ಸಿಎಂಗಿರಿ ಸಿಗುತ್ತಾ ಇಲ್ಲವಾ ಎಂದು ಹಗಲೂ ರಾತ್ರಿ ಯೋಚಿಸುತ್ತಾ ಹೀಗೆ ಬಿಪಿ ಹೆಚ್ಚಿಸಿಕೊಂಡು ನರಳುವುದು ಮುತ್ಸದ್ದಿ ನಾಯಕನ ಲಕ್ಷಣವೇ?

ಯಡ್ಡಿಯ ಅವಿವೇಕ ಇಲ್ಲಿಗೂ ನಿಲ್ಲುವುದಿಲ್ಲ. ತನಗೆ ಅಧಿಕಾರ ತಪ್ಪಿದರೆ ಲಿಂಗಾಯತರಿಗೆ ವಂಚಿಸಿದಂತೆ ಎಂಬಂತೆ ಯಡ್ಡಿ ಬಿಂಬಿಸಲು ಯತ್ನಿಸುತ್ತಿದ್ದಾರೆ. ಹಾಗೆಂದು ಮಾತೆ ಮಹಾದೇವಿ, ಕೊಳದ ಮಠದ ಶಾಂತವೀರ ಸ್ವಾಮಿಯಂಥ ಚಿಕ್ಕವರ ಹತ್ತಿರ ಹೇಳಿಕೆ ಕೊಡಿಸುತ್ತಲೂ ಇದ್ದಾರೆ.

ಇದು ಯಡ್ಡಿ ಮಾಡುತ್ತಿರುವ ಇನ್ನೊಂದು ತಪ್ಪು, ಯಡ್ಡಿ ರಾಜ್ಯದ ಲಿಂಗಾಯತರ ಏಕೈಕ ನಾಯಕನೇನಲ್ಲ, ಅಸಲಿಗೆ ಯಡ್ಡಿ ಅರೆಬರೆ ಲಿಂಗಾಯತ ಎಂತಲೂ ಪರಿಶುದ್ಧ (?) ಲಿಂಗಾಯತರು ಮೂಗು ಮುರಿಯುತ್ತಾರೆ. ಹೀಗಾಗಿ ಇದು ಲಿಂಗಾಯತರ ಪ್ರತಿಷ್ಠೆಯ ವಿಷಯ ಆಗುವುದಿಲ್ಲ, ಇನ್ನು ಮುಂದಿನ ಮುಖ್ಯಮಂತ್ರಿಯಾಗುವ ಸರದಿ ಬಿಜೆಪಿಯದ್ದು ಎನ್ನುವ ಬದಲಾಗಿ ನಾನೇ ಮುಂದಿನ ಮುಖ್ಯಮಂತ್ರಿ ಎಂದು ದಿನ ಬೆಳಗಾದರೆ ಯಡ್ಡಿ ಚೀರಿಕೊಳ್ಳುತ್ತಿರುವುದರಿಂದ ಈ ವಿಚಾರ ಅವರ ವೈಯಕ್ತಿಕ ಆಕಾಂಕ್ಷೆ ಎಂದಾಗುತ್ತದೆಯೋ ವಿನ ಬಿಜೆಪಿ ಪಾರ್ಟಿಯ issue ಆಗುವಲ್ಲಿ ಸೋಲುತ್ತದೆ.

ಯಡ್ಡಿ ಇಷ್ಟೊಂದು ಟೆನ್ಷನ್ ಮಾಡಿಕೊಂಡರೆ ಹೇಗೆ?

ರಾಜಕಾರಣಿಗಳು ಜನರಿಗಾಗಿ ಏನನ್ನೂ ಸಾಧಿಸಿಲ್ಲ, ಬದಲಾಗಿ ವ್ಯಕ್ತಿಗಳು ಮತ್ತು ಬುದ್ಧಿಜೀವಿಗಳು ಎಲ್ಲ ಪ್ರಗತಿ ಮತ್ತು ಸುಧಾರಣೆಗಳ ಹರಿಕಾರರಾಗಿದ್ದಾರೆ - ಲಿಯೋ ಟಾಲ್‌ಸ್ಟಾಯ್

ಸೆರೆಸಿಕ್ಕ ಅಸ್ಗರ್: ಮರೆಯಲ್ಲಿ ಮಾಹಿನ್!

ಬನಶಂಕರಿಯ ರೌಡಿ ಅಸ್ಗರ್‌ಗೆ ಕೊನೆಗೂ ಗುರಿಮುಟ್ಟಲಾಗಲೇ ಇಲ್ಲ. ಒಂದು ರಿವಾಲ್ವರ್, ಹತ್ತು ಡಿಟೋನೇಟರ್‌ಗಳು, ಇಪ್ಪತ್ತು ಜಿಲೇಟಿನ್ ಕಡ್ಡಿಗಳು, ಜೊತೆಗೊಂದು ಲಾಂಗ್!

ನನ್ನ ದುಷ್ಮನ್ ದಿವಾನಾ ಆಲೀನ ಮುಗಿಸೋದಕ್ಕೆ ಇವನ್ನೆಲ್ಲ ಮಡೀಕಂಡಿದ್ದೆ. ನಕಲಿ ನಕ್ಸಲೈಟ್ ಕಂ ದರೋಡೆಕೋರ ಕರ್ನೂಲು ನಾರಾಯಣಪ್ಪನ ದೋಸ್ತಿ ಮಾಡಿ ರಿವಾಲ್ವರು, ಜಿಲೇಟಿನ್ ಸಂಪಾದಿಸಿದೆ. ಅಲ್ಲಾ ಕಿ ಕಸಂ ಇವನ್ನೆಲ್ಲ ದಿವಾನಾ ಆಲಿಗೋಸ್ಕರಾನೇ ಇಟ್ಟುಕೊಂಡಿದ್ದೆ... ಇತ್ಯಾದಿಯಾಗಿ ಆತ ಒದರಿದ ಕಂತೆ ಪುರಾಣವನ್ನೆಲ್ಲ ನಂಬಲು ಪೊಲೀಸರು ಮುಠ್ಠಾಳರಲ್ಲ. ಅಸ್ಗರ್ ಕೂಡ ಮಗುವೇನಲ್ಲ!



ಉಮರ್, ಅಸ್ಗರ್ ಪಾಷಾ, ಜಿಲಾನಿ ಮತ್ತು ಮಹಮ್ಮದ್ ಜಾಹೀರ್

ಒಂದಲ್ಲ ಎರಡು ಕೊಲೆ ಮಾಡಿ, ಪುಡಿ ಐವತ್ತು ಸಾವಿರ ರೂಪಾಯಿಗೋಸ್ಕರ ಯಾರಬ್ ನಗರದ ಬಾಬು ಮನೆಗೇ ನುಗ್ಗಿ, ಹೆಂಗಸರು ಮಕ್ಕಳೆನ್ನದೇ ಕತ್ತರಿಸಿ, ಕೋಲಾರ ಜೈಲು ಪಾಲಾಗಿ, ಕೊನೆಗೆ ಜೈಲಿಂದಲೇ ಪರಾರಿಯಾಗಿ, ಈಗ ರಿವಾಲ್ವರ್, ಡಿಟೋನೇಟರ್ಸ್ ಮತ್ತು ದಜನ್ನುಗಟ್ಟಲೇ ಜಿಲೇಟಿನ್ ಕಡ್ಡಿಗಳ ಸಮೇತ ಸೆರೆಸಿಕ್ಕವನು ಭೈರಸಂದ್ರದ ಅಸ್ಗರ್ ಅಲಿಯಾಸ್ ರಾಬರಿ ಅಸ್ಗರ್!

ನಿಜಕ್ಕೂ ಆತ ದಿವಾನಾ ಆಲಿಯ ಹತ್ತಿರಕ್ಕೇ ಸ್ಕೆಚ್ಚು ಹಾಕಿದ್ದರೆ ಅದಕ್ಕೆ ಡಿಟೋನೇಟರ್ಸ್ ಅಥವಾ ಜಿಲೇಟಿನ್ ಕಡ್ಡಿಗಳೇ ಬೇಕಿಲ್ಲ. ಆಲಿ ಆತನ ಗುರಿಯೂ ಅಲ್ಲ. ಅದು ಪೊಲೀಸರಿಗೂ ಗೊತ್ತು. ಸ್ವತಃ ಅಸ್ಗರ್‌ಗೇ ಚೆನ್ನಾಗಿ ಗೊತ್ತು. ಹೇಗೂ ಯಾರಬ್ ನಗರದ ಅಫ್ಜಲ್ ಕೊಲೆ ಕೇಸಿನಿಂದ ತಾನಿನ್ನು ಬಚಾವಾಗಲಾರೆ. ಸಾಕ್ಷಿ ಪಕ್ಕಾ ಇದೆ. ಸ್ವತಃ ಅಫ್ಜಲ್‌ನ ಪತ್ನಿ ಶಾತಾಜ್‌ಳೇ ಕೋರ್ಟಿಗೆ ಬಂದು ಸಾಕ್ಷಿ ಹೇಳಿದ್ದಾಳೆ. ಆಕೆಯ ಅಣ್ಣ ಯಾರಬ್ ನಗರದ ಬಾಬು ಮತ್ತು ಆತನ ತಮ್ಮ ಜಯನಗರದ ಕೇಬಲ್ ರಿಜ್ವಾನ್ ಕೂಡ ಕೋರ್ಟಿಗೆ ಬಂದು ಖಂಡಿತ ಸಾಕ್ಷಿ ಹೇಳುತ್ತಾರೆ. ಜೀವಾವಧಿ ಸಜೆಯಿಂದ ಬಚಾವಾಗಬೇಕೆಂದರೆ ಒಂದೋ ಬದುಕಿರುವ ತನಕ ಭೂಗತನಾಗುವುದು, ಭೂಗತನಾಗಿದ್ದೇ ತನ್ನ ವಿರುದ್ಧ ಸಾಕ್ಷಿ ಹೇಳುವ ಕೇಬಲ್ ರಿಜ್ವಾನ್ ಮತ್ತು ಬಾಬುರನ್ನು ಮುಗಿಸುವುದು ಆತನ ಅಸಲೀ ಹುನ್ನಾರ?

ಹಾಗಿದ್ದರೆ ಜಿಲೇಟಿನ್ ಕಡ್ಡಿಗಳು ಮತ್ತು ಡಿಟೋನೇಟರ್‌ಗಳಂಥ ವಿಧ್ವಂಸಕ ಅಸ್ತ್ರಗಳನ್ನೇಕೆ ಸಂಗ್ರಹಿಸಿಕೊಂಡಿದ್ದ?

ಪೊಲೀಸರು ಹೇಳುವಂತೆ ಬೆಂಗಳೂರಿನ ಏರ್‌ಪೋರ್ಟ್, ಯುಟಿಲಿಟಿ ಬಿಲ್ಡಿಂಗ್, ಗರುಡಾ ಮಾಲ್, ಹೈಕೋರ್ಟ್, ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್ ಮತ್ತು ಕಂಟೋನ್ಮೆಂಟ್ ರೈಲ್ವೇ ಸ್ಟೇಷನ್ನುಗಳಿಗೆ ಜಿಲೇಟಿನ್ ಕಡ್ಡಿಗಳನ್ನು ಜೋಡಿಸಿ ಸ್ಫೋಟಿಸುವುದೇ ಆತನ ಗುರಿಯಾಗಿತ್ತೆಂಬುದನ್ನು ಸುಲಭಕ್ಕೆ ನಂಬಲಾಗುತ್ತಿಲ್ಲ.


ಇದು ಮಾತ್ರ ಇವತ್ತಿಗೂ ಅರ್ಥವಾಗದ ಪ್ರಶ್ನೆಯೆ. ಅಸ್ಗರ್ ನಿಜಕ್ಕೂ ಇಸ್ಲಾಮಿಕ್ ಟೆರರಿಸ್ಟ್ ಆಗಿರಲಿಕ್ಕಿಲ್ಲ. ಮೂಲತಃ ಹೊಸೂರು ರಸ್ತೆಯ ಮಂಗಮ್ಮನಪಾಳ್ಯದ ಅಸ್ಗರ್ ಓರ್ವ ರಾಬರಿ. ಕ್ರಮೇಣ ಜಯನಗರದ ಭೈರಸಂದ್ರದಲ್ಲಿ ಅಡ್ಡೆ ಹಾಕುತ್ತಿದ್ದ. ರೇಪಿಸ್ಟ್ ನಸ್ರು, ಆತನ ಅಣ್ಣ ಜಬಿ, ನಸ್ರು ಶಿಷ್ಯರಾದ ಜಮೀಲ್, ಮುಸ್ತಫಾ ಎಲ್ಲರೂ ಪ್ರಾರಂಭದಲ್ಲಿ ರೋಫು ಎಂಬ ದರೋಡೆಕೋರನ ಶಿಷ್ಯರಾಗಿದ್ದರು. ಬ್ಯಾಂಡ್ ಹುಡುಗಿಯರನ್ನು ಕಿಡ್ನಾಪ್ ಮಾಡಿ ಒಂದರ ಮೇಲೊಂದು ಸರಣಿ ರೇಪ್‌ಗಳನ್ನು ಎಸಗಿದ್ದರು. 1996 ರಿಂದ 1999 ರ ತನಕ ಬೆಂಗಳೂರು ಪೊಲೀಸರಿಗೆ ನೆಮ್ಮದಿಯಿಲ್ಲದಂತೆ ಮಾಡಿದ ಈ ಅನಾಹುತಕಾರಿ ಗ್ಯಾಂಗಿನಲ್ಲಿ ಮೊದಲ ಬಾರಿಗೆ ಒಡಕು ತಂದವನೇ ಈ ಅಸ್ಗರ್.

ಅದು ದೋಚಿದ ದರೋಡೆಯನ್ನು ಹಂಚಿಕೊಳ್ಳುವ ಜಗಳ. ಅದೊಮ್ಮೆ ಅಸ್ಗರ್ ನಸ್ರು ಅಣ್ಣ ಜಬಿಯನ್ನೇ ಓಡಿಸಿ ಬಡಿದ. ನಸ್ರು ತಿರುಗಿಬಿದ್ದ, ಅಸ್ಗರ್‌ನ ಕೈ ಕತ್ತರಿಸಿಬಿಟ್ಟ.

ಅಲ್ಲಿಗೇ ಅಸ್ಗರ್ ಕಥೆ ಮುಗಿಯಬೇಕಿತ್ತು. ಆದರೆ ಅಸ್ಗರ್ ಬೆನ್ನಿಗೆ ಕುಖ್ಯಾತ ಭೂಕಂಟಕ, ಖಾತಕಿ ಮಾಹಿನ್ ನಿಂತುಬಿಟ್ಟ. ಅದೇ ಹೊತ್ತಿಗೆ ಇಡೀ ನಸ್ರು ಗ್ಯಾಂಗ್ ಜೈಲು ಪಾಲಾಯಿತು. ಜೈಲಿಂದ ಪರಾರಿಯಾಗಿಯೇ ನಸ್ರು ಪೊಲೀಸರ ಗುಂಡಿಗೆ ಬಲಿಯಾದ. ಬಹುಶಃ ನಸ್ರು ಬದುಕಿದ್ದರೆ ಯಾವತ್ತೋ ಅಸ್ಗರ್ ಕೊಲೆಯಾಗಿರುತ್ತಿದ್ದ!

ಮಾಹಿನ್‌ನ ದುಡ್ಡು ಮತ್ತು ರಿಯಲ್ ಎಸ್ಟೇಟ್ ರೌಡಿಗಳನ್ನು ಬೆನ್ನಿಗೆ ಹಾಕಿಕೊಂಡೇ ಅಸ್ಗರ್ ಇನ್ನಷ್ಟು ರಾಬರಿಗಿಳಿದ. ಅದೇ ಹೊತ್ತಿಗೆ ಜಯನಗರದ ಪಂಟರ್ ಕೇಬಲ್ ರಿಜ್ವಾನ್‌ನ ಅಣ್ಣ ಅಫ್ಜಲ್ ಅವಲಹಳ್ಳಿಯಲ್ಲಿ ಮನೆ ಕಟ್ಟಿಸುತ್ತಿದ್ದ. ಹಿಂದೊಮ್ಮೆ ಕೇಬಲ್ ರಿಜ್ವಾನ್ ಜೊತೆ ಸಣ್ಣಗೆ ಕ್ಯಾತೆ ಮಾಡಿಕೊಂಡಿದ್ದ ಅಸ್ಗರ್ 2005ರ ಹೊತ್ತಿಗೆ ಆತನ ಅಣ್ಣ ಅಫ್ಜಲ್‌ನನ್ನು 'ಮನೆ ಕಟ್ಟಿಸ್ತಿದ್ದೀಯಲ್ಲಾ 50 ಸಾವಿರ ರೂಪಾಯಿ ಮಡಗು' ಎಂದು ಅಟಕಾಯಿಸಿಕೊಂಡ. ಕೇಳಿದ ದುಡ್ಡು ಕೊಟ್ಟಿದ್ದರೆ ಅಫ್ಜಲ್ ಬದುಕಿರುತ್ತಿದ್ದ. ಆದರೆ ಬನಶಂಕರಿ ಪೊಲೀಸ್ ಠಾಣೆಗೆ ಹೋಗಿ ಅಸ್ಗರ್‌ನಿಂದ ನನ್ನ ಪ್ರಾಣ ಉಳಿಸಿ ಎಂದು ಪೊಲೀಸ್ ರಕ್ಷಣೆ ಕೋರಿದ.

ಅದೇ ಕಾರಣಕ್ಕೆ ಅಸ್ಗರ್ 2005 ಮಾರ್ಚ್ 16 ರಂದು ಪಂಟರ್ ಖಲೀಂ, ಇಲಿಯಾಸ್ ನಗರದ ಆಲಿ, ಕೈಫ್ ಮತ್ತು ರೋಫ್ ಜೊತೆ ಸೇರಿ ಇಲಿಯಾಸ್ ನಗರದ ನೂರಾನಿ ಮಸೀದಿಯ ಬಳಿ ಅಮಾಯಕ ಅಫ್ಜಲ್‌ನನ್ನು ತುಂಡು ತುಂಡಾಗಿ ಕತ್ತರಿಸಿ ಕೊಂದ. ಇದಕ್ಕೂ ಮುನ್ನ ಅಸ್ಗರ್ ಈಜು ಎಂಬಾತನನ್ನು ಕೊಂದಿದ್ದ. ಅಫ್ಜಲ್‌ನ ಯಾರಬ್ ನಗರದ ಮನೆಗೇ ನುಗ್ಗಿ ಆತನ ಪತ್ನಿ ಶಾತಾಜ್‌ಳ ಕೈ ಕತ್ತರಿಸಿದ್ದ. ಪೊಲೀಸರಿಗೆ ಸಿಗದೇ ರಾಬರಿ ದಕಾಯಿತಿ ಮಾಡಿಕೊಂಡೇ ಇದ್ದ ಅಸ್ಗರ್ ಗ್ಯಾಂಗನ್ನು ಹಿಡಿಯಲು ಹೋದ ಪೊಲೀಸರ ಜೊತೆ ರೋಫು ಕಾಳಗಕ್ಕೆ ಬಿದ್ದು ಸತ್ತೇ ಹೋದ.




ಮಾಹಿನ್

ಹಾಗೇ 2005 ರ ಜೂನ್‌ನಲ್ಲಿ ಸಿಸಿಬಿ ಪೊಲೀಸರಿಗೆ ಸಿಕ್ಕಿಬಿದ್ದ ಅಸ್ಗರ್‌ಗೆ ಕೋಲಾರ ಜೈಲಿನಲ್ಲಿ ಆಂಧ್ರದ ದಕಾಯಿತ ರಾಜು ಎಂಬಾತನ ಪರಿಚಯವಾಗಿದೆ. ಈತ ಆಂಧ್ರದ ಕರ್ನೂಲಿನ ನಕಲಿ ನಕ್ಸಲೈಟ್ ನಾರಾಯಣಪ್ಪನ ಛೇಲಾ. ಅದೇ ಹೊತ್ತಿಗೆ ಅಫ್ಜಲ್ ಕೊಲೆ ಕೇಸಿನ ಸಾಕ್ಷಿಗಳೂ ಬಿಗಿಯಾಗಿವೆ. ಅಫ್ಜಲ್ ಪತ್ನಿ ಶಾತಾಜ್‌ಳೇ ಬಂದು ಅಸ್ಗರ್ ವಿರುದ್ಧ ಸಾಕ್ಷಿ ಹೇಳಿದ್ದಾಳೆ. ಉಳಿದ ಸಾಕ್ಷಿಗಳೆಂದರೆ ಆಕೆಯ ಅಣ್ಣಂದಿರಾದ ಬಾಬು ಮತ್ತು ಕೇಬಲ್ ರಿಜ್ವಾನ್!

ಅವರನ್ನು ಮುಗಿಸಿಬಿಟ್ಟರೆ?

ಒಂದೇ ಏಟಿಗೆ ಜೀವಾವಧಿ ಶಿಕ್ಷೆಯಿಂದ ಬಚಾವಾಗಬಹುದು. ಉಳಿದ ಕೇಸಿನ ಸಾಕ್ಷಿಗಳ ಬಾಯನ್ನೂ ಮುಚ್ಚಬಹುದು. ಹಾಗೆಂದೇ ಲೆಕ್ಕಹಾಕಿದ ಅಸ್ಗರ್ 2007 ರ ಜೂನ್ 30 ರಂದು ಖಾಯಿಲೆಯ ನಾಟಕವಾಡಿದ್ದಾನೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆಂದು ಬಂದವನು ಸಂಜೆ ವಾಪಸ್ಸು ಹೋಗುವಾಗ ವೇಮಗಲ್ ವ್ಯಾಪ್ತಿಯ ನರಸಾಪುರದ ಡಾಬಾ ಒಂದರ ಬಳಿ ಹೊಟ್ಟೆ ತೊಳೆಸಿದ ನಾಟಕವಾಡಿ ಎಸ್ಕೇಪಾಗಿದ್ದಾನೆ.



ಅಸ್ಗರ್ ಪಾಷಾ, ಪತ್ನಿ ಶಾತಾಜ್ ಮತ್ತು ಮಗ ಅಜರ್

ಆವತ್ತು ಎಸ್ಕೇಪಾದ ಅಸ್ಗರ್ ಸೀದಾ ಆಂಧ್ರದ ಕರ್ನೂಲಿಗೆ ಹೋದನೋ, ನಿಜಕ್ಕೂ ನಾರಾಯಣಪ್ಪ ಎಂಬ ದಕಾಯಿತನನ್ನು ಭೇಟಿಯಾದನೋ ಗೊತ್ತಿಲ್ಲ. ರಿವಾಲ್ವರ್, ಡಿಟೋನೇಟರ್, ಜಿಲೇಟಿನ್ ಕಡ್ಡಿಗಳನ್ನು ಆತನೇ ಅಸ್ಗರ್‌ಗೆ ಒದಗಿಸಿಕೊಟ್ಟನಾ ಎಂಬುದಕ್ಕೂ ಪುರಾವೆಯಿಲ್ಲ. ಅಸ್ಗರ್ ಹೇಳುತ್ತಿದ್ದಾನೆ. ಪೊಲೀಸರು ನಂಬಿದ್ದಾರೆ. ದಿವಾನಾ ಆಲಿಯನ್ನು ಮುಗಿಸೋದಕ್ಕೆ ಇಟ್ಟುಕೊಂಡಿದ್ದೆ ಎಂದುಬಿಟ್ಟರೆ ಪೊಲೀಸರನ್ನು ಸಲೀಸಾಗಿ ಯಾಮಾರಿಸಬಹುದೆಂದು ಅಸ್ಗರ್ ಲೆಕ್ಕ ಹಾಕಿರಬಹುದು. ಅಸಲೀ ಸಂಗತಿಯೇನೆಂದರೆ ಆಲಿಗಿಂತಲೂ ಅಸ್ಗರ್‌ಗೆ ಜಿದ್ದಿರುವುದು ತನ್ನಿಂದಲೇ ಕೊಲೆಯಾದ ಅಫ್ಜಲ್‌ನ ಪತ್ನಿಯ ಅಣ್ಣಂದಿರಾದ ಕೇಬಲ್ ರಿಜ್ವಾನ್ ಮತ್ತು ಬಾಬು ಮೇಲೆಯೇ.

ಅವರನ್ನು ಮುಗಿಸಿ ಜೀವಾವಧಿ ಸಜೆಯಿಂದ ಬಚಾವಾಗುವುದೇ ಆತನ ಮೊದಲ ಗುರಿ. ಜೊತೆಗೆ ಮಾಹಿನ್ ಕೈಹಾಕಿದ ಲ್ಯಾಂಡ್ ಡೀಲುಗಳಿಗಾಗಿ ಇನ್ನಷ್ಟು ರಕ್ತ ಹರಿಸುವುದು ಆತನ ಉದ್ದೇಶವಾಗಿತ್ತೆ?

ಏಕೆಂದರೆ ಮಾಹಿನ್ ಕೆಲ ತಿಂಗಳ ಹಿಂದೆ ಬಿಲ್ಡರ್ ಇರ್ಫಾನ್ ರಜಾಕ್‌ಗೆ ಬೆದರಿಕೆ ಹಾಕಿದ್ದ. ಪ್ರೆಸ್ಟೀಜ್ ಬಿಲ್ಡರ್ಸ್ ವಿರುದ್ಧ ಐವತ್ತು ಕೋಟಿಯ ಆಸ್ತಿಯ ವಿಷಯದಲ್ಲಿ ಮಾಹಿನ್ ಕ್ಯಾತೆ ತೆಗೆದಿದ್ದ. ಗುರಪ್ಪನಪಾಳ್ಯದ ಕೌನ್ಸಿಲರ್ ಸಮೀವುಲ್ಲಾನ ಶಬನಂ ಡೆವಲಪರ್ಸ್ ಅಡ್ಡೆಗೆ ನುಗ್ಗಿ ಇಬ್ಬರನ್ನು ಗುಂಡಿಟ್ಟು ಕೊಂದಿದ್ದ ಪೂಜಾರಿಯ ಬಂಟ ಕವಿರಾಜ್‌ಗೂ, ಅಸ್ಗರ್‌ಗೂ ಕೋಲಾರ ಜೈಲಲ್ಲೇ ದೋಸ್ತಿ ಬೆಳೆದಿತ್ತು. ಇದೇ ಕಾಂಟ್ಯಾಕ್ಟ್ ಬಳಸಿ ಅಸ್ಗರ್ ರಿವಾಲ್ವರ್ ಮತ್ತು ಜಿಲೇಟಿನ್ ಸಂಪಾದಿಸಿರಬಹುದೆ? ಮಾಹಿನ್ ಪರವಾಗಿ ಪ್ರೆಸ್ಟೀಜ್‌ನ ಇರ್ಫಾನ್ ರಜಾಕ್‌ನ ಕಾಂಪ್ಲೆಕ್ಸ್‌ಗೆ ಬಾಂಬಿಕ್ಕುವುದು ಆತನ ಗುರಿಯಾಗಿತ್ತೆ?

ಇದ್ಯಾವುದೂ ಬಯಲಾಗದ ಹಾಗೇ ಆತ ದಿವಾನಾ ಆಲಿಯನ್ನು ಮುಗಿಸಲು ಮಾರಕಾಸ್ತ್ರ ಇಟ್ಟುಕೊಂಡಿದ್ದೆ ಎಂದು ಪೊಲೀಸರನ್ನು ಯಾಮಾರಿಸುತ್ತಿರಬಹುದೆ?

ಏಕೆಂದರೆ ಅಸ್ಗರ್‌ನನ್ನು ಹಿಡಿಯುವಾಗಲೇ ಪೊಲೀಸರಿಂದ ತಪ್ಪಿಸಿಕೊಂಡ ಸಮೀರ್ ಹೇಳಿಕೇಳಿ ಮಾಹಿನ್‌ನ ಬಲಗೈ ಬಂಟ. ಅಲ್ಲಿಗೆ ಅಸ್ಗರ್ ಬೆನ್ನಿಗಿರುವವನು, ಆತನನ್ನು ಬಿಟ್ಟು ವಿಧ್ವಂಸಕ್ಕೆ ಕೈಹಾಕಿರುವವನು ಮಾಹಿನ್ ಎಂಬುದರಲ್ಲಿ ಯಾವುದೇ ಗುಮಾನಿಯಿಲ್ಲ. ಇದೇ ಮಾಹಿನ್ ಸದ್ಯ ಚಾಮರಾಜಪೇಟೆ ಶಾಸಕ ಜಮೀರ್‌ನ ನೆಚ್ಚಿನ ಶಿಷ್ಯ. ಹಾಗೊಮ್ಮೆ ಅಸ್ಗರ್ ಮುಂದಿನ ಪರೀಕ್ಷೆಯಲ್ಲಿ ಮಾಹಿನ್ ಹೆಸರು ಹೇಳಿಬಿಟ್ಟರೆ?

ಆಗಲಾದರೂ ಪೊಲೀಸರು ಮಾಹಿನ್ ಕೈಗೆ ಕೋಳ ಹಾಕುತ್ತಾರಾ?

-ರಾ. ಸೋ

ದಿವಾನಾ ಆಲಿಯ ಅಸಲೀ ಬಾತ್

ತನ್ನನ್ನು ಮುಗಿಸೋದಕ್ಕೇ ಅಸ್ಗರ್ ಜಿಲೇಟಿನ್ ಕಡ್ಡಿಗಳು ಮತ್ತು ಡಿಟೋನೇಟರ್‌ಗಳನ್ನು ಇಟ್ಟುಕೊಂಡಿದ್ದ ಎಂಬುದನ್ನು ಕೇಳುತ್ತಲೇ ಎದ್ದೂಬಿದ್ದು ನಕ್ಕವನು ದಿವಾನಾ ಆಲಿ.

"..... ಅಲ್ರೀ ನಾನೇನು ವೀರಪ್ಪನಾ, ಎಲ್ಟಿಟಿಇ ಪ್ರಭಾಕರನ್ನಾ? ನನ್ನನ್ನು ಮುಗಿಸೋದಕ್ಕೆ ರಿವಾಲ್ವರ್ ಇದ್ರೆ ಓಕೆ. ಆದ್ರೆ ಜಿಲೇಟಿನ್ನು ಡಿಟೋನೇಟರ್ಸ್ ಯಾಕೆ? ಬಿಲ್ಡಿಂಗಿಗೆ ಬಾಂಬಿಕ್ಕಲು ಬಳಸೋದನ್ನು ಇಟ್ಟುಕೊಂಡು ದಿವಾನಾ ಆಲಿ ಮುಗಿಸೋದಕ್ಕೆ ಇಟ್ಟುಕೊಂಡಿದ್ದೆ ಎಂದುಬಿಟ್ಟರೆ ಪೊಲೀಸರು ನಂಬಿ ಬಿಡ್ತಾರಾ?

ಅವನೊಬ್ಬ ರಾಬರಿ ಮತ್ತು ಪಕ್ಕಾ ಕಳ್ಳ. ನಾಲ್ಕೈದು ವರ್ಷಗಳ ಹಿಂದೆ ಬನ್ನೇರುಘಟ್ಟ ರಸ್ತೆಯ ಕ್ಲಾಸಿಕ್ ಪೆಟ್ರೋಲ್ ಬಂಕಿಗೆ ಇದೇ ಅಸ್ಗರ್ ನುಗ್ಗಿ ನಾಲ್ಕು ಲಕ್ಷ ರೂಪಾಯಿ ದಕಾಯಿತಿ ಮಾಡಿದ್ದ.


ಆಗ ತಿಲಕ್‌ನಗರದ ಇನ್ಸ್‌ಪೆಕ್ಟರ್ ಆಗಿದ್ದ ಡಿಸೋಜರೇ ನನ್ನನ್ನು ಕರೆದು ಅಸ್ಗರ್‌ನನ್ನು ಹಿಡಿದುಕೊಡುವಂತೆ ಕೇಳಿದರು. ಪೊಲೀಸರಿಗೆ ನೆರವಾಗಲೆಂದೇ ನಾನು ಆವತ್ತು ಅಸ್ಗರ್‌ನನ್ನು ಹಿಡಿದುಕೊಟ್ಟೆ. ಅದು ಬಿಟ್ಟರೆ ನನಗಾಗಲಿ, ಆತನಿಗಾಗಲಿ ಹಗೆ-ಸ್ನೇಹ ಯಾವುದೂ ಇಲ್ಲ. ಹಾಗಿದ್ದಿದ್ದೇ ಆಗಿದ್ದರೆ ನನ್ನನ್ನು ಮುಗಿಸುವ ಬಗ್ಗೆ ಆತ ಹೇಳುತ್ತಲೇ ಇರಲಿಲ್ಲ.

ಕೊಲ್ಲುವವರ್‍ಯಾರಾದರೂ ಹೇಳಿ ಮಾಡುತ್ತಾರಾ? ಹೇಳಿಬಿಟ್ಟರೆ ಹುಷಾರಾಗ್ತಾರೆ ಅನ್ನೋದು ಗೊತ್ತಿರಲ್ವಾ?

ನನ್ನ ಮೇಲೆ ಹೇಳಿಬಿಟ್ಟರೆ ತಾನು ಪೊಲೀಸರಿಂದ ಬಚಾವಾಗಬಹುದು ಎಂಬುದು ಆತನ ಲೆಕ್ಕಚಾರ. ಇದರಿಂದ ಅವನಿಗೇನೂ ಲಾಭವಿಲ್ಲ. ಅದಿಲ್ ಕೊಲೆ ಕೇಸಿನಲ್ಲಿ ಅನ್ಯಾಯವಾಗಿ ನನ್ನನ್ನು ಸಿಕ್ಕಿಸಿದ್ದನ್ನು ಬಿಟ್ಟರೆ ನಾನು ಸಮಾಜ ಸೇವೆಗೆ ನಿಂತು ಎಷ್ಟೋ ವರ್ಷವಾಗಿದೆ. ರೌಡಿಜಮ್ಮನ್ನೇ ತೊರೆದಿದ್ದೇನೆ. ಮುಂದಿನ ಪಾಲಿಕೆ ಚುನಾವಣೆಯಲ್ಲಿ ನಾನೇನು ಅನ್ನೋದನ್ನು ತೋರಿಸುತ್ತೇನೆ. ಯಾರೇನೇ ಮಸಲತ್ತು ಮಾಡಿದರೂ ನಾನು ಮತ್ತೆ ರೌಡಿಜಮ್ಮಿಗೆ ಇಳಿಯೋಲ್ಲ, ಇದು ಅಲ್ಲಾ ಕಿ ಕಸಮ್.....!

ಇದು ದಿವಾನಾ ಆಲಿಯ ಮಾತು. ನಂಬುವುದು ಬಿಡುವುದು ಪೊಲೀಸರಿಗೆ ಬಿಟ್ಟದ್ದು!

ಮಂತ್ರಿ ರಾಮಚಂದ್ರಗೌಡರ ಭೂಸ್ವಾಹ!



■ ರಾ. ಸೋಮನಾಥ್

ಈ ರಾಯಚೂರು ಕನ್ನಡಿಗರಿದ್ದದ್ದು ಯಾರದೇ ಖಾಸಗಿ ಭೂಮಿಯಲ್ಲಲ್ಲ. ಅದು ಬಿಡಿಎ ಆಸ್ತಿಯಾಗಿತ್ತು. ಹೀಗಿದ್ದೂ ರೌಡಿ ಪಡೆಯೊಂದು ಬೆಳ್ಳಂಬೆಳಿಗ್ಗೆ ಏಕೆ ಈ ನಿರ್ಗತಿಕರ ಮೇಲೆ ಇಂಥಾದ್ದೊಂದು ಗೂಂಡಾಗಿರಿಗೆ ಕೈಹಾಕಿತೆಂಬುದನ್ನೇ ಕೆದಕುತ್ತಾ ಹೋದಂತೆ ಪತ್ರಿಕೆಗೆ ಸಿಕ್ಕಿದ್ದು: ಲಾಟರಿ ಮಂತ್ರಿ ರಾಮಚಂದ್ರಗೌಡರ ನೂರೈವತ್ತು ಕೋಟಿಯ ಭಯಂಕರ ಲ್ಯಾಂಡ್ ಗ್ರ್ಯಾಬಿಂಗ್!

ಗೋವಾದ ಬೈನಾ ಬೀಚಿನ ಗತಿಗೆಟ್ಟ ಕನ್ನಡಿಗರ ಮೇಲೆ ನಡೆದ ದೌರ್ಜನ್ಯವನ್ನು ನಾಡಿಗೆ ನಾಡೇ ಖಂಡಿಸುತ್ತದೆ. ಅದೇ ಕೃತ್ಯವನ್ನು ಲಾಟರಿ ಮಂತ್ರಿ ರಾಮಚಂದ್ರಗೌಡರ ಪಟಾಲಂ ರಾಜಧಾನಿ ಬೆಂಗಳೂರಿನಲ್ಲೇ ನಡೆಸಿದರೆ?

ರಕ್ಷಣಾ ವೇದಿಕೆ ಬಾಯಿಮುಚ್ಚಿಕೊಂಡಿದೆ. ಪತ್ರಿಕೆಗಳು ಗಪ್‌ಚುಪ್ಪಾಗಿವೆ. ದಲಿತ ಸಂಘಟನೆಗಳು ಹೊದ್ದು ಮಲಗಿವೆ!

ಇಲ್ಲಿಗೆ ಎರಡು ದಿನಗಳ ಹಿಂದೆ ಅಂದರೆ ಇದೇ ಆಗಸ್ಟ್ 17 ರ ಶುಕ್ರವಾರದ ಬೆಳ್ಳಂಬೆಳಿಗ್ಗೆ ವಿಜಯನಗರಕ್ಕೆ ಕೂಗಳತೆಯಲ್ಲೇ ಇದ್ದ ರಾಯಚೂರು ಮೂಲದ ದಲಿತರ ಝೋಪಡಿ ಪಟ್ಟಿಯನ್ನು ಕಾಮಾಕ್ಷಿಪಾಳ್ಯದ ಸರಿಸುಮಾರು ಐವತ್ತು ಮಂದಿ ರೌಡಿಗಳ ಗುಂಪೊಂದು ಖಾಲಿ ಮಾಡಿಸಿದ ರೀತಿಯೇ ಹಾಗಿತ್ತು. ಕಾಮಾಕ್ಷಿಪಾಳ್ಯದ ಎದುರಿಗೇ ಇದ್ದ ಮಾಳಗಾಳದ ಸರ್ವೆ ನಂಬರ್ 13 ರ ವಿಶಾಲ ಸರ್ಕಾರಿ ಜಮೀನಿನಲ್ಲಿದ್ದ ಮುನ್ನೂರಕ್ಕೂ ಹೆಚ್ಚು ಗುಡಿಸಲುಗಳ ಮೇಲೆ ಬೆಳಿಗ್ಗೆ ಏಳಕ್ಕೇ ದಾಳಿ ನಡೆಸಿದ ರೌಡಿ ಗ್ಯಾಂಗ್ ಅಲ್ಲಿದ್ದ ಕನ್ನಡ ಬಾವುಟದ ಸಮೇತ ಇಡೀ ಸ್ಲಮ್ಮನ್ನು ಕೇವಲ ಅರ್ಧ ಗಂಟೆಯಲ್ಲೇ ನಿಕಾಲಿ ಮಾಡಿದ ದೃಶ್ಯಾವಳಿಗಳನ್ನು ಕಂಡ ಯಾರಾದರೂ ಕಣ್ಣೀರಿಡಲೇಬೇಕು.

ಅದು ಮಾಳಗಾಳದ ರಾಯಚೂರು ಸ್ಲಮ್ಮು. ಕಳೆದ ಐದಾರು ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ಬೆಳಿಗ್ಗೆಯಾದರೆ ಬೆಂಗಳೂರಿನ ಬೇರೆಬೇರೆ ಏರಿಯಾಗಳ ಬಿಲ್ಡಿಂಗ್ ಕೆಲಸಕ್ಕೆಂದು ಹೊರಡುತ್ತಿದ್ದ ಇಲ್ಲಿನ ನಿರ್ಗತಿಕ, ದಲಿತ ಕನ್ನಡಿಗರ ಪಾಲಿಗೆ ಆಗಸ್ಟ್ 17 ಕರಾಳ ದಿನವಾಗಿತ್ತು.


ಬೈನಾ ಬೀಚ್!

ನೋಡುನೋಡುತ್ತಿದ್ದಂತೆಯೇ ಸರಿಸುಮಾರು ಐವತ್ತು ಮಂದಿ ಸ್ಲಮ್ಮಿಗೆ ನುಗ್ಗಿ, ಕಂಡಕಂಡ ಗುಡಿಸಲಿನ ಮಾಡು ಕಿತ್ತೆಸೆದರು. ಪಾತ್ರೆ ಪಗಡಿಗಳನ್ನು ಫುಟ್‌ಬಾಲ್‌ನಂತೆ ಒದ್ದೆಸೆದರು. ಹೆಂಗಸರು, ಮಕ್ಕಳು, ಅಂಗವಿಕಲರು, ವೃದ್ಧರನ್ನೂ ನೋಡದೆ ದೊಣ್ಣೆ ರಾಡು, ಹಾಕಿ ಸ್ಟಿಕ್‌ಗಳಿಂದ ಹೊಡೆಹೊಡೆದು ಅಟ್ಟಾಡಿಸುತ್ತಿದ್ದ ಆ ದೃಶ್ಯ; ನಿಜಕ್ಕೂ ಗೋವಾ ಪೊಲೀಸರು ಬೈನಾ ಬೀಚಿನ ಕನ್ನಡಿಗರ ಮೇಲೆಸಗಿದ ದೌರ್ಜನ್ಯಕ್ಕಿಂತಲೂ ಹತ್ತುಪಟ್ಟು ಪೈಶಾಚಿಕವಾಗಿತ್ತು.

1991 ರ ಕಾವೇರಿ ಗಲಾಟೆಯಲ್ಲಿ ತಮಿಳು ನಿರ್ಗತಿಕರ ಸ್ಲಮ್ಮಿನ ಮೇಲೂ ಈ ಥರದ ಅಟ್ಟಹಾಸ ನಡೆದಿರಲಿಕ್ಕಿಲ್ಲವೇನೋ?

ಅಷ್ಟಕ್ಕೂ ಈ ರಾಯಚೂರು ಕನ್ನಡಿಗರಿದ್ದದ್ದು ಯಾರದೇ ಖಾಸಗಿ ಭೂಮಿಯಲ್ಲಲ್ಲ, ಅದು ಬಿಡಿಎ ಆಸ್ತಿಯಾಗಿತ್ತು, ಹೀಗಿದ್ದೂ ರೌಡಿ ಪಡೆಯೊಂದು ಬೆಳ್ಳಂಬೆಳಿಗ್ಗೆ ಏಕೆ ಈ ನಿರ್ಗತಿಕರ ಮೇಲೆ ಇಂಥಾದ್ದೊಂದು ಗೂಂಡಾಗಿರಿಗೆ ಕೈಹಾಕಿತೆಂಬುದನ್ನೇ ಕೆದಕುತ್ತಾ ಹೋದಂತೆ ಪತ್ರಿಕೆಗೆ ಸಿಕ್ಕಿದ್ದು; ಲಾಟರಿ ಮಂತ್ರಿ ರಾಮಚಂದ್ರಗೌಡರ ನೂರೈವತ್ತು ಕೋಟಿಯ ಭಯಂಕರ ಲ್ಯಾಂಡ್ ಗ್ರ್ಯಾಬಿಂಗ್!

ಸದ್ಯ ಮಾಳಗಾಳದ ರಾಯಚೂರು ಸ್ಲಮ್ಮಿಗೆ ರೌಡಿಗಳನ್ನು ನುಗ್ಗಿಸಿದ್ದು ಇದೇ ರಾಮಚಂದ್ರಗೌಡರ ಬಾಮೈದನರೂ, ನಟೋರಿಯಸ್ ಲ್ಯಾಂಡ್ ಡೀಲರ್‌ಗಳೂ ಆದ ಕಾಮಾಕ್ಷಿಪಾಳ್ಯದ ಸಂಪತ್ತು ಮತ್ತು ಜಾನಿ ಬ್ರದರ್ಸ್!



ಇವರಿಬ್ಬರೂ ರಾಮಚಂದ್ರಗೌಡರ ಪತ್ನಿಯ ಶೋಧಮ್ಮನವರ ಖಾಸಾ ತಮ್ಮಂದಿರು!

ಸಜ್ಜೇಪಾಳ್ಯ ಲೇಔಟ್

ಅದು ನೂರೈವತ್ತು ಕೋಟಿಯ ಭಾರೀ ಲ್ಯಾಂಡ್ ಗ್ರ್ಯಾಬಿಂಗ್. ಇವತ್ತು ಮಾಳಗಾಳ ಮತ್ತು ಸಜ್ಜೆಪಾಳ್ಯದ 160 ಎಕರೆಯಷ್ಟು ಬಿಡಿಎ ಭೂಮಿಗೆ ಕಾಮಾಕ್ಷಿಪಾಳ್ಯದ ಖತರ್‌ನಾಕ್ ಭೂಕಂಟಕ ಜವರೇಗೌಡ, ಎ.ಬಿ. ಗೌಡ ಮತ್ತು ಮಂತ್ರಿ ರಾಮಚಂದ್ರಗೌಡರ ಬಾಮೈದುನರಾದ ಜಾನಿ-ಸಂಪತ್ತು ಬ್ರದರ್ಸ್ ನಾಲಿಗೆ ಚಾಚಿದ್ದೇ ಇಂಥಾದ್ದೊಂದು ದುರಂತದ ಮೂಲ.

ನಾಗರಬಾವಿಯ ರಿಂಗ್‌ರೋಡ್ ಮತ್ತು ಕಾಮಾಕ್ಷಿಪಾಳ್ಯದ ಮಾಗಡಿ ರೋಡ್‌ಗಳ ನಡುಭಾಗದ್ದೇ ಸಜ್ಜೇಪಾಳ್ಯ, ಇದರ ಪಕ್ಕದ ಮಾಳಗಾಳ ಸೇರಿದಂತೆ ಸರಿಸುಮಾರು 160 ಎಕರೆಗಳಷ್ಟು ಜಮೀನನ್ನು 1987 ರ ಜುಲೈ 9 ರಂದು ಬಿಡಿಎ ಸ್ವಾಧೀನಪಡಿಸಿಕೊಂಡಿದೆ. ಸುತ್ತೋಲೆ SLAO/A1/PR/193/87-88 ಪ್ರಕಾರ ಅದು ಸಜ್ಜೇಪಾಳ್ಯ ಲೇಔಟಗೆಂದು ಬಿಡಿಎ ವಶಪಡಿಸಿಕೊಂಡ ಸರ್ಕಾರಿ ಭೂಮಿ!


150 ಕೋಟಿಯ BDA ಆಸ್ತಿ ಗುಳುಂ!

ರೋಸತ್ತ ಜಮೀನ್ದಾರ್ ಪುಟ್ಟಸ್ವಾಮಿ ಅದನ್ನು ಒಕ್ಕಲಿಗ[...] ಸಂಘಕ್ಕೆ ದಾನ ಬರೆದರು.


ಹೀಗಿದ್ದೂ ಗೇಣಿ ಕಾಯ್ದೆಯಂತೆ ಇದು ಪೇಟೆ ಚನ್ನಪ್ಪ[...] ಮಕ್ಕಳಿಗೇ ಸೇರಬೇಕೆಂದು 1979 ರ[...] ಲ್ಯಾಂಡ್ ಟ್ರಿಬ್ಯೂನಲ್ ತೀರ್ಪಿತ್ತಿತ್ತು.

ನಟೋರಿಯಸ್ ಬಾಮೈದರು

ಸಜ್ಜೇಪಾಳ್ಯದ ಸ.ನಂ. 8 ರಲ್ಲಿ 17[...] ಎಕರೆ, ಸ.ನಂ. 13 ರಲ್ಲಿ 4.16 ಎಕರೆ[...] ಮಾಳಗಾಳದ ಸ.ನಂ. 43 ಮತ್ತು 44[...]ರಿಂದ ಒಟ್ಟೂ ಆರೆಕರೆಯಂತೆ ಒಟ್ಟೂ 37.16 ಎಕರೆ ಭೂಮಿ ಮರಿಯಪ್ಪನವ[...] ಪಾಲಾಯಿತಾದರೂ ಬಿಡಿಎ 1987 ರ[...] ಹೊತ್ತಿಗೆ ಅದನ್ನು ಸಜ್ಜೇಪಾಳ್ಯ ಲೇಔಟಗೆಂದು ವಶಪಡಿಸಿಕೊಂಡಿತ್ತು. 1996 ರ ಮೇ 10[...]ರಂದು ಈ ಬಗ್ಗೆ ನಗರಾಭಿವೃದ್ಧಿ ಸಚಿವಾಲಯವೇ ಅಂತಿಮ ಸುತ್ತೋಲೆ ಹೊರಡಿಸಿತು. UDO 716: MNx94 ಆದೇಶದ ಪ್ರಕಾರ 6(1) ನೋಟೀಸ್[...] ಗೊಳಪಟ್ಟ ಒಟ್ಟೂ 160 ಎಕರೆ ಭೂಮಿಯಲ್ಲಿ ನಿಜಕ್ಕೂ ಸಜ್ಜೇಪಾಳ್ಯ ಲೇಔಟ್ ತಲೆ ಎತ್ತಿದ್ದೇ ಆಗಿದ್ದರೆ ವಿಜಯನಗರದ ಪಕ್ಕಕ್ಕೇ ಸುಂದರ ಬಡಾವಣೆಯೊಂದು ರೂಪುಗೊಳ್ಳುತ್ತಿತ್ತು. ಆದರೆ ಆ ಹೊತ್ತಿಗಾಗಲೇ ರಾಮಚಂದ್ರಗೌಡರು ವಿಧಾನಪರಿಷತ್ ವಿರೋಧಿ ನಾಯಕರಾಗಿಬಿಟ್ಟಿದ್ದರು. ಕಾಮಾಕ್ಷಿಪಾಳ್ಯದ ಜಮೀನ್ದಾರ ಮರಿಯಪ್ಪ ಅವರಿಗೆ ಹೆಣ್ಣು ಕೊಟ್ಟ ಮಾವ[...] ಅವರ ಪತ್ನಿ ಯಶೋದಮ್ಮ ಈ ಮರಿಯಪ್ಪ[...] ಸ್ವಂತ ಮಗಳು. ಮರಿಯಪ್ಪ ಸತ್ತ ಮೇಲೆ ಸ್ವಾಧೀನ[...]



ಧ್ವಂಸಗೊಂಡ ಸ್ಲಮ್ಮು



ನೆಲಕಚ್ಚಿದ ಗುಡಿಸಲು, ನಿರ್ಗತಿಕ ಕನ್ನಡಿಗರು

ರಾಮಚಂದ್ರಗೌಡರಿಗೆ ಹೆಣ್ಣು ಕೊಟ್ಟ ಮಾವ ಮತ್ತು ಕಾಮಾಕ್ಷಿಪಾಳ್ಯದ ಹಿರಿಯ ಪೇಟೆ ಚನ್ನಪ್ಪನವರ ಮಗ ಮರಿಯಪ್ಪನವರಿಗೆ ಸೇರಿದ 37.16 ಎಕರೆ ಜಮೀನು ಬಿಡಿಎಗೆಂದು ಸ್ವಾಧೀನಗೊಂಡ ಸದರಿ ಭೂಮಿಗೆ ಸೇರಿಬಿಟ್ಟಿದೆ. ಮೂಲತಃ ಅದು ದಿವಂಗತ ಕೃಷ್ಣಪ್ಪನವರ ಪತ್ನಿ ರಂಗಮ್ಮನಿಗೆ ಸೇರಿದ ಜಮೀನಾಗಿತ್ತು. 1966 ರ ಫೆಬ್ರವರಿ 27 ರಂದು ಕೊನೆಯುಸಿರೆಳೆದ ರಂಗಮ್ಮ ಬರೆದಿಟ್ಟಿದ್ದ ವಿಲ್ಲಿನಂತೆ ಅದು ಬಿ.ಪಿ. ಪುಟ್ಟಸ್ವಾಮಿಗೆ ಸೇರಿತ್ತು. 1974 ರ ಹೊತ್ತಿಗೆ 'ಉಳುವವನೇ ಭೂ ಒಡೆಯ' ಕಾಯ್ದೆಯಂತೆ ಇದು ತಮಗೆ ಸೇರಬೇಕೆಂದು ಪೇಟೆ ಚನ್ನಪ್ಪನ ಮಕ್ಕಳಾದ ಮರಿಯಪ್ಪ ಮತ್ತು ಚಿಕ್ಕನರಸಿಂಹಯ್ಯ ಕೇಸು ಹಾಕಿಕೊಂಡರು. ಯಾವತ್ತು ಗೇಣಿ ಶಾಸನದ ಪ್ರಕಾರ ಕೇಸು ಬಿತ್ತೋ[...]

ಗೊಂಡ ಭೂಮಿಗೆ ಯಶೋದಮ್ಮನವರ ತಮ್ಮಂದಿರಾ[...] ಜಾನಿ ಮತ್ತು ಸಂಪತ್ತು ವಾರಸುದಾರಾದರು. ತನ್ಮೂಲ[...] 37.16 ಎಕರೆಗಳಷ್ಟು ಭೂಮಿಯಲ್ಲಿ ಅಳಿಯ ರಾಮಚಂ[...]ಗೌಡರಿಗೂ ಹಕ್ಕು ಪ್ರಾಪ್ತಿಯಾಗಿತ್ತು.

ಯಾವತ್ತು ಲೇಔಟ್ ನಿರ್ಮಾಣಕ್ಕೆಂದು ಬಿಡಿ[...] ಇಂಜಿನಿಯರ್‌ಗಳು ಸಜ್ಜೇಪಾಳ್ಯಕ್ಕೆ ಕಾಲಿಟ್ಟರೋ ರಾಮಚಂ[...]ಗೌಡರೇ ನಿಂತು ಅವರಿಗೆ ಘೇರಾವ್ ಮಾಡಿಸಿ ಓಡಿ[...]ಬಿಟ್ಟರು. ಆಗ ಮುಖ್ಯಮಂತ್ರಿಯಾಗಿದ್ದ ಪಟೇಲರಿಗ[...] ಶಕ್ತ್ಯಾನುಸಾರ ಮಸ್ಕಾ ಹೊಡೆದರು. ಮುಂದೆ ಎಸ್.ಎ[...] ಕೃಷ್ಣ ಮುಖ್ಯಮಂತ್ರಿಯಾಗಿದ್ದೇ ವಿರೋಧಿ ಬಿಜೆಪಿ ನಾಯ[...] ರಾಮಚಂದ್ರಗೌಡರಿಗೆ ಅದೃಷ್ಟವೇ ಒಲಿದು ಬಂದಿತ[...]

ರಾಮನ ರೂಪ ರಾವಣ ಪಾಪ!

ಹುಟ್ಟಾ ಒಕ್ಕಲಿಗರಾದರೂ ಪ್ರವೃತ್ತಿಯಲ್ಲಿ ರಾಮಚಂದ್ರಗೌಡರು ಗೌಡ ಬ್ರಾಹ್ಮಣ! ಮಾತೆತ್ತಿದರೆ ದೇಶಭಕ್ತಿಯ ಭಾಷಣ ಕುಟ್ಟುತ್ತಾರೆ. ಭ್ರಷ್ಟಾಚಾರದ ವಿರುದ್ಧ ಕಿಡಿಕಾರುತ್ತಾರೆ. ಆದರೆ ಇವತ್ತಿನ ಅವರ ಆಸ್ತಿ-ಪಾಸ್ತಿಯ ಲೆಕ್ಕ ಹಾಕುತ್ತಾ ಹೋದರೆ ಅದು ರಾಮಚಂದ್ರಗೌಡರ ಮಾತಿಗೂ ಕೃತಿಗೂ ಇವರ ಕಂದಕದ ಪ್ರತ್ಯಕ್ಷ ದರ್ಶನವಾಗುತ್ತದೆ.

ದುಡ್ಡಿನ ಲೋಭ ಯಾರಿಗಿಲ್ಲ? ಹಾಗಂತ ರಕ್ತಗತವಾಗಿರುವ ಆರೆಸ್ಸೆಸ್ ಸಂಸ್ಕಾರವಾದರೂ (?) ಇರಬೇಕಿತ್ತಲ್ಲ?

ವಿಕಟವೆಂದರೆ ಮಂತ್ರಿ ರಾಮಚಂದ್ರಗೌಡರ ಕುಲಪುತ್ರ ಗಿರೀಶನೇ ಕೆಲ ತಿಂಗಳ ಹಿಂದೆ ಬಸವೇಶ್ವರ ನಗರದ ಸಾಯಿ ಕಾಲೇಜಿನ ಹುಡುಗಿಯರನ್ನು ಪೀಡಿಸಲು ಹೋಗಿ ಪೊಲೀಸರ ಕೈಗೆ ಸಿಕ್ಕುಬಿದ್ದ. ಪೋರ್ಕಿ ಪಡೆಯೊಂದಿಗೆ ಪಕ್ಕಾ ಫಂಕ್ ಗೆಟಪ್ಪಿನಲ್ಲಿ ಬೈಕೆತ್ತಿಕೊಂಡು ನಡುರಸ್ತೆಯಲ್ಲಿ ವೀಲ್ಲಿಂಗ್ ಮಾಡುತ್ತಾ ಯುವತಿಯರನ್ನು ಕಿಚಾಯಿಸುತ್ತಿದ್ದ ಗಿರೀಶನನ್ನು ಬಸವೇಶ್ವರನಗರದ ನಿಷ್ಠುರಿ ಸಬ್ ಇನ್ಸಪೆಕ್ಟರ್ ಓಂಪ್ರಕಾಶ್ ಹಿಡಿದು ಲಾಕಪ್ಪಿಗೆ ದಬ್ಬಿ ಸಮಾ ರುಬ್ಬಿದ್ದರು. ಸಾಕ್ಷಾತ್ ಶ್ರೀರಾಮಚಂದ್ರನಂತೆ ಪೋಜು ಕೊಡುವ ರಾಮಚಂದ್ರಗೌಡ ಒಬ್ಬ ಜವಾಬ್ದಾರಿಯುತ ತಂದೆಯಾಗಿ ಮಗನಿಗೆ ಬುದ್ಧಿ ಹೇಳಬೇಕಿತ್ತು. ಬದಲಾಗಿ ಎಸ್. ಐ. ಓಂಪ್ರಕಾಶ್‌ರನ್ನೇ ಸಸ್ಪೆಂಡ್ ಮಾಡಿ ಎಂದು ಹಠಕ್ಕೆ ಬಿದ್ದರು. ಬಾಮೈದರಾದ ಜಾನಿ-ಸಂಪತ್ತು ಗ್ಯಾಂಗನ್ನು ಪೊಲೀಸ್ ಠಾಣೆಗೇ ನುಗ್ಗಿಸಿದರು.



ಓಂಪ್ರಕಾಶ್

ಇದು ರಾಮಚಂದ್ರಗೌಡರ ತತ್ವಾದರ್ಶ! ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಓರ್ವ ಜವಾಬ್ದಾರಿಯುತ ವಿರೋಧಿ ನಾಯಕನಾಗಲಿಲ್ಲ, ಕನಿಷ್ಠ ಕಾಂಗ್ರೆಸ್ ವಿರೋಧಕ್ಕಾದರೂ ಕೂಲಿಗಾಗಿ ಕಾಳು, ಬರಗಾಲ, ಅತಿವೃಷ್ಟಿ ಕಾಮಗಾರಿ ಸ್ಕ್ಯಾಂಡಲ್, ದೇಶಪಾಂಡೆಯ ಭೂಕಬಳಿಕೆ, ಅಳಿಯ ಸಿದ್ಧಾರ್ಥನ ಲ್ಯಾಂಡ್ ಗ್ರ್ಯಾಬಿಂಗ್, ಕೆಐಎಡಿಬಿ ಕರ್ಮಕಾಂಡ ಇತ್ಯಾದಿಗಳ ವಿರುದ್ಧ ಬಿಜೆಪಿ ಬೀದಿಗಿಳಿಯಬೇಕಿತ್ತು, ರಾಮಚಂದ್ರಗೌಡ ಅದರ ಮುಂಚೂಣಿಯಲ್ಲಿರಬೇಕಿತ್ತು.

ಊಹ್ಞೂಂ, ಹಾಗಾಗಲೇ ಇಲ್ಲ, ವಿರೋಧದ ನಾಟಕ ಮಾಡಿಕೊಂಡೇ ಕೃಷ್ಣರೊಡನೆ ಊಟಕ್ಕೆ ಕುಂತರು. ಜನಕ್ಕೆ ದ್ರೋಹ ಬಗೆದರು. ಅದರ ಫಲವೇ ತಾನೇ ಮಾಳಗಾಳದ 21.16 ಎಕರೆ ಬಿಡಿಎ ಲ್ಯಾಂಡು[...]


ಈಗದು ನೂರೈವತ್ತು ಕೋಟಿಯಾಗಿದೆ!

ರಾಮಚಂದ್ರಗೌಡರ ಮೂರ[...] ತಲೆಮಾರು ಕುಂತು ಉಂಡರೂ ಕರಗದ ಸೊತ್ತಾಗಿದೆ.

ಜನಘಾತುಕ ರಾಜಕಾರಣಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಯಾವುದೂ ಗೊತ್ತಿರದಿದ್ದರೂ, ಯಲ್ಲವೂ ಗೊತ್ತು ಎಂದು ಭಾವಿಸಿರುವವನೇ ರಾಜಕಾರಣಿ - ಬರ್ನಾರ್ಡ್ ಬಾರುಚ್

ಯಾವ ರಾಮಚಂದ್ರಗೌಡರ ಮಾನ ಮರಿಯಪ್ಪನವರ ಭೂಮಿಯನ್ನು ಬಿಡಿಎ ವಶಪಡಿಸಿಕೊಂಡಿತ್ತೋ, ಈ ಪೈಕಿ 21.16 ಎಕರೆಗಳಷ್ಟನ್ನು ಸಚಿವ ಸಂಪುಟದ ವಿಶೇಷ ಸಭೆಯಲ್ಲಿಟ್ಟು ಡೀನೋಟಿಫೈ ಮಾಡುವಂತೆ ಮುಖ್ಯಮಂತ್ರಿ ಕೃಷ್ಣರೇ ಠರಾವು ಪಾಸು ಮಾಡಿಸಿಬಿಟ್ಟರು!


ಜಾನಿ ಉರುಫ್ ಜನಾರ್ದನ್

ರಾಮ-ಕೃಷ್ಣ ಅನೈತಿಕ ಮೈತ್ರಿ

ಹೀಗೆ UDO/309/MNX/2001 ರ ಆದೇಶದಂತೆ 2005ರ ಜನವರಿ 5ರಂದು ಸದರಿ 21.16 ಎಕರೆಯನ್ನು ಡೀನೋಟಿಫೈ ಮಾಡುವಂತೆ ನಗರಾಭಿವೃದ್ಧಿ ಸಚಿವಾಲಯವೇ ಆದೇಶ ಹೊರಡಿಸಿತ್ತು!

ಮುಖ್ಯಮಂತ್ರಿ ಕೃಷ್ಣ ಮತ್ತು ವಿರೋಧಿ ನಾಯಕ ರಾಮಚಂದ್ರಗೌಡರ ಅನೈತಿಕ ಸಂಬಂಧದ ಪ್ರತಿಫಲವಾಗಿ ಲೂಟಿಗೊಂಡ 21.16 ಎಕರೆ ಬಿಡಿಎ ಜಮೀನಿನ ಹಾಲಿ ಮಾರುಕಟ್ಟೆ ಮೌಲ್ಯವೆಷ್ಟು ಗೊತ್ತೆ?

ಕಮ್ಮಿಯೆಂದರೂ 150 ಕೋಟಿ!

ಚದುರ ಅಡಿಗೆ ಕನಿಷ್ಠ 1700 ರೂಪಾಯಿಯಂತೆ ಕೊಟ್ಟರೂ ಅದು ನೂರೈವತ್ತು ಕೋಟಿಯನ್ನು ಮೀರುವ ಸೊತ್ತಾಗುತ್ತದೆ. ಆದರೆ ಇದಕ್ಕೆಂದು ಆಗ ಮುಖ್ಯಮಂತ್ರಿಯಾಗಿದ್ದ ಕೃಷ್ಣ ಎಸಗಿದ ಅಕ್ರಮಗಳದ್ದೇ ಮತ್ತೊಂದು ಇಂಟರೆಸ್ಟಿಂಗ್ ಸ್ಟೋರಿಯಿದೆ.

ಒಮ್ಮೆ 6(1) ಪ್ರಕಾರ ಅಂತಿಮ ನೋಟೀಸಿಗೀಡಾದ ಬಿಡಿಎ ಭೂಮಿಯನ್ನು ಡೀನೋಟಿಫೈ ಮಾಡಿದ್ದೇ ಅಕ್ರಮವಾಗಿತ್ತು. ಹಾಗೊಮ್ಮೆ ಡೀನೋಟಿಫೈ ಮಾಡಬೇಕಿದ್ದರೆ ಅದಕ್ಕೆ ಸಾರ್ವಜನಿಕ ಹಿತಾಸಕ್ತಿಯ ಉದ್ದೇಶವಿರಬೇಕು. ಅದು ಸಂಪುಟದ ಕ್ಯಾಬಿನೆಟ್ ಸಭೆಯಲ್ಲಿ ಒಪ್ಪಿಗೆ ಪಡೆದುಕೊಳ್ಳಬೇಕು. ಇದ್ಯಾವುದೂ ಇಲ್ಲದೇ ಆಗಿನ ಮುಖ್ಯಮಂತ್ರಿ ಕೃಷ್ಣ ಸ್ವಾಧೀನಕ್ಕೀಡಾದ ಒಟ್ಟೂ 160 ಎಕರೆಗಳ ಪೈಕಿ ಬಿಜೆಪಿ ನಾಯಕ ರಾಮಚಂದ್ರಗೌಡರ ಪತ್ನಿ ಯಶೋದಮ್ಮ ಮತ್ತವರ ತಮ್ಮಂದಿರಿಗೆ ಸೇರಿದ ಕೇವಲ 21.16 ಎಕರೆ ಸೊತ್ತೊಂದಕ್ಕೇ ವಿನಾಯ್ತಿ ಕೊಟ್ಟಿದ್ದೇಕೆ?


ಭಾಮೈದ ಸಂಪತ್‌ಕುಮಾರ್

ಇದು ಪ್ರಶ್ನೆ. ಇದನ್ನೇ ಪ್ರಶ್ನಿಸಿ ಸಜ್ಜೆಪಾಳ್ಯ ಮತ್ತು ಮಾಳಗಾಳದ ಇತರೇ ಪೀಡಿತ ಜಮೀನ್ದಾರರು ಹೈಕೋರ್ಟಿಗೆ ಮೊರೆ ಹೋದರು. ಕೋರ್ಟು ಈ ನಿಮಿತ್ತ ಬಿಡಿಎಗೆ ನೋಟೀಸನ್ನು ಜಾರಿ ಮಾಡಿತು. ಇದೆಲ್ಲಕ್ಕೂ ಮೊದಲೇ ಅಲ್ಲಿ ರಾಯಚೂರಿನಿಂದ ವಲಸೆ ಬಂದಿದ್ದ ಮುನ್ನೂರಕ್ಕೂ ಅಧಿಕ ದಲಿತ-ಕನ್ನಡಿಗ ಕೂಲಿ ಕಾರ್ಮಿಕರು ಗುಡಿಸಲು ಹಾಕಿದ್ದರು. ಅವರೆಲ್ಲ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರಾಗಿದ್ದರು. ರಕ್ಷಣಾ ವೇದಿಕೆಯ ನಾಯಕ ನಾರಾಯಣಗೌಡರೇ ನಿಂತು ಅಲ್ಲೊಂದು ಕನ್ನಡ ಬಾವುಟ ನೆಟ್ಟಿದ್ದರು. ಇಷ್ಟರಲ್ಲೇ ಅವರಿಗೆ ಸ್ಲಂ ಬೋರ್ಡಿನ ಹಕ್ಕುಪತ್ರ ಕೊಡಿಸುವ ಪ್ರಯತ್ನವೂ ನಡೆದಿತ್ತು,

ಮುಂಬಯಿ ಮಾರ್ವಾಡಿಗೆ!

ಆದರೆ ಮೊನ್ನೆ ಬೆಳ್ಳಂಬೆಳಿಗ್ಗೆ ನಡೆದ ಬಿಜೆಪಿ ರೌಡಿಗಳ ದಾಳಿಗೆ ಈ ನಿರ್ಗತಿಕ ಕನ್ನಡಿಗರ ಕನಸೆಲ್ಲ ಮಣ್ಣುಪಾಲಾಗಿ ಹೋಗಿದೆ!

ಒಂದು ಮೂಲದ ಪ್ರಕಾರ ರಾಮಚಂದ್ರಗೌಡರಿಗಿಂದು ಸದರಿ ಭೂಮಿಯನ್ನು ಮುಂಬಯಿ ಮಾರ್ವಾಡಿಯೊಬ್ಬನಿಗೆ ಮಾರಬೇಕಿದೆ. ಅದಕ್ಕೆಂದು ಹುಟ್ಟಾ ಭೂಕಂಟಕರಾದ ತಮ್ಮಿಬ್ಬರು ಭಾಮೈದರನ್ನು ಬಿಟ್ಟಿದ್ದಾರೆ. ಜಾನಿ ಮತ್ತು ಸಂಪತ್ತು ಜೊತೆ ಕಡಬಗೆರೆಯ ರೌಡಿ ಮಚ್ಚನ ಕೊಲೆ ಕೇಸಿನ ಹಂತಕ ಪಾಯ್ಸನ್ ರಾಮನ ಗ್ಯಾಂಗು ರಾಯಚೂರಿನ ನಿರ್ಗತಿಕರನ್ನು ಹೊಡೆದೋಡಿಸಿದೆ. ಸುದ್ದಿ ಪತ್ರಿಕೆಗಳಿಗೆ ಮುಟ್ಟದ ಹಾಗೆ, ಹೊರಜಗತ್ತಿಗೆ ಗೊತ್ತಾಗದಂತೆ ಬೆಳ್ಳಂಬೆಳಿಗ್ಗೆಯೇ ರೌಡಿ ಗ್ಯಾಂಗ್ ಕಾರ್ಯಾಚರಣೆ ನಡೆಸಿದೆ. ಕನಿಷ್ಠ ಬೈನಾ ಬೀಚಿನ ಕನ್ನಡಿಗರಿಗೆ ಸಂಘಟನೆಗಳಿದ್ದವು. ಮೀಡಿಯಾ ನೆರವಿಗೆ ಬಂತು. ಅದೇ ಬೆಂಗಳೂರಿನ ಈ ಬಡಕೂಲಿಗಳ ಪಾಲಿಗೆ ಯಾರೂ ಇಲ್ಲ!


ಅಷ್ಟಕ್ಕೂ ಮಾಳಗಾಳದ ಸ.ನಂ. 13 ರಲ್ಲಿದ್ದ ಬಡ ದಲಿತರನ್ನು ಹೊಡೆದು ಬಡಿದು ಖಾಲಿ ಮಾಡಿಸುವ ಅಧಿಕಾರವನ್ನು ಬಿಜೆಪಿಯ ರೌಡಿಗಳಿಗೆ ಕೊಟ್ಟವರ್‍ಯಾರು?

ಹೇಳಿಕೇಳಿ ಅದು ಬಿಡಿಎ ಆಸ್ತಿ, ಹೈಕೋರ್ಟಿನಲ್ಲಿನ್ನೂ ವಿಚಾರಣೆ ಬಾಕಿಯಿದೆ. ಈಗಲೇ ಅದನ್ನು ಮಾರುವ ಅಧಿಕಾರವನ್ನು ಲಾಟರಿ ಮಂತ್ರಿಯ ನೆಂಟರಿಗೆ ಕೊಟ್ಟವರ್‍ಯಾರು? ಯಾವ ಸಾರ್ವಜನಿಕ ಹಿತಾಸಕ್ತಿಗೆಂದು ಮಾಜಿ ಮುಖ್ಯಮಂತ್ರಿ ಕೃಷ್ಣ ನೂರೈವತ್ತು ಕೋಟಿ ರೂಪಾಯಿ ಬೆಲೆಬಾಳುವ ಬಿಡಿಎ ಸೊತ್ತನ್ನು ಬಿಜೆಪಿ ನಾಯಕ ರಾಮಚಂದ್ರಗೌಡರ ಬಾಯಿಗಿಟ್ಟರು. ಡೀನೋಟಿಫೈ ಮಾಡುವುದೇ ಆದಲ್ಲಿ ಮಿಕ್ಕ 160 ಎಕರೆಯನ್ನೂ ಏಕೆ ಮಾಡಿಲ್ಲ? ಬೇರೆಲ್ಲರ ಭೂಮಿಯನ್ನು ಕಿತ್ತುಕೊಂಡು ಈ ಸೊತ್ತೊಂದಕ್ಕೇ ವಿನಾಯ್ತಿ ತೋರಿದ್ದೇಕೆ? ಮಿಕ್ಕೆಲ್ಲರಿಗೂ ಒಂದು ಕಾನೂನು, ಲಾಟರಿ ಮಂತ್ರಿಗೇ ಮತ್ತೊಂದು ಕಾನೂನೆ?

ಬಡ ದಲಿತರ ಸ್ಲಮ್ಮಿನ ಮೇಲೆ ನಡೆದ ರೌಡಿ ದಾಳಿಯನ್ನು ಯಾರೂ ಪ್ರಶ್ನಿಸುತ್ತಿಲ್ಲ ಏಕೆ?

ಬೈನಾ ಬೀಚಿನಲ್ಲಾದರೆ ಮಾತ್ರ ನೋವು ಅದೇ ಬೆಂಗಳೂರಿನಲ್ಲಾದರೆ ಹೂವೆ? ■

ಸರ್ಕಾರದ ವಿಶೇಷ ಗೆಜೆಟ್ ಪ್ರಕಟಣೆ


ಕರ್ನಾಟಕ ರಾಜ್ಯಪತ್ರ

ವಿಶೇಷ ಪತ್ರಿಕೆ

ಭಾಗ - III

SCHEDULE

DISTRICT : BANGALORE TALUK : BANGALORE - NORTH HOBLI : YESHWANTAPURA VILLAGE : [illegible]

Sl. No.	Name of the Khatedar/Anubhavadar Sri/Smt	Sy.No.	Dry/Wet/Garden	Total Extent	Kharab	Remaining Extent	Assessment	Extent Acquired	Extent with drawn	East	West	North	South
1	2	3	4	5	6	7	8	9	10	11	12	13	14
01.	Rangamma W/o Krishnappa, Madyappa	8	Dry	17-00	[illegible]	17-00	1-11	17-00	17-00	8,15	Halla	7,6	Halla
02.	Rangamma W/o Krishnappa, Narjappa, Kennachennaiah, GopalaKrishnagowda, Mariyappa	13	Dry	13-16	[illegible]	13-16	7-11	13-16	4-16	Malagala Gadi	14	13	Malagala Gadi

TOTAL EXTENT WITH DRAWN 21 ACRES 16 GUNTAS (Twenty One Acres and Sixteen Guntas Dry)

By Order and in the name of the Governor of Karnataka

V.R.ILKAL
Under Secretary to Government
Urban Development Department

ಬಿಜೆಪಿ ಮಾನ ಅಡಿಕೆಗೆ ಆನೆಯ ಕೊಳ್ಳೆ ಕೃಷ್ಣಂಗೆ!

ಕರ್ನಾಟಕದ ಗೆಜೆಟ್ಟಿನ 2005ರ ಜನವರಿ5ರ ವಿಶೇಷ ಪತ್ರಿಕೆಯಲ್ಲಿ ನಗರಾಭಿವೃದ್ಧಿ ಅಂಡರ್ ಸೆಕ್ರೆಟರಿ ಎ.ಆರ್. ಇಳಕಲ್ ಹೊರಡಿಸಿದ ವಿಶೇಷ ಆದೇಶ ಸಂಖ್ಯೆ UDD\309\MNX\2001ರ ಪ್ರಕಾರ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ ಸಜ್ಜೆ ಪಾಳ್ಯದ ಸ.ನಂ. 8ರಲ್ಲಿ 17 ಎಕರೆ ಮತ್ತು ಮಾಳಗಾಳದ ಸ.ನಂ.13ರಲ್ಲಿ 4.16 ಎಕರೆಯಂತೆ ಒಟ್ಟು 21.16 ಎಕರೆ ಬಿಡಿಎ ಸೊತ್ತನ್ನು ಡಿನೋಟಿಫೈ ಮಾಡಲಾಗಿದೆ. ಈ ಬಗ್ಗೆ ಕರ್ನಾಟಕದ ರಾಜ್ಯಪತ್ರದ (ಗೆಜೆಟ್) ವಿಶೇಷ ಪ್ರತಿಯನ್ನೂ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಯಾವ ಕಾರಣಕ್ಕೆ? ಯಾವ ಕಾಯ್ದೆಯಂತೆ ಈ ರೀತಿ 150 ಕೋಟಿ ಮೊತ್ತದ ಸೊತ್ತನ್ನು ಡಿನೋಟಿಫೈ ಮಾಡಿದ್ದೀರೆಂದು ಬಿಜೆಪಿ ಪ್ರಶ್ನಿಸಬೇಕಿತ್ತು, ವಿರೋಧಿ ನಾಯಕ ಯಡಿಯೂರಪ್ಪನವರಾದರೂ ಗುಡುಗಬೇಕಿತ್ತು. ಎಸ್.ಎಂ. ಕೃಷ್ಣರ ಇಂಥ ಅನೇಕ ಅಕ್ರಮಗಳ ಸರಮಾಲೆಯನ್ನೇ ಆವತ್ತು ಜೆಡಿಎಸ್ ನಾಯಕ ಚಕ್ರಪಾಣಿ ಬಯಲಿಗೆಳೆದಿದ್ದರು. ಯಾವ ರಾಮಚಂದ್ರಗೌಡರಿಗೆಂದು ಕೃಷ್ಣ 21.16 ಎಕರೆ ಡಿನೋಟಿಫೈ ಮಾಡಿಕೊಟ್ಟರೋ ಅದೇ ಹಂಗಿಗೆ ಇಡೀ ಬಿಜೆಪಿಯನ್ನೇ ಕೆಡವಿಕೊಂಡು ಅಳಿಯ ಸಿದ್ದಾರ್ಥ, ರೆಡ್ಡಿ ವೀರಣ್ಣ ಕುಪೇಂದ್ರ ರೆಡ್ಡಿ, ದಯಾನಂದ ಪೈ, ಇರ್ಫಾನ್ ರಜಾಕ್, ಪೂರ್ವಂಕರ, ಮಂತ್ರಿ ಇತ್ಯಾದಿ ಡೆವಲಪರ್‌ಗಳಿಗೆಂದು ಎರಡು ಸಾವಿರಕ್ಕೂ ಅಧಿಕ ಬಿಡಿಎ ಭೂಮಿಯನ್ನು ಡಿನೋಟಿಫೈ ಮಾಡಿ ಧಾರೆಯೆರೆದರು. ಅಡಿಕೆಗೆ ಹೋದ ಬಿಜೆಪಿ ಮಾನಕ್ಕೆ ಆನೆಯ ಕೊಳ್ಳೆಯನ್ನು ಕಾಂಗ್ರೆಸ್ ಹೊಡೆದಿತ್ತು, ಭೂಕಬಳಿಕೆಗೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಲ್ಲರೂ ಒಂದೇ ದೋಣಿಯ ಕಳ್ಳರು! ■

ಕಾಂತಾ ಹೇಗೆ ಅಲ್ಲೋಡ್, ದರ್ಶನಾಪುರರಿಗೆ ಸ್ಪರ್ಧಿ?

ಕಲಬುರ್ಗಿ


ಕಲಬುರ್ಗಿ ಜಿಲ್ಲೆಯ ದಿಟ್ಟ ಹೋರಾಟಗಾರ, ಮಾಜಿ ಮಂತ್ರಿ ಎಸ್.ಕೆ. ಕಾಂತಾ ಲೋಕಾಯುಕ್ತಕ್ಕೆ ದರ್ಶನಾಪುರ ಹಾಗೂ ಅಲ್ಲೋಡ ಹನುಮಂತಪ್ಪ ಎಂಬ ಎಬಡ ರಾಜಕಾರಣಿಗಳ ವಿರುದ್ಧ ಆಸ್ತಿ ವಿವರಕ್ಕೆ ಸಂಬಂಧಪಟ್ಟಂತೆ ದೂರು ಸಲ್ಲಿಸಿದಾಗಿನಿಂದಲೂ ಸಚಿವರಿಬ್ಬರು ಅಂದು ಸುಟ್ಟ ಬೆಕ್ಕಿನಂತೆ ಒಂದೇ ಸಮ ಚೀರಾಡುತ್ತಿದ್ದರು. ಕೊನೆಗೆಲ್ಲಿ ಮಂತ್ರಿಗಿರಿಗೆ ಮುಕ್ತಿ ಸಿಕ್ಕು ತವರುಮನೆಯ ದಾರಿ ಹಿಡಿಯಬೇಕಾಗುತ್ತದೋ ಎಂದೇ ಚಿಂತಾಕ್ರಾಂತರಾಗಿ ಕೋರ್ಟಿನ ಮೊರೆ ಹೊಕ್ಕಿದ್ದರು. ಆದರೆ ಕೋರ್ಟ್ ತನ್ನ ಅಂಗಳದಲ್ಲಿಯ ಚೆಂಡನ್ನು ಕುಮಾರಸ್ವಾಮಿಯ ಕಡೆಗೆ ಎಸೆದು ಬಿಟ್ಟು ಮುಖ್ಯಮಂತ್ರಿಗೆ ಪೀಕಲಾಟವನ್ನೇ ತಂದಿಟ್ಟುಬಿಟ್ಟಿತ್ತು,


ಆದರೇನಂತೆ? ಕುಮಾರಸ್ವಾಮಿಯೂ ಹತ್ತರೊಳಗಿನ ಹನ್ನೊಂದನೆಯ ರಾಜಕಾರಣಿಯಲ್ಲವೆ? ಜನಸಾಮಾನ್ಯರೆಲ್ಲ ಊಹಿಸಿದಂತೆ ಮತ್ತೆ ಶರಣಬಸಪ್ಪ ದರ್ಶನಾಪುರ ಹಾಗೂ ಹನುಮಂತಪ್ಪ ಅಲ್ಲೋಡರಿಗೆ ಮಂತ್ರಿಗಿರಿಯ ಜೀವದಾನ ನೀಡಿದ್ದಾರೆ. ಆದರೆ ಜನಸಾಮಾನ್ಯರ ಕಣ್ಣಲ್ಲಿ ಕುಮಾರ ಸ್ವಾಮಿ, ಸುಮಾರಸ್ವಾಮಿಯಾಗಿ ಕಂಗೊಳಿಸಿದ್ದಂತೂ ಸ್ಪಷ್ಟ. ಯಾಕೆಂದರೆ ಅದೇ ಕೋರ್ಟಿಗೆ ಸಚಿವದ್ವಯರಿಬ್ಬರು ಹಾದಿಬ್ಬರು ಮಾತ್ರ ಸರಿಯಾದ ಸಮಯಕ್ಕೆ ಆಸ್ತಿ ವಿವರ ಸಲ್ಲಿಸದವರಲ್ಲ, ನನ್ನ ಜೊತೆಗೆ ಮುಖ್ಯಮಂತ್ರಿ ಕುಮಾರ ಸ್ವಾಮಿ ಆದಿಯಾಗಿ ನಾಲ್ವತ್ತು ಜನ ಮಂತ್ರಿಗಳೂ ಇರುವುದನ್ನು ಅಫಿಡವಿಟ್ ಮೂಲಕ ತಿಳಿಸಿದ್ದರು.

ಇದನ್ನೆಲ್ಲ ಮನಗಂಡ ಸುಮಾರಸ್ವಾಮಿ ತನ್ನ ಅಂಡಿನ ಕೆಳಗೆ ನೀರು ಬರುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಲೋಕಾಯುಕ್ತರ ಶಿಫಾರಸ್ಸು ಕಠಿಣ ಕ್ರಮ ಅಂತಲೇ ಬಣ್ಣಿಸಿದ್ದಾರೆ. ಲೋಕಾಯುಕ್ತರ ಶಿಫಾರಸ್ಸನ್ನೇ ಒಬ್ಬ ಮುಖ್ಯಮಂತ್ರಿಯೇ ತನ್ನ ಕಾಲ ಕೆಳಗೆ ಹಾಕಿ ತನ್ನ ಸ್ವಹಿತಾಸಕ್ತಿಗಾಗಿ ತುಳಿದು ಹಾಕುತ್ತಾನೆಂದರೆ ಇನ್ನೊಬ್ಬರು ಈ ನೆಲದ ಕಾನೂನನ್ನು ಅದು ಹೇಗೆ ಗೌರವಿಸಬಲ್ಲರು?

ಹಾಗೆ ನೋಡಿದರೆ ಮುಖ್ಯಮಂತ್ರಿ ಸು(ಕು)ಮಾರಸ್ವಾಮಿ ಲೋಕಾಯುಕ್ತರ ಶಿಫಾರಸ್ಸಿಗೆ ನೀಡಿದ ಕಾರಣಗಳು ಅತ್ಯಂತ ಬಾಲಿಶವಾದವುಗಳಾಗಿವೆ. ಲೋಕಾ ಯುಕ್ತರ ಶಿಫಾರಸ್ಸು ಅತ್ಯಂತ ಕಠಿಣ ಕ್ರಮವೆಂತಲೂ ಬಣ್ಣಿಸಿದ್ದಾರೆ. ಜೊತೆಗೆ ಎಸ್.ಕೆ. ಕಾಂತಾ ಮಂತ್ರಿಗಳಿಬ್ಬರ ರಾಜಕೀಯ ದ್ವೇಷಿಯಾಗಿದ್ದಾರೆಂತಲೂ ಆರೋಪ ಮಾಡಿದ್ದಾರೆ. ಆದರೆ ಕರ್ನಾಟಕದ ಪ್ರಜ್ಞಾವಂತ ಜನತೆಗೆ ಮುಖ್ಯಮಂತ್ರಿ ತಪ್ಪು ಹೇಳಿಕೆಗಳನ್ನು ನೀಡುವ ಮೂಲಕ ತಾವು ಎಂಥ ಗುಣಮಟ್ಟದ ರಾಜಕಾರಣಿ ಎಂದು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ.

ಹೈದ್ರಾಬಾದ್ ಕರ್ನಾಟಕದ ಬಹುತೇಕ ಜನ ಬಲ್ಲಂತೆ ಅವರಿಗೆ ಆಗಲಿ ಅಲ್ಲೋಡರಿಗೆ ಆಗಲಿ ಕಾಂತಾ ಎಂದೂ ಪ್ರತಿಸ್ಪರ್ಧಿ ಅಲ್ಲವೇ ಅಲ್ಲ, ಇದು ಸೂರ್ಯಪ್ರಕಾಶದಷ್ಟು ಸತ್ಯ, ಕಾಂತಾ ಅವರ ಮತ ಕ್ಷೇತ್ರ ಕಲಬುರ್ಗಿ. ಅವರು ವಾಸವಾಗಿರುವುದು, ಅವರ ಸಮಾಜ ಚಟುವಟಿಕೆಗಳ ಕಾರ್ಯಸ್ಥಾನವಾಗಿರುವುದೂ ಕಲಬುರ್ಗಿ. ವಸ್ತುಸ್ಥಿತಿ ಹೀಗಿರುವಾಗ ದೂರದ ದೇವ ದುರ್ಗ ಹಾಗೂ ಶಹಾಪುರ ಮತ ಕ್ಷೇತ್ರದ ಅಲ್ಲೋಡ ಹನುಮಂತಪ್ಪ ಹಾಗೂ ದರ್ಶನಾಪುರಗೆ ಕಾಂತಾ ಅದು ಹೇಗೆ ಪ್ರತಿಸ್ಪರ್ಧಿಯಾಗಿದ್ದಾರೋ?! ಅದನ್ನು ಮುಖ್ಯಮಂತ್ರಿ ಗಳೆ ಜನರಿಗೆ ತಿಳಿಸಿ ಹೇಳಬೇಕು.


ದರ್ಶನಾಪುರ


ಅಲ್ಲೋಡ್ ಹನುಮಂತಪ್ಪ

ಮತ್ತೊಂದು ಆಶ್ಚರ್ಯದ ಸಂಗತಿ ಯೆಂದರೆ ಎಸ್.ಕೆ. ಕಾಂತಾ ಅವರೇನು ಕಾಂಗ್ರೆಸ್ ಪಕ್ಷದ ವಕ್ತಾರರಲ್ಲ, ಅವರೂ ಜೆಡಿಸಿ ಪಕ್ಷದ ಕಲಬುರ್ಗಿ ಜಿಲ್ಲೆಯ ಧುರೀಣರು. ಇಷ್ಟು ಮಾತ್ರ ಖರೆ. ದರ್ಶನಾಪುರ ಹಾಗೂ ಅಲ್ಲೋಡ್ ಹನುಮಂತಪ್ಪನವರಂತೆ ಕುಮಾರಸ್ವಾಮಿ-ದೇವೇಗೌಡ ಮುಂತಾದವರೆ ಆಗಿದ್ದರು ಅವರ ಮನೆಯ ಊಳಿಗಕ್ಕೆ ಎಂದೂ ನಿಂತವರಲ್ಲ, ಮೌಲ್ಯಾಧಾರಿತ ರಾಜಕಾರಣಿ ಎಂದು ಬಡಾಯಿಕೊಚ್ಚಿಕೊಳ್ಳುತ್ತಲೇ ರೇವಜೀತು-ಹಾಗೂ ಬಾಟ್ಲಿಂಗ್ ಭ್ರಷ್ಟಾಚಾರದ ಹಗರಣಗಳಲ್ಲಿ ಹೂತು ಹೋಗಿದ್ದ ಹೆಗಡೆಯಂತಹ ಐನಾತಿ ರಾಜಕಾರಣಿಯನ್ನೇ ಮೆಟ್ಟಿನಿಂತವರು ಕಾಂತಾ. ಇವರಿಗೆ ಇವರದೇ ಆದ ಒಂದು ವ್ಯಕ್ತಿತ್ವ ಇದೆ. ಘನತೆ ಇದೆ. ಹೋರಾಟದ ಬದುಕಿದೆ.

ದರ್ಶನಾಪುರನ ಊಳಿಗಕ್ಕೆ ನಿಂತಿರುವ ಕಲಬುರ್ಗಿ ಜಿಲ್ಲಾ ಜೆಡಿಎಸ್ ಅಧ್ಯಕ್ಷನಾಗಿರುವ ಬಸವರಾಜ ತಡಕಲ್ ಲೋಕಾಯುಕ್ತಕ್ಕೆ ಮಂತ್ರಿಗಳಿಬ್ಬರ ವಿರುದ್ಧ ದೂರ ನೀಡಿದ್ದಕ್ಕೆ ಕಾಂತಾ ಅವರನ್ನು ಪಕ್ಷದಿಂದಲೇ ಹೊರಹಾಕ ಬೇಕು ಎಂದೆಲ್ಲ ಪತ್ರಿಕೆ ಹೇಳಿಕೆಗಳ ಮೂಲಕ ಘೀಳಿಡುತ್ತಿದ್ದಾನೆ. ಇದಕ್ಕೆ ಕುಮಾರಸ್ವಾಮಿಯೂ ತಥಾಸ್ತು ಅಂದರೆ ಯಾರೂ ಅಚ್ಚರಿಪಡಬೇಕಾದುದಿಲ್ಲ, ಕಾಂತಾ ಅವರನ್ನು ಜೆಡಿಎಸ್‌ನಿಂದ ಕಿತ್ತು ಹಾಕಬೇಕೆ ನ್ನುವ ಕೂಗಿಗೆ ಅಪ್ಪ-ಮಕ್ಕಳ ಪಕ್ಷ ಸ್ಪಂದಿಸಿದರೆ ಕಾಂತಾ ಮತ್ತಷ್ಟು ಕಸುವನ್ನು ತುಂಬಿಕೊಂಡು ಸಮಾಜಮುಖಿಯಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ.

ಆದರೆ ದರ್ಶನಾಪುರ ಹಾಗೂ ಅಲ್ಲೋಡ್ ಮುಂತಾದ ರಾಜಕಾರಣಿಗಳು ಇದುವರೆಗೆ ಮಾಡುತ್ತ ಬಂದಿರುವ ಕೀಳು ರಾಜಕೀಯ, ಕುತಂತ್ರಗಳಿಂದ ಬಹುದೂರ ನಿಂತವರು ಕಾಂತಾ. ಮಂತ್ರಿಯಾಗುತ್ತಲೇ ಸುಖದ ಸುಪ್ಪತ್ತಿಗೆಯನ್ನು ತನ್ನ ಸುತ್ತಮುತ್ತ ನಿರ್ಮಿಸಿಕೊಳ್ಳುತ್ತಿರುವ ಅಲ್ಲೋಡ್, ಇಡೀ ಕರ್ನಾಟಕದ ಕೃಷಿ ಇಲಾಖೆಯ ಕಸವನ್ನೂ ಬಿಡದೆ ಮುಕ್ಕುತ್ತಿರುವ ದರ್ಶನಾಪುರ ಮುಂತಾದವರ ತಂಡವನ್ನು ಕಟ್ಟಿಕೊಂಡು ಸುಮಾರಸ್ವಾಮಿ ಆಡುತ್ತಿರುವ ನಾಟಕ ಇಷ್ಟರಲ್ಲೇ ಕೊನೆಗೊಳ್ಳಬೇಕಿದೆ. ಇಲ್ಲದೆ ಹೋದರೆ ಕೆಂಭೂತಗಳ ನರ್ತನವನ್ನೇ ಜನತೆ ನವಿಲಿನ ನರ್ತನ ಎಂದು ತಿಳಿದುಕೊಳ್ಳುವ ದಿನಗಳು ದೂರವಿಲ್ಲ.

-ವಿಶ್ವಾರಾಧ್ಯ ಸತ್ಯಂಪೇಟೆ

ಪೊಲೀಸರು ಸಂಘ ಪರಿವಾರದ ದಲ್ಲಾಳಿಗಳೇ?

ಲಾ ಅಂಡ್ ಆರ್ಡರ್ ಅಂದರೆ ನಮ್ಮ ಪೊಲೀಸರಿಗೆ ಅಮಾಯಕರನ್ನು ಚದುರಿಸುವುದು, ತಪ್ಪು ಮಾಡದವರನ್ನು ಹೊಡೆಯುವುದು, ಚಿತ್ರಹಿಂಸೆ ಕೊಟ್ಟು ತೀವ್ರವಾದ ಪಟ್ಟಿ ಕಟ್ಟಿ ಲಾಕಪ್‌ಗೆ ಹಾಕುವುದು ಎಂದು ಅರ್ಥ. ಅಲ್ಪಸಂಖ್ಯಾತರ ಮೇಲೆ ಮತಾಂಧ ಶಕ್ತಿಗಳು ನಡೆಸುತ್ತಿರುವ ದೌರ್ಜನ್ಯವನ್ನು ನೋಡಿಯೂ ನೋಡದಂತೆ ಇದ್ದುಬಿಟ್ಟಿದ್ದರೆ ಗಾಂಧಿಯ ಒಂದು ಮಂಗ ಎಂದು ಸುಮ್ಮನಾಗಿಬಿಡ ಬಹುದಿತ್ತು. ಆದರೆ ಇಲ್ಲಿ ನೋಡುವುದಷ್ಟೇ ಅಲ್ಲ, ಭಜರಂಗಿಗಳು ಮತ್ತು ಕೋಮುವಾದಿಗಳಿಗೆ ಪೂರಕವಾಗಿ ಅಲ್ಪಸಂಖ್ಯಾತರ ವಿರುದ್ಧವಾಗಿಯೂ ವರ್ತಿಸುತ್ತಿರುವುದು ಮುಂದಿನ ಭಯಾನಕ ದಿನಗಳನ್ನು ತೆರೆದಿಡುತ್ತವೆ. ಇಡೀ ಪೊಲೀಸ್ ಇಲಾಖೆ ಕೋಮುವಾದಿಗಳ ರಾಷ್ಟ್ರೀಯವಾದ ವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಸಂವಿಧಾನ ಸೂಚಿಸುವ ಧರ್ಮನಿರಪೇಕ್ಷ, ಜಾತ್ಯತೀತ ರಾಷ್ಟ್ರೀಯವಾದ ಇವರಿಗೆ ಗೊತ್ತೇ ಇಲ್ಲ. ಕ್ರೈಸ್ತರ ಮೇಲೆ ನಡೆದ ಬಹುಪಾಲು ಹಲ್ಲೆ ಪ್ರಕರಣಗಳಲ್ಲಿ ಪಾದ್ರಿಗಳನ್ನು ಮತಾಂತರ ಆರೋಪದ ಮೇಲೆ ಬಂಧಿಸಿದ್ದಾರೆ. ಸಂವಿಧಾನದ ಪ್ರಕಾರ ಮತಾಂತರ ಅಪರಾಧವಲ್ಲ, ಆದರೂ ಅದನ್ನೇ ಪ್ರಮುಖ ಆರೋಪ ಮಾಡಿ ಕ್ರೈಸ್ತರಿಗೆ ಚಿತ್ರಹಿಂಸೆ ಕೊಡಬಲ್ಲವರಾದರೆ ಇವರನ್ನು ದಡ್ಡರೆನ್ನಬೇಕೋ ಕಿರಾತಕರೆನ್ನಬೇಕೋ ಗೊತ್ತಾಗುವುದಿಲ್ಲ.


ಕೋ-ಜಾ ಸರ್ಕಾರದಲ್ಲಂತೂ ಪೊಲೀಸರು ಕೋಮುವಾದಿಗಳ ದಲ್ಲಾಳಿಗಳಂತೆ ವರ್ತಿಸುತ್ತಿದ್ದಾರೆ. ಕ್ರೈಸ್ತರ ಮೇಲೆ ಹಲ್ಲೆ ನಡೆಸಿದ ಒಬ್ಬರನ್ನಾದರೂ ಬಂಧಿಸಿರುವ ಉದಾಹರಣೆಗಳಿಲ್ಲ. ಅಪರಾಧಿಗಳನ್ನು ಬಂಧಿಸುವುದಿರಲಿ, ಅನೇಕ ಪ್ರಕರಣಗಳಲ್ಲಿ ಹಲ್ಲೆಗೊಳಗಾದವರನ್ನು ಹೆದರಿಸಿ ಕಳಿಸಿರುವುದು ಇದೆ. ಕುಂದಾಪುರ ತಾಲ್ಲೂಕಿನ ಕಾಟಕೆರೆ ಕಾರ್ಮೆಲ್ ಆಶ್ರಮದ ಫಾದರ್ ಸಿಲ್ವೆಸ್ಟರ್ ಪರೇರಾ ಆಸ್ಪತ್ರೆಯಲ್ಲಿದ್ದ ತಮ್ಮ ಅಡುಗೆಯವರನ್ನು ನೋಡಲು ಹೋಗುವಾಗ ಅವರ ಮೇಲೆ ಭಜರಂಗಿಗಳು ಹಲ್ಲೆ ಮಾಡಿದರು. ಈ ಹಲ್ಲೆಯ ಬಗ್ಗೆ ದೂರು ನೀಡಲು ಠಾಣೆಗೆ ಹೋದಾಗ ಅಲ್ಲಿನ ಇನ್‌ಸ್ಪೆಕ್ಟರ್ ದೂರು ದಾಖಲಿಸಲು ನಿರಾಕರಿಸಿದರು. ನಂತರ ಸರ್ಕಲ್ ಇನ್‌ಸ್ಪೆಕ್ಟರ್ ವ್ಯಾಲೆಂಟೈನ್ ಡಿಸೋಜಾ ಕ್ರೈಸ್ತರಾಗಿದ್ದರಿಂದ ಮಧ್ಯೆ ಪ್ರವೇಶಿಸಿ ರಾಮಣ್ಣಶೆಟ್ಟಿ ಮತ್ತು ಸಹಚರರ ಮೇಲೆ ದೂರು ದಾಖಲಿಸಿದರು.

ಪಾದ್ರಿಯೊಬ್ಬರ ಮೇಲೆ ಹಲ್ಲೆ ನಡೆದು ಅವರಿಗೆ ಪೊಲೀಸ್ ಇಲಾಖೆಯಲ್ಲಿ ಪರಿಚಯ ಇತ್ತಾದ್ದರಿಂದ ಇಷ್ಟು ಮಾಡಲು ಸಾಧ್ಯವಾಗಿದೆ. ಬಹುಪಾಲು ಪ್ರಕರಣಗಳಲ್ಲಿ ಸಾಮಾನ್ಯ ಜನ ಬಲಿಯಾಗಿರುವುದು ಆತಂಕಕಾರಿ.

ಪ್ರಾರ್ಥನೆಯಲ್ಲಿ ತೊಡಗಿದವರನ್ನು ಬಲವಂತವಾಗಿ ಒಂದು ಗುಂಪು ಪೊಲೀಸ್ ಠಾಣೆಗೆ ತುಂಬಿಕೊಂಡು ಹೋಗಬಲ್ಲರು ಎಂದರೆ ಅವರಿಗೆ ಪೋಲಿಸರ ಕುಮ್ಮಕ್ಕು ಎಷ್ಟಿದೆ ಲೆಕ್ಕ ಹಾಕಿ. ಬೆಂಗಳೂರು ಸಮೀಪದ ಒಂದು ಮನೆಯಲ್ಲಿ ಪ್ರಾರ್ಥನೆಯಲ್ಲಿ ತೊಡಗಿದ್ದ ಪಾಸ್ಟರ್ ಶ್ಯಾಂರಾಜ್ ಮತ್ತು ಇನ್ನಿತರ 20 ಜನರನ್ನು ಬಲವಂತವಾಗಿ ವಾಹನದಲ್ಲಿ ಕರೆದೊಯ್ದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಾಲೂರಿನಲ್ಲಿ ಪೀಟರ್ ಮುನಿಯಪ್ಪ ಮತ್ತು ಇನ್ನಿಬ್ಬರು ವ್ಯಕ್ತಿಗಳನ್ನು ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿ ಪೊಲೀಸರು ಬಂಧಿಸಿ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್ ನೀಡಿದ್ದಾರೆ.


ಬಹುತೇಕ ಎಲ್ಲಾ ಕ್ರೈಸ್ತರ ಮೇಲಿನ ಪ್ರಕರಣಗಳಲ್ಲಿ ಪೊಲೀಸರ ಪ್ರತಿಕ್ರಿಯೆ ಇಂಥವೇ ಆಗಿದೆ. ಪ್ರವಾಸಕ್ಕಾಗಿ ಭಾರತಕ್ಕೆ ಬಂದಿದ್ದ ಮೂವರು ಕೊರಿಯನ್ ಪ್ರವಾಸಿಗರನ್ನು ಹಿಡಿದು ಮತಾಂತರ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಬಂಧಿಸಿದ ಪೊಲೀಸರ ವರ್ತನೆ ಅಸಹ್ಯವೆನಿಸುತ್ತದೆ. ಇಡೀ ವಿಶ್ವದಲ್ಲೇ ಮೆಚ್ಚುಗೆಗೆ ಪಾತ್ರವಾದ ಭಾರತದ ಜಾತ್ಯತೀತ ಮೌಲ್ಯವನ್ನು ಕೊಂದಿದ್ದಾರೆ. ಸಂವಿಧಾನಬದ್ಧವಾದ ರಾಷ್ಟ್ರೀಯ ಪರಿಕಲ್ಪನೆಯ ತಿಳುವಳಿಕೆಯನ್ನು ಈ ಪೊಲೀಸರಿಗೆ ವಿಶೇಷವಾಗಿ ನೀಡುವ ಅಗತ್ಯವಿದೆ. ಕೋಮುವಾದ ಮತ್ತು ರಾಷ್ಟ್ರೀಯವಾದದ ಸ್ಪಷ್ಟ ವ್ಯತ್ಯಾಸದ ಅರಿವು ಇವರಿಗೆ ಮೂಡದಿದ್ದರೆ ಇವರ ತಪ್ಪು ಪರಿಕಲ್ಪನೆಯಿಂದಾಗಿ ಸಾಮೂಹಿಕ ನರಮೇಧಕ್ಕೆ ಕಾರಣರಾಗುತ್ತಾರೆ.



ಚೆಡ್ಡಿಗಳಿಗೆ ಕ್ರೈಸ್ತರ ತಿರುಗೇಟು

ಕೋ-ಜಾ ಸರ್ಕಾರದ ಜನಾಂಗೀಯ ದ್ವೇಷ ಎಷ್ಟು ವ್ಯವಸ್ಥಿತ ರೂಪ ಪಡೆದುಕೊಂಡಿದೆ ಎಂದರೆ ಕ್ರೈಸ್ತ ಎನ್ನುವ ಎಲ್ಲವನ್ನೂ ಅನುಮಾನದಿಂದ ನೋಡುವಂತೆ ಜನರನ್ನು ಎತ್ತಿಕಟ್ಟುತ್ತಿದ್ದಾರೆ. ಸಂವಿಧಾನದ ಚೌಕಟ್ಟಿನೊಳಗೆ ಎಲ್ಲಾ ಧರ್ಮದವರನ್ನು ಒಳಗೊಳ್ಳುವ ಹೃದಯವೈಶಾಲ್ಯವನ್ನು ಜನರಿಂದ ಕಸಿದುಕೊಳ್ಳುತ್ತಿದ್ದಾರೆ.

ರೀಟಾ ರೀನಿ



ಭಾರತಕ್ಕೆ ಸ್ವಾತಂತ್ರ್ಯ ಬಂದು 60 ವರ್ಷಗಳಾದವು. ಸಾಂವಿಧಾನಿಕವಾದ ಜಾತ್ಯತೀತ, ಧರ್ಮ ನಿರಪೇಕ್ಷ ಭಾರತವನ್ನು ಕಟ್ಟಿಕೊಳ್ಳುವುದು ಸಂಘಪರಿವಾರದ ಭಯೋತ್ಪಾದನೆಯಲ್ಲಿ ಹೆಚ್ಚು ಹೆಚ್ಚು ಜಟಿಲಗೊಳ್ಳುತ್ತಿದೆ. 2000ದಲ್ಲಿ ಗುಜರಾತ್ ಗಲಭೆಯಲ್ಲಿ ನಡೆದ ಜನಾಂಗೀಯ ಹತ್ಯೆ ಇಡೀ ನಾಗರಿಕ ಸಮಾಜವನ್ನು ತಲ್ಲಣಗೊಳಿಸಿತ್ತು. ಗುಜರಾತ್‌ನ ಮೂಲೆಮೂಲೆಗಳಲ್ಲಿ ಮುಸ್ಲಿಂರ ಬೀದಿಗಳು, ಕಾಲೋನಿಗಳು, ಅಷ್ಟೇ ಏಕೆ, ತಾಯಿಯ ಗರ್ಭದ ಭ್ರೂಣವನ್ನೂ ಗುರುತಿಸಿ ಕೊಂದುಹಾಕಿತು. ಆದರೆ ಬಿಜೆಪಿ ಮತ್ತು ಸಂಘಪರಿವಾರದ ಜನಾಂಗೀಯ ದ್ವೇಷದ ವಿಕೃತಿ ಗುಜರಾತ್ ಮಟ್ಟಕ್ಕೆ ಮುಗಿಯುತ್ತಿಲ್ಲ, ಕರ್ನಾಟಕಕ್ಕೂ ಇದರ ಆತಂಕ ಹಬ್ಬಿದೆ.

ಕೋ-ಜಾ ಸರ್ಕಾರದಲ್ಲಿ ಅಧಿಕಾರ ಹಸ್ತಾಂತರದ ಬಗ್ಗೆ ಕ್ಷಣಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಈ ಆತಂಕ ಮತ್ತಷ್ಟು ತೀವ್ರಗೊಳ್ಳುತ್ತಿದೆ. ಬಿಜೆಪಿ ಅಧಿಕಾರ ವಹಿಸಿಕೊಂಡರೆ ಕರ್ನಾಟಕದಲ್ಲಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬದಲಾವಣೆಗಳಾಗುವ ಸಾಧ್ಯತೆಗಳೇನು ಇಲ್ಲದಿದ್ದರೂ ಅಲ್ಪಸಂಖ್ಯಾತರು ಮಾತ್ರ ಆತಂಕದಿಂದಲೇ ಆ ದಿನವನ್ನು ಎದುರುನೋಡುತ್ತಿದ್ದಾರೆ.

ನಾಗರಿಕ ಸಮಾಜವನ್ನು ಛಿದ್ರಗೊಳಿಸಿ ವರ್ಣಾಶ್ರಮವನ್ನು ಉಳಿಸಿಕೊಂಡು ಒಂದು ಶೋಷಿತ ಸಮುದಾಯವನ್ನು ಸದಾ ಕಾಪಾಡಿಕೊಂಡು ಬರುವುದು ಈ ಮತಾಂಧ ಶಕ್ತಿಯ ಹುನ್ನಾರ. ಈಗಾಗಲೇ ಅಧಿಕಾರದ ಅಮಲಿನಲ್ಲಿ ತೂರಾಡುತ್ತಿರುವ ಹಿಂದೂ ಮತಾಂಧ ಶಕ್ತಿಗಳು ಅಧಿಕಾರದ ಅಣುಕು ಪ್ರದರ್ಶನ ಶುರುಮಾಡಿಕೊಂಡಿವೆ. ನಿಯಂತ್ರಣ ತಪ್ಪಿ ಕುಣಿಯುತ್ತಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಧಿಕಾರ ಸಿಕ್ಕರೆ ಹೆಂಡ ಕುಡಿದ ಮಂಗಗಳಂತೆ ಸಿಕ್ಕಸಿಕ್ಕವರನ್ನು ಕೊಚ್ಚಿಹಾಕುವ ಭೀತಿಯನ್ನು ತಳ್ಳಿಹಾಕುವಂತಿಲ್ಲ.

ವ್ಯಾಪಿಸುತ್ತಿರುವ ಮತಾಂಧ ಶಕ್ತಿಗಳು

ಒಂದೆರಡು ವರ್ಷಗಳ ಹಿಂದಿನವರೆಗೂ ಭಜರಂಗಿಗಳ ಕೆಲವೇ ಕೆಲವು ಪಾಕೆಟ್‌ಗಳು ಇದ್ದವು. ಈಗ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಈ ಮತಾಂಧ ಶಕ್ತಿಗಳು ಇಡೀ ಕರ್ನಾಟಕವನ್ನೇ ವ್ಯಾಪಿಸಿಬಿಟ್ಟಿವೆ. ಜನವರಿ 2006ರಿಂದ ಜುಲೈ 2007ರವರೆಗಿನ ಅವಧಿಯನ್ನು ಪರಿಗಣಿಸಿದರೆ ಕರ್ನಾಟಕದಲ್ಲಿ ಕ್ರೈಸ್ತರ ಮೇಲೆ ಸುಮಾರು 60ಕ್ಕಿಂತಲೂ ಹೆಚ್ಚು ಹಲ್ಲೆ ಪ್ರಕರಣಗಳು ನಡೆದಿವೆ. ಈ ಪ್ರಕರಣಗಳನ್ನು ಗಮನಿಸಿದಾಗ ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳನ್ನೂ ಇವರು ಟಾರ್ಗೆಟ್ ಮಾಡಿರುವುದು ಕಾಣುತ್ತದೆ. ಬೆಂಗಳೂರು, ಮಂಗಳೂರು, ಕುಂದಾಪುರ, ಹುಬ್ಬಳ್ಳಿ, ಧಾರವಾಡ, ಚಿತ್ರದುರ್ಗ, ಕೋಲಾರ, ದಾವಣಗೆರೆ, ಕೊಡಗು, ದೊಡ್ಡಬಳ್ಳಾಪುರ... ಹೀಗೆ ಇವರು ಬಿಟ್ಟಿರುವ ಜಾಗವೇ ಇಲ್ಲ, ಅದರಲ್ಲೂ ವಿಶೇಷವಾಗಿ ಇವರ ಟಾರ್ಗೆಟ್ ಉತ್ತರ ಕರ್ನಾಟಕ.

ಉತ್ತರ ಕರ್ನಾಟಕದಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರು ಸಾಂಸ್ಕೃತಿಕವಾಗಿ ಯಾವುದೇ ಬೇಧವಿಲ್ಲದೆ ಭಾರತೀಕರಣಗೊಂಡು ಮೇಳೈಸಿದ್ದಾರೆ. ಹಿಂದೂ ಕೋಮುವಾದಿಗಳಿಗೆ ಇದು ನುಂಗಲಾರದ ತುತ್ತಾಗಿದ್ದು ಹೀಗೆ ಮೇಳೈಸಿರುವುದನ್ನು ಛಿದ್ರಗೊಳಿಸುವುದು ಇವರ ಕೆಲಸವಾಗಿದೆ. ಹೀಗೆ ಛಿದ್ರಗೊಳಿಸುತ್ತಾ ಭಾರತೀಯ ಸಮಾಜದಿಂದ ಕ್ರೈಸ್ತರನ್ನು, ಮುಸ್ಲಿಮರನ್ನು ಹೊರಗಿಟ್ಟು ತಮ್ಮದೇ ಆದ 'ಹಿಂದೂ ಭಾರತ'ದ ಸಂಕುಚಿತ ಪರಿಕಲ್ಪನೆಯನ್ನು ಹೇರುತ್ತಿದ್ದಾರೆ. ಆದರೆ ಈ ಹಿಂದೂ ಭಾರತದಲ್ಲಿ ದಲಿತರು ಮತ್ತು ಅಸ್ಪೃಶ್ಯರ ಸ್ಥಾನಮಾನವೇನು?

ಕೋಮುಹಲ್ಲೆ ಪೋಷಿಸುತ್ತಿರುವ ಕೋ-ಜಾ ಸರ್ಕಾರ

ಒಂದು ಮನೆಯಲ್ಲಿ ಒಟ್ಟಾಗಿ ಸೇರಿ ಪ್ರಾರ್ಥನೆ ಮಾಡುವುದನ್ನೇ ಈ ಭಜರಂಗಿಗಳು ಮತಾಂತರ ಎಂದು ಬೊಬ್ಬಿಡುತ್ತಾ ಸಿಕ್ಕಸಿಕ್ಕವರನ್ನು ಮತಾಂತರದ ಹೆಸರಲ್ಲಿ ಸಿಕ್ಕಿಹಾಕಿಸಿ ಹಿಂಸಿಸುತ್ತಿದ್ದಾರೆ. ಇತ್ತೀಚೆಗೆ ಕುಂದಾಪುರದಲ್ಲಿ ನಡೆದ ಘಟನೆ ಒಂದು ಉತ್ತಮ ಉದಾಹರಣೆ. ಕಳೆದ ಒಂದೂವರೆ ವರ್ಷದಿಂದ ಈ ಹಲ್ಲೆಗಳು ಜಾಸ್ತಿಯಾಗುತ್ತಿವೆ. ಸರ್ಕಾರ ನಡೆಸುತ್ತಿರುವ ಅಪವಿತ್ರ ಮೈತ್ರಿಯ ಜೆಡಿಎಸ್ ಮತ್ತು ಬಿಜೆಪಿಯ ಕಾಂಬಿನೇಷನ್ ಕೋಮುವಾದಕ್ಕೆ ಹೇಳಿಮಾಡಿಸಿದಂತಿದೆ.

ಜೆಡಿಎಸ್ ಯಾವುದೇ ಸಿದ್ಧಾಂತ ಇಲ್ಲದ ಪಕ್ಷ. ದೇವೇಗೌಡರು ಮತ್ತು ಅವರ ಮಕ್ಕಳಿಗೆ ಬೇಕಿರುವುದು ಒಂದೇ - ಅಧಿಕಾರ ಮತ್ತು ಲ್ಯಾಂಡ್ ಮಾಫಿಯಾ. ಬಿಜೆಪಿ ಕಾರ್ಯಕರ್ತರ ವ್ಯವಸ್ಥಿತ ಪಿತೂರಿ ಅರ್ಥವಾಗದವರಂತೆ, ದಡ್ಡ ಜಾಣರಂತೆ ಇವರು ವರ್ತಿಸುತ್ತಿದ್ದಾರೆ. ಬಿಜೆಪಿಗೆ ತನ್ನ ಹಿಂದೂತ್ವದ ಅಜೆಂಡಾವನ್ನು ಜಾರಿಗೊಳಿಸಲು ರಹದಾರಿ ಸಿಕ್ಕಂತಾಗಿದೆ. ಇವರ ಈ ನಿರ್ಲಕ್ಷ್ಯ ಮತ್ತು ನಿರ್ಲಿಪ್ತತೆ ರಾಜ್ಯದ ಎಲ್ಲೆಡೆ ಸಂಘಪರಿವಾರ ತನ್ನ ಶಾಖೆಗಳನ್ನು ತೆರೆದುಕೊಳ್ಳಲು ಸಾಧ್ಯವಾಗಿಸಿದೆ.

ಬಿಜೆಪಿಯ ಬ್ರಾಹ್ಮಣ ಸಿದ್ಧಾಂತ

ಭಜರಂಗಿಗಳ ಹಿಂದೆ ಕೆಲಸ ಮಾಡುತ್ತಿರುವುದು ಬ್ರಾಹ್ಮಣ ತಲೆಗಳು. ತಮ್ಮ ಪರಿಕಲ್ಪನೆಯ ಕೋಮುವಾದಿ ಭಾರತದ ಬಗ್ಗೆ ಪ್ರೇಮವನ್ನು ಹುಟ್ಟಿಸಲು ದಲಿತರು, ಶೂದ್ರರು ಮತ್ತು ನಿರುದ್ಯೋಗಿ ಯುವಕರನ್ನು ಎತ್ತಿಕಟ್ಟುತ್ತಿದ್ದಾರೆ. ದಲಿತರನ್ನು ದಲಿತರಿಂದಲೇ ಹೊಡೆಸುತ್ತಿದ್ದಾರೆ. ಮತಾಂತರಗೊಂಡಿರುವ ಮೇಲ್ವರ್ಗದ ಕ್ರೈಸ್ತರನ್ನು ಅವರು ಮುಟ್ಟುತ್ತಿಲ್ಲ, 'ಕ್ರೈಸ್ತರು', 'ಮತಾಂತರಗೊಂಡವರು' ಎಂದು ಹಲ್ಲೆಗೊಳಗಾಗುತ್ತಿರುವ ಬಹುಪಾಲು ಜನ ದಲಿತರು ಎಂಬುದು ಇಲ್ಲಿ ಗಮನಾರ್ಹ. ಬ್ರಾಹ್ಮಣಶಾಹಿ ಸಂಘಪರಿವಾರಕ್ಕೆ ಧರ್ಮ ಒಂದು ನೆಪಮಾತ್ರ. ಹಿಂದೂ ಸಮಾಜದಲ್ಲಿನ ವರ್ಣಾಶ್ರಮವನ್ನು ಸದಾ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಇವರು, ವರ್ಣಾಶ್ರಮದ ತತ್ವಗಳನ್ನು ಇತರ ಧರ್ಮದೊಳಕ್ಕೂ ನುಸುಳಿಬಿಡುವ ಹುನ್ನಾರ ನಡೆಸಿದ್ದಾರೆ.

ಬ್ರಾಹ್ಮಣರಿಗೆ ಅಥವಾ ಕೆಲವು ಮೇಲ್ವರ್ಗದ ಜನರಿಗೆ ಜಾತಿಯ ಆಧಾರದ ಮೇಲೆ ಸಾಂಪ್ರದಾಯಿಕವಾಗಿ ಲಭ್ಯವಾದ ಪ್ರತಿಷ್ಠೆಗಳಿಗೆ ಆಧುನಿಕತೆ ಸವಾಲೊಡ್ಡುತ್ತಿದೆ. ಹಾಗಾಗಿ ಈ ಜಾತಿ ವ್ಯವಸ್ಥೆಯನ್ನು ಜೀವಂತವಾಗಿಟ್ಟುಕೊಳ್ಳಲು ಬ್ರಾಹ್ಮಣ ರಾಜಕೀಯವನ್ನು ಸಂಘಪರಿವಾರ ಮಾಡುತ್ತಾ ಬರುತ್ತಿದೆ. ನಿರಂತರವಾಗಿ ಬೇರೆಯವರನ್ನು ವಿರೋಧಿಸುತ್ತಾ ಮತ್ತು ಶತ್ರುತ್ವವನ್ನು ಕಾಪಾಡಿಕೊಳ್ಳುತ್ತಾ ತಾನು ಬೆಳೆಯುತ್ತದೆ. ಈ ಬಗೆಯ ಹಿಂಸಾತ್ಮಕ ಪರಿಸ್ಥಿತಿಯಲ್ಲಿ ನಲುಗುವುದು ಮಾತ್ರ ಜಾತ್ಯತೀತ ಮತ್ತು ಮತನಿರಪೇಕ್ಷ ರಚನೆ.

ಕ್ರೈಸ್ತರ ಮೇಲಿನ ಹಲ್ಲೆಗಳು

ಕ್ರೈಸ್ತರ ಮೇಲೆ ನಡೆಯುತ್ತಿರುವ ಸಂಘಪರಿವಾರದ ಹಲ್ಲೆಗಳು ವ್ಯವಸ್ಥಿತವೂ, ಆತಂಕಕಾರಿಯೂ ಆಗಿದೆ. ಪ್ರಾರ್ಥನಾ ಮಂದಿರಗಳಿಗೆ ನುಗ್ಗಿ ದಾಂಧಲೆ ಎಬ್ಬಿಸುವುದರಿಂದ ಪ್ರಾರಂಭವಾಗಿ, ಸಾರ್ವಜನಿಕವಾಗಿ ಕ್ರೈಸ್ತ ಪಾದ್ರಿಗಳಿಗೆ ಅವಮಾನ ಮಾಡುವುದರಲ್ಲಿ ಮುಂದುವರಿದು ಭಯೋತ್ಪಾದಕ ಎಂಬ ಪಟ್ಟ ಕಟ್ಟಿ ಕೊನೆಗೆ ಹತ್ಯೆಯವರೆಗೂ ಸಾಗಿದೆ. ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಬೆಳಕಿಗೆ ಬಂದಿರುವ 60ಕ್ಕಿಂತಲೂ ಹೆಚ್ಚು ಕ್ರೈಸ್ತರ ಮೇಲಿನ ಹಲ್ಲೆ ಪ್ರಕರಣಗಳನ್ನು ಗಮನಿಸಿದಾಗ ಹಿಂದೂ ಕೋಮುವಾದಿಗಳು ಕ್ರೈಸ್ತರನ್ನು ಅಳಿಸಿಹಾಕಲು ಬಳಸುವ ತಂತ್ರಗಳು ಭಯ ಹುಟ್ಟಿಸುತ್ತವೆ. ಅಷ್ಟೇ ಅಲ್ಲದೆ ಈ ತಂತ್ರಕ್ಕೆ ಬೆಂಬಲವಾಗಿ ನಿಂತಿರುವ ಹಿಂದೂ ಕೋಮುವಾದಿ ರಾಜಕೀಯ ಪಕ್ಷದ ಬಣ್ಣವೂ ಬಯಲಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಒಂದೆರಡು ಪ್ರಕರಣಗಳನ್ನು ಪರಿಶೀಲಿಸಬಹುದು.

ಜುಲೈ 4, 2005ರಂದು ಬೆಳಗಾವಿಯ ಕಾನ್‌ಪುರ ತಾಲೂಕಿನ ಬಲ್ಲೋಕಹಳ್ಳಿಯಲ್ಲಿನ ಒಂದು ಪ್ರಾರ್ಥನಾ ಮಂದಿರಕ್ಕೆ ನುಗ್ಗಿದ ಕೆಲವು ದುಷ್ಕರ್ಮಿಗಳು ಕ್ರಿಸ್ತನನ್ನು ಆರಾಧಿಸಿದರೆ ಕೊಲೆ ಮಾಡುವ ಬೆದರಿಕೆ ಒಡ್ಡಿ ಬಂದಿದ್ದಾರೆ.

13.05.2007ರಂದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಕುಶಾಲನಗರದ ದೇವಾಲಯಕ್ಕೆ ನುಗ್ಗಿದ ಮತಾಂಧ ಗೂಂಡಾಪಡೆಯೊಂದು ಅಲ್ಲಿನ ಪಾದ್ರಿ ಚೆನ್ನಿಗಯ್ಯ, 5 ಜನ ಹೆಂಗಸರು ಒಂದು ವರ್ಷದ ಮಗುವಿಗೆ ತೀವ್ರ ಗಾಯಗಳನ್ನುಂಟು ಮಾಡಿದರು. ಬೈಬಲ್, ಹಾಡಿನ ಪುಸ್ತಕಗಳನ್ನು ಹರಿದು ಹಾಕಿದರಲ್ಲದೆ, ಸೌಂಡ್ ಸಿಸ್ಟಂ, ಪ್ಲೇಯರ್, ಮೈಕ್ ಬಾಕ್ಸ್‌ಗಳನ್ನು ಒಡೆದು ಚೂರುಚೂರು ಮಾಡಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ತುಮಕೂರು ಜಿಲ್ಲೆಯ ಶಿರಾ ತಾಲೂಕಿನಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿ ಸೇರಿದ್ದ ಮನೆಯೊಂದಕ್ಕೆ ನುಗ್ಗಿದ 50 ಜನ ಮತಾಂಧರು ದೊಣ್ಣೆ, ಸೈಕಲ್ ಚೈನ್, ಕತ್ತಿಗಳಿಂದ ಅಲ್ಲಿನ ಜನರನ್ನು ಚದುರಿಸಿದರು. ಸುಮಾರು 10 ಜನ ಕ್ರೈಸ್ತ ಭಕ್ತರಿಗೆ ತೀವ್ರ ಗಾಯಗಳಾದವು.

ಇಂಥದ್ದೇ ಇನ್ನೊಂದು ಪ್ರಕರಣದಲ್ಲಿ, ದಿನಾಂಕ 13-05-2006ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಪ್ರಾರ್ಥನಾ ಮಂದಿರದಲ್ಲಿ ಸೇರಿದ್ದ ಕೆಲವು ಜನರ ಮೇಲೆ ಒಂದು ಗುಂಪು ದಾಳಿ ಮಾಡಿತು. ಅಲ್ಲಿದ್ದವರನ್ನು ಹೊಡೆದುಹಾಕಿ ರಾಜ್ ಎಂಬ ಪಾಸ್ಟರ್ ಅವರ ತಲೆಗೆ ತೀವ್ರ ಗಾಯ ಮಾಡಿದರು. ದೇವಾಲಯಗಳಲ್ಲಿ ಪ್ರಾರ್ಥನೆಗಳಲ್ಲಿ ತೊಡಗಿರುವವರನ್ನು ಸುಖಾಸುಮ್ಮನೆ ಬೆದರಿಸುವುದು, ಚದುರಿಸುವುದಂತೂ ಸಾಮಾನ್ಯ ವಿಷಯವಾಗಿಬಿಟ್ಟಿದೆ. ಕ್ರೈಸ್ತ ಸಂಸ್ಥೆಗಳಲ್ಲಿ ಕ್ರೈಸ್ತ ಗೀತೆಗಳನ್ನು ಹಾಡಬಾರದು ಎಂದು, ಕ್ರಿಸ್ತನ ಶಿಲುಬೆ, ದೇವಮಾತೆಯ ಚಿತ್ರಪಟಗಳು ಇರಬಾರದು ಎಂದು - ಹೀಗೆ ಒಂದಿಲ್ಲೊಂದು ಕ್ಯಾತೆ ತೆಗೆದು ಗದ್ದಲ ಸೃಷ್ಟಿಸುವುದು ಸಾಮಾನ್ಯ ಸಂಗತಿ.


ಇತ್ತೀಚೆಗೆ ಅಂದರೆ 27-07-2007ರಂದು ಶಿವಮೊಗ್ಗದ ಸೇಕ್ರೆಡ್ ಹಾರ್ಟ್ ಶಾಲೆಯ ವಿದ್ಯಾರ್ಥಿಗಳಿಗೆ ವಿತರಿಸಿದ್ದ ಶಾಲೆಯ ಡೈರಿಗಳ ಮೇಲೆ ಸೇಕ್ರೆಡ್ ಹಾರ್ಟ್ ಚಿತ್ರವಿತ್ತು ಎಂಬ ಕಾರಣಕ್ಕೆ ಭಜರಂಗಿಗಳು ಶಾಲೆ ಮತ್ತು ಕಾಲೇಜಿಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ವಿಪರ್ಯಾಸವೆಂದರೆ ಶಿಕ್ಷಣ ಸಚಿವ ಶಂಕರಮೂರ್ತಿಯವರ ಮಗಳು ಈ ಸಂಸ್ಥೆಯ ವಿದ್ಯಾರ್ಥಿನಿ. ಸೇಕ್ರೆಡ್ ಹಾರ್ಟ್ ಕಾಲೇಜಿನಲ್ಲಿರುವ ಬಹುತೇಕ ಬೋಧಕ ವರ್ಗ ಹಿಂದೂಗಳು. ದುಡಿಮೆಗಾಗಿ, ಹಣಕ್ಕಾಗಿ ಮಾತ್ರ ಅಲ್ಪಸಂಖ್ಯಾತ ಸಂಸ್ಥೆಗಳು ಬೇಕು. ಆದರೆ 'ಪ್ರಜ್ಞಾವಂತ'ರೆನಿಸಿಕೊಂಡ ಇವರಿಗೆ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನೇಕೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ?

ಈ ದಾಂಧಲೆ, ಹಲ್ಲೆ ಇಷ್ಟಕ್ಕೆ ನಿಲ್ಲುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಇದು ಮತ್ತಷ್ಟು ಅಸಹ್ಯಕರ ಆಯಾಮ ಪಡೆಯುತ್ತದೆ. ವಿಲ್ಸನ್‌ಗಾರ್ಡನ್‌ನ ಒಂದು ಮನೆಯಲ್ಲಿ ಪ್ರಾರ್ಥನೆಗೆಂದು ಸೇರಿದ್ದ ಕೆಲವರ ಮೇಲೆ ಹಲ್ಲೆ ನಡೆಸಿದರು. ಫರ್ನಾಂಡಿಸ್ ಮತ್ತು ಮೋಹನ್ ಎಂಬುವವರನ್ನು ಥಳಿಸಿದ್ದೇ ಅಲ್ಲದೆ ಅವರನ್ನು ಅರೆನಗ್ನಗೊಳಿಸಿ ಬೀದಿಗಳಲ್ಲಿ ಕೊಂಡೊಯ್ದರು. ಪೊಲೀಸರು ಬಂದಾಗ ಈ ಇಬ್ಬರ ಬಳಿ ಆಯುಧಗಳಿದ್ದವು ಎಂದು ದೂರು ಜಡಿದು ಬಂಧಿಸಿದರು.

ಹೆಸರುಘಟ್ಟದಲ್ಲಿ ವಿಂಗ್‌ಜೇವಿಯರ್‌ರ ಲಾರ್ಡ್ ಜೀಸಸ್ ಕ್ರೈಸ್ಟ್ ಎಂಬ ಪಂಥದ ಮುಂದುವರಿಕೆಯನ್ನು ಪಾದ್ರಿಯೊಬ್ಬರು ನಡೆಸಿಕೊಂಡು ಬರುತ್ತಿದ್ದರು. 8.6.2007 ರಂದು ಒಂದು ಗುಂಪು ಇವರನ್ನು ಅಡ್ಡಗಟ್ಟಿ ಹೊಡೆದು, ಕಾಲಿನಿಂದ ಒದ್ದು ಮತಾಂತರ ಮಾಡಿದವರು ಎಂಬ ರಟ್ಟಿನ ಫಲಕವನ್ನು ಕುತ್ತಿಗೆಗೆ ತೂಗುಹಾಕಿ ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದರು.

ಬೆಂಗಳೂರು ಸುತ್ತಮುತ್ತಲೇ ಕ್ರೈಸ್ತರ ಮೇಲೆ ನಡೆದ ಬೇರೆ ಬೇರೆ 20 ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳ ದೂರು ದಾಖಲಾಗಿರುವುದಿಲ್ಲ, ಬದಲಾಗಿ ಕ್ರೈಸ್ತರ ಮೇಲೆ ಸುಳ್ಳು ಮೊಕದ್ದಮೆಗಳು ದಾಖಲಾಗಿವೆ.

ಹಿಂದೂ ಪರಿವಾರದ ಜನಾಂಗೀಯ ದ್ವೇಷ ಎಷ್ಟು ವ್ಯವಸ್ಥಿತ ರೂಪ ಪಡೆದುಕೊಂಡಿದೆ ಎಂದರೆ ಕ್ರೈಸ್ತ ಎನ್ನುವ ಎಲ್ಲವನ್ನೂ ಅನುಮಾನದಿಂದ ನೋಡುವಂತೆ ಜನರನ್ನು ಎತ್ತಿಕಟ್ಟುತ್ತಿದ್ದಾರೆ. ಸಂವಿಧಾನದ ಚೌಕಟ್ಟಿನೊಳಗೆ ಎಲ್ಲಾ ಧರ್ಮದವರನ್ನು ಒಳಗೊಳ್ಳುವ ಹೃದಯವೈಶಾಲ್ಯವನ್ನು ಜನರಿಂದ ಕಸಿದುಕೊಳ್ಳುತ್ತಿದ್ದಾರೆ. ಇವರಿಗೆ ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯ ತಂದುಕೊಟ್ಟವರು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಬರೆದ ಸಂವಿಧಾನ ಬೇಕಿಲ್ಲ, ಸನಾತನ ಬ್ರಾಹ್ಮಣ ಹಿಂದೂ ಸಂವಿಧಾನವೇ ಇವರಿಗೆ ಬೇಕಿರುವುದು. ಸಿಕ್ಕವರಿಗೆ ಮತಾಂತರ ಮಾಡುತ್ತಿರುವವರು ಎಂದು ಆರೋಪಿಸುತ್ತಾರೆ. ಈ ಆರೋಪವನ್ನು ಸಾಬೀತುಪಡಿಸಲು ಕಷ್ಟವಾಗುವ ಸಂದರ್ಭಗಳಲ್ಲಿ ಅವರಿಗೆ 'ತೀವ್ರವಾದಿ' ಎಂಬ ಹಣೆಪಟ್ಟಿ ಕಟ್ಟಿ ಪೊಲೀಸ್ ದೌರ್ಜನ್ಯ ಅನುಭವಿಸಲು ಕಾರಣವಾಗುತ್ತಿದ್ದಾರೆ. ಇದಕ್ಕೊಂದು ಉದಾಹರಣೆ ನೋಡಿ:



ಶಿವಮೊಗ್ಗ ಜಿಲ್ಲೆಯ ಜೋಗ್ ಜಲಪಾತದ ಸನಿಹದಲ್ಲಿ ಕಾರ್ಗಿಲ್ ಗ್ರಾಮದಲ್ಲಿ ಅನೇಕ ತಮಿಳರು ಕೂಲಿಗಾಗಿ ಬಂದವರು ಇಲ್ಲಿ ನೆಲೆಸಿದ್ದಾರೆ. ದೇವರಾಜ್ ಎಂಬ ಕ್ರೈಸ್ತ ಪಾದ್ರಿ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮತಾಂಧ ಗುಂಪೊಂದು ಇವರ ಮೇಲೆ ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಈತ ಶ್ರೀಲಂಕಾದ ತೀವ್ರವಾದಿ ಎಂದು ಪೊಲೀಸರು ಬಂಧಿಸಿದ್ದಾರೆ.

ಇನ್ನೊಂದು ಅತಿರೇಕದಲ್ಲಿ ಕ್ರೈಸ್ತ ಪ್ರವಾಸಿಗರನ್ನು ಸಹ ಸಂಶಯದಿಂದ ನೋಡುವ ಪರಿಪಾಠವನ್ನು ಹಿಂದೂ ಕೋಮುವಾದಿಗಳು ಶುರುವಿಟ್ಟುಕೊಂಡಿದ್ದಾರೆ. ಬೆಂಗಳೂರು ಪ್ರವಾಸಕ್ಕೆ ಬಂದಿದ್ದ ಮೂವರು ಕೊರಿಯಾ ದೇಶದ ಕ್ರೈಸ್ತರು ಮತಾಂತರಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪದ ಮೇಲೆ ಇವರನ್ನು ಹೆಚ್.ಎ.ಎಲ್ ಪೋಲಿಸರು ಬಂಧಿಸಿದ್ದಾರೆ.

ಹತ್ತಾರು ಪ್ರಕರಣಗಳಲ್ಲಿ ಇದು ಕೆಲವು ಸ್ಯಾಂಪಲ್‌ಗಳು ಮಾತ್ರ. ಪ್ರತಿಯೊಂದು ಪ್ರಕರಣದ ವಿವರಕ್ಕೆ ಹೋದರೆ ಅಲ್ಲಿ ಬಲಿಯಾದವರು ಅಮಾಯಕ ಹೆಂಗಸರು, ಮಕ್ಕಳು ಮತ್ತು ಮುಗ್ಧ ಭಕ್ತರು ಎಂದು ತಿಳಿಯುತ್ತದೆ.

ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರ ಬಗ್ಗೆ ಭಜರಂಗಿಗಳಿಗೆ ಇರುವ ಆತಂಕ, ಮತ್ತೊಂದು ಧರ್ಮ ಮೇಲುಗೈ ಸಾಧಿಸುತ್ತದೆ ಎಂಬುದಕ್ಕಲ್ಲ, ಬದಲಾಗಿ ಸನಾತನ ಧರ್ಮ ಯುಗಯುಗಗಳಿಂದ ಕಾಯ್ದುಕೊಂಡು ಬಂದ ಜಾತಿ ಮತ್ತು ವರ್ಗ ವ್ಯವಸ್ಥೆ ನಾಶವಾಗಿ ತಮಗೆ ಗುಲಾಮಗಿರಿ ಮಾಡಲು ಯಾರೂ ಇಲ್ಲವಾಗಿಬಿಡುತ್ತಾರೆ ಎಂಬ ಆತಂಕವಷ್ಟೇ. ದೇವನೂರು ಮಹಾದೇವ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿ ಆಡಿದ ಮಾತುಗಳು ಇಲ್ಲಿ ನೆನಪಾಗುತ್ತವೆ, "ಬೌದ್ಧ ಧರ್ಮ ಸ್ವೀಕರಿಸಿ ನಾನು ಪಡೆದದ್ದೇನು, ಕಳೆದುಕೊಂಡದ್ದೇನು ಎಂಬ ಪ್ರಶ್ನೆ ಕಾಡುತ್ತಿದೆ. ಹಿಂದೂ ಧರ್ಮದಲ್ಲಿದ್ದು ಕೀಳರಿಮೆಯಿಂದ ನರಳುವ ಬದಲಿಗೆ ಬೌದ್ಧನಾಗಿ ಹಿರಿಮೆ-ಕಿರಿಮೆಗಳಿಂದ ಮುಕ್ತನಾಗುವುದು ಲೇಸು". ದಲಿತರು ಇಂಥಾ ಒಂದು ಮುಕ್ತ ಬದುಕು ಪಡೆದುಕೊಳ್ಳುವುದು ಭಜರಂಗಿಗಳಿಗೆ ಬೇಕಿಲ್ಲದಿರುವುದೇ ಅವರ ದಾಂಧಲೆಗೆ ಕಾರಣ.

ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುತ್ತಿದ್ದಾರೆ ಎಂದು ಬೊಬ್ಬಿಡುವ ಈ ಹಿಂದೂ ಮೂಲಭೂತವಾದಿಗಳಿಗೆ ಆಗಿಂದಾಗ್ಗೆ ಸಾವಿರಾರು ದಲಿತರು ಸಾಮೂಹಿಕವಾಗಿ ಬಹಿರಂಗ ಸಮಾರಂಭದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದಾಗ ಅವರನ್ನು ಸಾರ್ವಜನಿಕವಾಗಿ ವಿರೋಧಿಸುವ ನೈತಿಕ ತಾಕತ್ತು ಇರಲಿಲ್ಲವೇಕೆ ಎಂಬುದು ಪ್ರಶ್ನೆ. ಅದಕ್ಕಿಂತಲೂ ಹೆಚ್ಚಾಗಿ ಕರ್ನಾಟಕದಲ್ಲಿ ಬೆಳೆಯುತ್ತಿರುವ ಹಿಂದುಳಿದ, ಅಲ್ಪಸಂಖ್ಯಾತರ ಸಂಘಟಿತ ಚಳವಳಿ ಬ್ರಾಹ್ಮಣರ ನಿದ್ದೆ ಕೆಡಿಸಿದೆ. ಮುಸ್ಲಿಂ ಸಮುದಾಯವನ್ನು ಟಾರ್ಗೆಟ್ ಮಾಡುತ್ತಾ ಬಂದ ಹಿಂದೂ ಕೋಮುವಾದಿಗಳು ತಮ್ಮ ಗುರಿಯನ್ನು ಈಗ ಕ್ರೈಸ್ತರ ಕಡೆಗೂ ವಿಸ್ತರಿಸಿದ್ದಾರೆ. ಈ ಹಿಂದೆ ಇದು ಇರಲಿಲ್ಲ ಎಂದು ಅರ್ಥವಲ್ಲ, ಇದು ಮತ್ತಷ್ಟು ವ್ಯಾಪಕವಾಗುತ್ತಿದೆ ಅಷ್ಟೇ. ಕ್ರೈಸ್ತ ದೇವಾಲಯಗಳು, ಶಾಲೆಗಳು ಇವರ ಕೆಂಗಣ್ಣಿಗೆ ಮೊದಲು ಗುರಿಯಾದವು. ಆದರೆ ಬರಬರುತ್ತಾ ಆಳವಾಗಿ ಬೇರುಬಿಟ್ಟ ಇವನ್ನು ಅಲ್ಲಾಡಿಸುವುದು ಕಷ್ಟ ಎಂದು ಗೊತ್ತಾದಾಗ ಅವರ ದೃಷ್ಟಿ ತೀರಾ ದುರ್ಬಲ, ಸಮಾಜದ ಶ್ರೇಣೀಕೃತ ವರ್ಗದಲ್ಲಿ ಸಮಾನತೆಗಾಗಿ ಸದಾ ಹಪಹಪಿಸುವ ದಲಿತರ ಮೇಲೆ ಹೊರಳಿತು. ಹಿಂದೂ ಸಮಾಜದಲ್ಲಿರುವ ಕೆಲವೇ ಕೆಲವು ದಲಿತ ಯುವಕರಲ್ಲಿ ಮತಾಂಧತೆಯ ವಿಷ ಬೀಜ ಬಿತ್ತುತ್ತಿದ್ದಾರೆ. ಇದರ ಮೂಲಕ ತಮ್ಮವರೇ ಆದ ಇತರ (ಕ್ರೈಸ್ತ ಅಥವಾ ಮುಸ್ಲಿಂ) ದಲಿತರ ಮೇಲೆ ಹಲ್ಲೆ ನಡೆಸಲು ಆಯುಧ ಕೊಟ್ಟು ಸಜ್ಜುಗೊಳಿಸಿತು.

ಕ್ರೈಸ್ತರು ಪ್ರತಿಭಟನೆಗೆ ಸಜ್ಜಾಗಬೇಕು

ಹಿಂದೂ ಮತಾಂಧ ಶಕ್ತಿಗಳ ವಿರುದ್ಧ ಒಂದು ಬಲವಾದ ಸಂಘಟಿತ ಹೋರಾಟ ರೂಪುಗೊಳ್ಳದ ಹೊರತು ಅಲ್ಪಸಂಖ್ಯಾತರ ಆತಂಕಕ್ಕೆ ಕೊನೆ ಇರುವುದಿಲ್ಲ. ಸಮುದಾಯದೊಳಗಿನ ಆಂತರಿಕ ಸಮಸ್ಯೆಗಳು ಒಂದು ಕಡೆ ಇರಲಿ, ಸದ್ಯದ ಪರಿಸ್ಥಿತಿಯಲ್ಲಿ ನಮಗಿರುವ ದೊಡ್ಡ ಸವಾಲು ಹಿಂದೂ ಮತಾಂಧ ಶಕ್ತಿಗಳು. ಕರ್ನಾಟಕದ ಎಲ್ಲಾ ಮುಸ್ಲಿಮರು 'ಕೆಎಫ್‌ಡಿ' ಕರ್ನಾಟಕ ಫೋರಂ ಫಾರ್ ಡಿಗ್ನಿಟಿ- ರಚಿಸಿಕೊಂಡು ಸಂಘಟಿತ ಹೋರಾಟ ರೂಪಿಸುತ್ತಿರುವಂತೆ ಕ್ರೈಸ್ತ ಸಮುದಾಯದ ಎಲ್ಲಾ ಪಂಗಡಗಳು ಒಂದು ಕೇಂದ್ರಿತ ಶಕ್ತಿಯಾಗಿ ಹೊಮ್ಮಬೇಕಿದೆ. ಈ ನಿಟ್ಟಿನಲ್ಲಿ ಸಂಘಟನೆಗಾಗಿ ನಡೆಯುತ್ತಿರುವ ಪ್ರಯತ್ನಗಳನ್ನು ಎಲ್ಲರೂ ಬಲಪಡಿಸಿದರೆ ರಾಜ್ಯವ್ಯಾಪಿಯಾಗುತ್ತಿರುವ ಕೋಮು ದ್ವೇಷವನ್ನು ಎದುರಿಸಲು ಸಾಧ್ಯ. ಇದಕ್ಕಾಗಿ ಮೊದಲ ಹಂತದ ಕಾರ್ಯ ರೂಪಿಸಬೇಕಾದವರು ವಿವಿಧ ಕ್ರೈಸ್ತ ಪಂಥಗಳ ಧರ್ಮಾಧ್ಯಕ್ಷರುಗಳು ಮತ್ತು ಪಾದ್ರಿಗಳು.

ದಿನಾಂಕ 22.9.2007ರಂದು ಹೆಚ್.ಟಿ. ಸಾಂಗ್ಲಿಯಾನ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಕ್ರೈಸ್ತರ ಒಂದು ಬೃಹತ್ ಜಾಗೃತಿ ಮೆರವಣಿಗೆ ನಡೆಯುತ್ತದೆ. ಸಾಂಗ್ಲಿಯಾನ ಈ ಜಾಗೃತಿ ಮೆರವಣಿಗೆಯ ನೇತೃತ್ವ ವಹಿಸಿರುವುದನ್ನು ನೋಡಿದರೆ ಬಜೆಪಿ ಯನ್ನು ಭಾರತೀಯ ಜೀಸಸ್ ಪಾರ್ಟಿ ಮಾಡಲು ಹೊರಟವರಿಗೆ ನಿರಾಶೆಯಾಗಿದೆ ಎಂದು ಕಾಣುತ್ತದೆ. ಬಜೆಪಿಯ ಅಟ್ಟಹಾಸವನ್ನು ಸಹಿಸಿಕೊಂಡು ಇರಲಾಗದೆ ಮತ್ತು ಕ್ರೈಸ್ತ ಸಮುದಾಯದ ಒತ್ತಡದಿಂದ ಬೀದಿಗೆ ಬಂದಿರುವುದು ಒಳ್ಳೆಯ ಸೂಚನೆ. ಮತಾಂಧತೆಯನ್ನು ಉತ್ತೇಜಿಸುವ ಬಜೆಪಿಯನ್ನು ಕೇವಲ ರಾಜಕೀಯ ಲಾಭಕ್ಕಾಗಿ ಬೆಂಬಲಿಸುವ ಹೆಚ್.ಟಿ. ಸಾಂಗ್ಲಿಯಾನರಂಥ ಕ್ರೈಸ್ತ ಅಲ್ಪಸಂಖ್ಯಾತರು ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು. ಕ್ರೈಸ್ತ ಸಂಸ್ಥೆಗಳು ಬಜೆಪಿ ನಾಯಕರನ್ನು ಓಲೈಸುವುದನ್ನು ಬಿಟ್ಟು ಜನರನ್ನು ಕಟ್ಟುವ ಮತ್ತು ಜಾತ್ಯತೀತ ಸಂಘಟನೆಗಳನ್ನು ಬೆಂಬಲಿಸುವ ಕೆಲಸದಲ್ಲಿ ತೊಡಬೇಕು. ಜನಸಾಮಾನ್ಯರು ಪರಿಸ್ಥಿತಿ ವಿಷಮಿಸುವ ಮುನ್ನ ಎಚ್ಚರಗೊಳ್ಳಬೇಕು. ಇದು ಇಂದಿನ ತೀವ್ರವಾದ ಅಗತ್ಯ. ■

'ಬಂ' ಉಚ್ಚೆ ಪ್ರೋಸ್ಸರ್ ಕಡಿಮೆಯಾಗಿದೆಯಂತಲ್ಲಾ


ಥೂತ್ತೇರಿ

ಯಾಹೂ

ನಮ್ಮೀ ಭರತಭೂಮಿ ಸ್ವಾತಂತ್ರ್ಯ ಈಸಿಕೊಂಡು ಅರವತ್ತು ವರ್ಷವಾಯಿತೊ, ಅರವತ್ತೊಂದು ವರ್ಷವಾಯಿತೊ ಎಂದು ಅರಳುಮರಳಿನ ಜನ ಚರ್ಚಿಸುತ್ತಿರುವಾಗಲೇ, ಹಾದರಕ್ಕೆ ಹುಟ್ಟಿದ ಸರ್ಕಾರದ ಮಂತ್ರಿಗಳು ಬಾವುಟಗಳನ್ನು ಜಗ್ಗಿ ಭರ್ಜರಿಯಾದ ಭಾಷಣ ಬಿಗಿದೇಬಿಟ್ಟರಂತಲ್ಲಾ. ಈ ಮುಟ್ಠಾಳರು ಭಾಷಣ ಬಿಗಿಯುತ್ತಿರಬೇಕಾದರೆ, ಉತ್ತರ ಕರ್ನಾಟಕದಲ್ಲಿ ನೆರೆಹಾವಳಿಗೆ ತುತ್ತಾದ ಜನ, ಹಸು ಹಂದಿ ಕುರಿ ಕೋಳಿ ಕಳೆದುಕೊಂಡು ಮನುಷ್ಯರ ಸಾವಿಗಿಂತಲೂ ಭೀಕರವಾಗಿ ಅಳುತ್ತಿದ್ದರಂತಲ್ಲಾ. ಇತ್ತ ನಮ್ಮ ಭಾವಿ ಮುಖ್ಯಮಂತ್ರಿ ಎಡಗೈಲಿ ಕಿತ್ತು ಕೊಟ್ಟಂತೆ ಎರಡು ಕೋಟಿಯನ್ನು ಮಠವೊಂದಕ್ಕೆ ಕೊಟ್ಟು, ಪ್ರವಾಹ ಪೀಡಿತರಿಗೆ ಮಾತ್ರ "ಕೇಂದ್ರ ಕೊಟ್ಟರೆ ಕೊಡುತ್ತೇನೆ. ಇಲ್ಲದಿದ್ದರೆ ನಾನೆಲ್ಲಿಂದ ತರಲಿ. ನನ್ನಲ್ಲಿದ್ದುದೆಲ್ಲಾ ಖಾಲಿಯಾಗಿದೆ" ಎಂದು ಹೆಂಡತಿ ಸತ್ತವನಂತೆ ಅಳುತ್ತ ತಿರುಗುತ್ತಿದ್ದಾನಂತಲ್ಲಾ, ಥೂತ್ತೇರಿ!

* * * * * *

ಇತ್ತ ಕರ್ನಾಟಕದ ನಟೋರಿಯಸ್ ರಾಜಕಾರಣಿಗಳ ಅಳು ಬೇರೆಯದೇ ಆಗಿದೆಯಂತಲ್ಲಾ, ಮುಂದಿನ ಮೂರು ಮುಕ್ಕಾಲು ವಾರದಲ್ಲಿ ಎಡೂರಪ್ಪ ಮುಖ್ಯಮಂತ್ರಿಯಾದರೆ ಗತಿಯೇನೆಂದು ಬಸನಗೌಡ ಪಾಟೀಲನ ಪಟಾಲಂ ಅಳುಕುತ್ತ ಕಾಲ ಹಾಕುತ್ತಿರಬೇಕಾದರೆ, ದೇವೇಗೌಡರ ನಾಲ್ಕು ಮಕ್ಕಳನ್ನು ಸೇರಿಸಿ ಮಾಡಿದಂತಿರುವ ಡಿಕೆಶಿ ಕೈಗೆ ಸಿಕ್ಕಿದ ಕಾಂಗೈಗಳಿಗೆಲ್ಲಾ ಏರ್ ಟಿಕೆಟ್ ತೆಗೆದು ಅವನ್ನೆಲ್ಲಾ ಕರೆದುಕೊಂಡು ಹೋಗಿ ಮೇಡಂ ಮುಂದೆ ತೋರಿಸಿದನಂತಲ್ಲಾ, "ಇವರೆಲ್ಲಾ ನನ್ನ ಬೆಂಬಲಿಗರು. ಆ ಖರ್ಗೆ, ಧರ್ಮಸಿಂಗ್, ಸಿದ್ಧರಾಮಯ್ಯನ ಹಿಂದೆ ಹತ್ತು ಜನ ಕೂಡ ಇಲ್ಲ ಮೇಡಂ" ಎಂಬ ಅರ್ಥ ಬರುವಂತೆ ಅಭಿನಯಿಸಿ ಬಂದನಂತಲ್ಲಾ, ಥೂತ್ತೇರಿ!!



* * * * * *

ಒಗ್ಗಟ್ಟಿನಿಂದಿದ್ದ ಬಜೆಪಿ ಮನೆ ಸೋರತೊಡಗಿದೆ. ಗೌಡರ ಆರ್.ಸಿ.ಸಿ. ಮನೆ ವಿಪರೀತ ಸಿಮೆಂಟ್ ಮೆತ್ತಿದ್ದರಿಂದ ಬಿರುಕುಬಿಟ್ಟಿದೆ. ಕಾಂಗೈನ ಹಳೆ ಮನೆ ಜಂತಿ ಗೆದ್ದಲಿಡಿದು, ತೊಲೆ ತೀರಿನಲ್ಲಿ ಜೀರುಂಬೆ ಶಬ್ದ ಬರುತ್ತಿದೆ. ಮಾಯಾವತಿ ಬಂದು ಮಾಯಾ ಮಾಡುತ್ತಾಳೆಂದು ಕಾದಿದ್ದ ಬಿಎಸ್‌ಪಿಗಳಿಗೆ ಯಾರೂ ಮೈಂಟ್ ಮಾಡುತ್ತಿಲ್ಲ. ಇತ್ತ ಕಾಂಗೈನ ಗಂಜಿ ಗಡಿಗೆಗೆ ಉಚ್ಚೆ ಉಯ್ಯಲೆಂದು ಕಾದಿದ್ದ ಬಂಗಾರಪ್ಪನ ಉಚ್ಚೆ ಪ್ರೋಸ್ಸರ್ ಕಮ್ಮಿಯಾಗಿ ಕಾಲ ಮೇಲೆ ಹುಯ್ದುಕೊಳ್ಳುತ್ತಿದ್ದಾರಂತೆ. ಕರ್ನಾಟಕ ಪ್ರವಾಹದಿಂದ ಕೊಚ್ಚಿ ಹೋಗಿದೆ. ಬಯಲುಸೀಮೆ ಬಿತ್ತನೆ ಕಾರ್ಯವಿಲ್ಲದೆ ಬಸವಳಿದಿದೆ. ಸುವರ್ಣ ಕರ್ನಾಟಕದ ಸುವರ್ಣ ಯುಗವೆಂದರೆ ಇದೇ ಅಲ್ಲವೇ, ಥೂತ್ತೇರಿ!!!

* * * * * *

ಎಡೂರಪ್ಪನನ್ನು ಕಂಡಕೂಡಲೇ ಮುಖ ತಿರುಗಿಸುವುದು, ಹಸ್ತಲಾಘವಕ್ಕಾಗಿ ಕೈ ನೀಡಿದರೆ ಎತ್ತಲೋ ನೋಡುತ್ತ ಕೈ ಕೊಡುವುದು, ಪಕ್ಕದಲ್ಲಿರುವ ಎಡೂರಪ್ಪನ ಕಡೆ ನೋಡದೆ ಅಪ್ಪನಂತೆ ತೂಕಡಿಸುವುದು, ಇತ್ಯಾದಿ ಅಂಗ ಚೇಷ್ಟೆಯನ್ನು ಇದ್ದಕ್ಕಿದ್ದಂತೆ ಆರಂಭಿಸಿರುವ ಕುಮಾರಣ್ಣನನ್ನ ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಪೋನ್ ಮಾಡಿದರೆ ಸಿಕ್ಕೇ ಬಿಟ್ಟರು.

"ಹಲೋ ಸಾರ್, ನಾನು ಯಾಹು."

"ಏನೇಳಿ ಯಾಹೂ ಅವರೇ, ಬೇಗ ಹೇಳಿ."

"ಎಲ್ಲಾರ ಹೊರಟಿದ್ದೀರಾ ಸಾರ್?"

"ಮನೆ ಮುಂದೆ ಜಮಾಯಿಸಿರೊ ಜನ ನೋಡಿದ್ರೆ ಎಲ್ಲಾರ ಹೋಗಬೇಕು ಅನ್ನಿಸಿದೆ ಕಂಡ್ರಿ."

"ಅಷ್ಟೊಂದು ಜನವ ಸಾರ್?"

"ಮೂರು ನಾಲ್ಕು ಸಾವಿರ ಜನ ಬಂದು ಕುಂತವ್ರೆ ಕಂಡ್ರೀ, ಛೆ ನೋಡಕ್ಕಾಗದಿಲ್ಲ"

"ನೀವಿನ್ನ ಎರಡು ತಿಂಗಳು ಇರ್ತಿರಿ ಅಂತ ಗೊತ್ತಿದ್ರು ಅಷ್ಟು ಜನ ಬರ್ತರೆ ಅಂದ್ರೆ ನೀವೆ ಇದ್ಬುಬಿಡಿ ಸಾ ಅತ್ಲಾಗೆ."

"ಆ ಎಡೂರಪ್ಪ ಆಡೊ ಆಟ ನೋಡಿದ್ರೆ ಅಂಗೆ ಆಗಿದೆ ಕಂಡ್ರಿ. ಅಲ್ರೀ, ಹೋಗಿ ಹೋಗಿ ಮಕ್ಕಳತ್ರ ದೂರೇಳತನಲ್ಲ, ಅವ್ನಿಗೇನೋ ಆಗಿದೆ ಕಂಡ್ರಿ."

"ಅವ್ರರ ಮಕ್ಕಳತ್ರ ಹೇಳಿದ್ರಾ ಸಾರ್?"

"ಅವ್ರರ ಮಕ್ಕಳಲ್ಲ ಕಂಡ್ರಿ, ಸ್ವಾತಂತ್ರ್ಯ ದಿನಾಚರಣೆ ಆಚರಸಕ್ಕೆ ಅಂತ ಮಕ್ಕಳು ಬಂದ್ರೆ ಅವುರೆದ್ರಿಗೆ ಇವ್ರನೇನು ಮತಾಡಬೇಕು?"

"ಅದೇ, ನಾವು ಸ್ವಾತಂತ್ರ ಗಳಿಸಿದ್ದು ಹ್ಯಂಗೆ, ಯಾರ್‍ಯಾರು ಬಲಿದಾನವಾದ್ರು, ದೇಶ ಕಟ್ಟಿದ್ಯಂಗೇ ಅಂತ ಮಾತಾಡಬೇಕು...."

"ಅದಲ್ರೀ, ಏನು ಮಾತಾಡಬೇಕು ಅಂತ ಕೇಂದ್ರದಿಂದಲೇ ಒಂದು ಇದು ಬಂದದೆ. ಏನಂದ್ರೆ ಭಗತ್‌ಸಿಂಗ್ ಬಗ್ಗೆ ಅರವತ್ತು ವರ್ಷ ಆದದ್ದರ ಬಗ್ಗೆ ಇನ್ನು ಯಾವುದೋ ಒಂದು ಮಾಯಿತಿ ಬಂದದೆ ಕಂಡ್ರಿ. ಅದ್ನೇ ಮಾತಾಡಬೇಕು. ಈ ಮನ್ಷ ಅದು ಬುಟ್ಟು ಮುಂದಿನ ಮುಖ್ಯಮಂತ್ರಿ ನಾನೆಯ, ಇದಕ್ಕೆ ಆ ಸೂರ್ಯ ಚಂದ್ರರೇ ಸಾಕ್ಷಿ, ನಾನು ಉಪಮುಖ್ಯಮಂತ್ರಿಯಾಗಿ ಮಾತನಾಡೋದು ಇದೇ ಕಡೆ ಭಾಷಣ, ಮುಂದೆ ಮುಖ್ಯಮಂತ್ರಿಯಾಗೆ ಬಂದು ಮಾತಾಡ್ತಿನಿ, ಅನ್ನದೇನ್ರಿ?"

"ತಪ್ಪು ಸಾರ್, ಅಂಗ್ಯಲ್ಲ ಮಾತಾಡಬಾರ್ದು."

"ಅವುನಾತರ ಮಾತಾಡಿದಾಗ್ಲಿಂದ ಆತನ ಮುಖ ನೋಡಕ್ಕೂ ನನಗೆ ಬೇಜಾರಾಯ್ತದೆ ಕಂಡ್ರಿ."

"ಬೇಜಾರಾಗಲ್ಲವೆ ಮತ್ತೆ? ಮಕ್ಕಳೆದ್ರಿಗೆ ಏನು ಮಾತಾಡಬೇಕೊ ಅದ್ನೆ ಮಾತಾಡಬೇಕು. ಇವುರೇನಾದ್ರೆ ಅವುಕೇನಾಗಬೇಕು ಸಾರ್?"

"ನಮ್ಮಪ್ಪ, ನಾನು ಮನಸ್ಸು ಮಾಡದೆಯಿದ್ರೆ ಏನೂ ಆಗದೆ ಸತ್ತೋಗತಿದ್ರಲ್ರೀ. ಅದ ಮರೆತೇಬುಟ್ರು. ಮಾತೆತ್ತಿದರೆ ನಾನು ಮುಖ್ಯಮಂತ್ರಿ ಆಗೇ ಆಯ್ತಿನಿ, ಯಾರೂ ತಡಿಯಕ್ಕಾಗಲ್ಲ ಅಂದ್ರೆ ನಮಿಗೇನನ್ನಸುತ್ತೆ ಹೇಳಿ. ಅದ್ಯಂಗಾಯ್ತಿ ನೋಡ್ತಿನಿ ಅನ್ನಸಲ್ಲವ?"

"ಖಂಡಿತ ಅನ್ನುಸ್ತದೆ ಸಾರ್, ನೀವಾಗೋವತ್ತಿಗೆ ಇನ್ನೂ ಸುಮ್ಮನಿದ್ದಿರಿ."

"ನಾವು ಸುಮ್ಮನಿಲ್ಲ ಕಂಡ್ರೀ. ಈ ಕಾಂಗ್ರೆಸ್ ಬೋಳಿಮಕ್ಕಳು ಸರಿಯಾಗಿದ್ರೆ ಇವುರಿಗೆ ಸರಿಯಾಗಿ ಬುದ್ಧಿ ಕಲುಸಬವುದಿತ್ತು. ಏನ್ಮಾಡ್ತಿರಿ, ಅಲ್ಲೂ ಸರಿಯಿಲ್ಲ, ಧರ್ಮಸಿಂಗ್, ಮುನಿಯಪ್ಪ ಈ ತರ ಲೀಡ್ರಿದ್ರೆ ಯಂಗೊ ಆಗಿರೊ ತಪ್ಪಾ ಸರಿ ಮಾಡಿಕೊಂಡು ಹೋಗಬವುದಿತ್ತು."

"ಮತ್ತೆ ಈಗ ಯಂಗೆ ಮಾಡ್ತಿರಿ ಸಾರ್?"

"ನಮ್ಮ ತಂದೆ ಅದಕೇ ಅಲವೇನ್ರಿ ತುಂಬಾ ತಲೆ ಕೆಡಿಸಿಕೊಂಡು ತಮುಳನಾಡ ದೇವರ ಪ್ರಸಾದ ಕೇಳ್ತ ಅವ್ರೆ."

"ಇನ್ನೊಂದು ವಿಷಯ ಸಾರ್. ಮುಖ್ಯಮಂತ್ರಿ ಸ್ಥಾನ ತುಂಬ ಜವಾಬ್ದಾರಿ ಇರೊ ಸ್ಥಾನ ಅಂದಿದ್ದಿರಿ. ಇಂಥ ಜವಾಬ್ದಾರಿ ನಿಭಾಯಿಸೊ ಶಕ್ತಿ ಎಡೂರಪ್ಪನಿಗೆ ಇಲ್ಲಾ ಅಂತಿರಾ?"

"ಎಲ್ಲಿದೇರೀ? ನಮ್ಮ ಜೆಡಿಎಸ್‌ನಲ್ಲಿ ಎಲ್ಲಾ ಶಾಸಕರು ತುಟಿಪಿಟಿಕ್ ಅನ್ನದಂಗೆ ಮಡಿಕಂಡಿದ್ದಿನಿ. ಎಡೂರಪ್ಪನ ಶಾಸಕರು ಅಂಗಿದ್ದಾರಾ?"

"ಅಂಗಾದ್ರೆ, ಜೆಡಿಎಸ್ ಶಾಸಕರು ಸ್ವಾತಂತ್ರ್ಯ ಹೋರಾಟದ ಸ್ಥಿತಿಲಿದ್ದಾರಾ ಸಾರ್?

"ತಲೆಹರಟೆ ಬೇಡ, ಇಡ್ರಿ ಫೋನಾ!"

"ಥೂತ್ತೇರಿ!!" ■

> ಹತ್ತಿರತ್ತಿರ ಒಂದು ಸಾವಿರ ಓಟುಗಳಿರುವ ಅರ್ಚಕರಹಳ್ಳಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಜೆಡಿಎಸ್‌ಗೆ ಅಂತ ಬೆಂಬಲ ಏನಿಲ್ಲ. ಸರ್ಕಾರದ ಭೂ ಸ್ವಾಧೀನದ ಆದೇಶದಲ್ಲೂ ಜಾತಿ ವಾಸನೆ ಎಷ್ಟಿದೆಯೆಂದರೆ ಅರ್ಚಕರಹಳ್ಳಿಯ ಒಕ್ಕಲಿಗ ರೈತರ ಜಮೀನನ್ನು ಹೊರತುಪಡಿಸಿ ಬಹುತೇಕ ಲಿಂಗಾಯತ ರೈತರ ಭೂಮಿ ಮಾತ್ರ ನೋಟಿಫೈ ಮಾಡಲಾಗಿದೆ.

ಲಿಂಗಾಯತರಿಗೆ ರೇವಣ್ಣ ಕಿರುಕುಳ

ಗೌಡರ ಸುಪುತ್ರ ಎಚ್.ಡಿ. ರೇವಣ್ಣನ ವಿರುದ್ಧ ಲಿಂಗಾಯತರು ಉರಿದುರಿದು ಬೀಳುತ್ತಿದ್ದಾರೆ. ಅವರ ಹೊಟ್ಟೆಯೊಳಗಿನ ಕಿಚ್ಚು ರಟ್ಟೆಗೂ ಬರುವಂತೆ ಪ್ರಚೋದಿಸುತ್ತಿರುವುದು ಬೇರೆ ಯಾರೂ ಅಲ್ಲ... ಸ್ವತಃ ರೇವಣ್ಣನೆ!

ರಾಮನಗರದ ಹತ್ತಿರ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ಹೊರಟಿದೆಯಷ್ಟೇ. ಈ ಉದ್ದೇಶಕ್ಕಾಗಿ ಪೂರ್ತಿ ಲಿಂಗಾಯತ ರೈತರೇ ಇರುವ ಅರ್ಚಕರಹಳ್ಳಿ ಎಂಬ ಗ್ರಾಮವನ್ನೇ ಬಲಿಕೊಡುವಂತಹ ತೀಕ್ಷ್ಣ ನಿರ್ಧಾರವನ್ನೂ ರೇವಣ್ಣ ಮಾಡಿದ್ದಾರೆ. ಈ ಉದ್ದೇಶಿತ ಆರೋಗ್ಯ ವಿವಿಗೆ ಅದೇ ಅರ್ಚಕರಹಳ್ಳಿಗೆ ಲಗತ್ತಾಗಿರುವ ಸೂಕ್ತವಾದ ಸಾವಿರಾರು ಎಕರೆ ಸರ್ಕಾರಿ ಜಮೀನು ಇದ್ದರೂ ರೇವಣ್ಣ ಅದನ್ನು ಬೇಕಂತಲೇ ನಿರ್ಲಕ್ಷಿಸಿ ರೈತರ ಜಮೀನು ಕಿತ್ತುಕೊಳ್ಳಲು ನಿಂತುಬಿಟ್ಟಿದ್ದಾರೆ.



ಆರೋಗ್ಯ ವಿವಿ ಸ್ಥಾಪನೆಯ ಉದ್ದೇಶ ಒಳ್ಳೆಯದೆ. ಆದರೆ ಅಮಾಯಕ ಲಿಂಗಾಯತ ರೈತರನ್ನು ಬಲಿಕೊಡುವ ದುರುದ್ದೇಶ ರೇವಣ್ಣನಿಗೆ ಯಾಕೆ ಬಂತು ಎಂಬುದಕ್ಕೆ ಯಾರ ಹತ್ತಿರವೂ ಉತ್ತರ ಇದ್ದಂತಿಲ್ಲ.

ಅಧಿಕಾರದ ಪಿತ್ತ ರೇವಣ್ಣನ ನೆತ್ತಿಗೇರಿ ಬಹಳ ಕಾಲವಾಗಿದೆ. ಜೊತೆಗೆ ದುರಹಂಕಾರ, ದರ್ಪ, ಉಡಾಫೆ ರೇವಣ್ಣನಿಗಿದೆ ಅನ್ನೋದೂ ಬಹಳ ಜನಕ್ಕೆ ಗೊತ್ತು. ಅದಕ್ಕೆ ಹುಂಬತನವೆಂಬ ರಕ್ತಗತ ಬುದ್ಧಿಯೂ ಸೇರಿಕೊಂಡರೆ ರೇವಣ್ಣನಂಥ ಅವಿವೇಕಿ ಮಂತ್ರಿ ಸೃಷ್ಟಿಯಾಗದೆ ದಿವಾನ್ ಮಿರ್ಜಾ ಇಸ್ಮಾಯಿಲ್ ಹುಟ್ಟುತ್ತಾರೆ?


ಈ ರಾಜೀವ್ ಗಾಂಧಿ ಆರೋಗ್ಯ ವಿವಿಯ ಗಲಾಟೆ ಏನು ಎಂದು ಇಲ್ಲಿ ವಿವರಿಸಿದೆ.

ಲಿಂಗಾಯ್ತರ ಜಮೀನೇ ಯಾಕೆ ಬೇಕು?


ಈ ರೇವಣ್ಣ ಕರ್ನಾಟಕ ಸರ್ಕಾರದಲ್ಲಿ ಲೋಕೋಪಯೋಗಿ ಮಂತ್ರಿ. ಸಿಮೆಂಟು, ಕಬ್ಬಿಣ, ಜಲ್ಲಿ ಬಿಟ್ಟರೆ ಬೇರೇನೂ ಗೊತ್ತಿರದ ರೇವಣ್ಣ ಈಗ ರಾಜೀವ್‌ಗಾಂಧಿ ಆರೋಗ್ಯ ವಿವಿ ಬಗ್ಗೆ ಯಾಕೆ ತಲೆ ಕೆಡಿಸಿಕೊಂಡಿದ್ದಾರೆ ಎಂಬುದು ಸಾಕ್ಷಾತ್ ಭಗವಂತನಿಗೂ ಗೊತ್ತಿರುವಂತಿಲ್ಲ. ಇಷ್ಟಕ್ಕೂ ದಿನದ ಇಪ್ಪತ್ನಾಲ್ಕು ಗಂಟೆಯೂ ಮೂಗಿನೊಳಗೆ ಬೆರಳಿಟ್ಟುಕೊಳ್ಳುವಂತ ಅನಾರೋಗ್ಯಕರ ಗಬ್ಬು ಹವ್ಯಾಸದ ರೇವಣ್ಣ ಆರೋಗ್ಯ ಸಚಿವನೂ ಅಲ್ಲ ಎಂಬುದು ಗಮನಾರ್ಹ ವಿಚಾರ.

ರಾಮನಗರ ಟೌನಿಗೆ ತಾಗಿಕೊಂಡಿರುವ ಅರ್ಚಕರಹಳ್ಳಿ ಲಿಂಗಾಯತ ರೈತರೇ ಬಹುಸಂಖ್ಯಾತರಾಗಿರುವ ಒಂದು ಗ್ರಾಮ. ಇಲ್ಲಿರುವ 148 ರೈತ ಕುಟುಂಬಗಳಲ್ಲಿ 125 ಮಂದಿ ಲಿಂಗಾಯತರೇ ಇದ್ದಾರೆ. ಉಳಿದವರಲ್ಲಿ ಒಕ್ಕಲಿಗ, ಮುಸ್ಲಿಂರಲ್ಲಿ ತಲಾ ಒಂದು ಕುಟುಂಬ ಹಾಗೂ ಉಳಿದವರು ಬಳೆಗಾರರು ಮತ್ತು ದಲಿತರಿದ್ದಾರೆ. ಇವರಲ್ಲಿ ಬಹುತೇಕ ಎಲ್ಲರೂ ಸಣ್ಣ ರೈತರೆ.

ಬೆಂಗಳೂರು ಬೆಳೆಯುತ್ತಾ ಹೋದಂತೆ ನೈಸ್ ಕಾರಿಡಾರ್ ರಸ್ತೆ ಬಿಡದಿ ಟೌನ್‌ಶಿಪ್ ಮತ್ತು ಈಗ ರಾಮನಗರ ಜಿಲ್ಲಾ ಕೇಂದ್ರವಾಗಿದ್ದು ಇವೆಲ್ಲಾ ಸೇರಿ ಈ ಇಡೀ ಏರಿಯಾದಲ್ಲಿ ಭೂಮಿ ಬೆಲೆ ಏರಿದೆ. ರಾಮನಗರ ಸುತ್ತಮುತ್ತ ಎಕರೆಗೆ 60 ಲಕ್ಷ ಬೆಲೆ ಇದೆ. ರಾಗಿ ಬೆಳೆದು-ಬೆಳೆದು ಹೈರಾಣಾಗಿ ಹೋಗಿದ್ದ ಇಲ್ಲಿನ ಬಡರೈತರು ಜಮೀನಿನ ಬೆಲೆ ಏರುತ್ತಿದ್ದಂತೆ ಕನಿಷ್ಠ ಆದರಿಂದಲಾದರೂ ಸಮಾಧಾನಪಟ್ಟುಕೊಳ್ಳುತ್ತಿದ್ದರು. ಅರ್ಚಕರಹಳ್ಳಿಯ ರೈತರೂ ಇದಕ್ಕೆ ಹೊರತಾಗಿರಲಿಲ್ಲ. ಆದರೆ 2007 ರ ಫೆಬ್ರುವರಿ 27 ರಂದು ಸರ್ಕಾರ ಏಕಾಏಕಿ ಒಂದು ಅಧಿಸೂಚನೆ ಹೊರಡಿಸಿ ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಗೆಂದು ಅರ್ಚಕರಹಳ್ಳಿಯ 250 ಎಕರೆ ಫಲವತ್ತಾದ ಕೃಷಿ ಯೋಗ್ಯ ಭೂಮಿಯನ್ನು ನೋಟಿಫೈ ಮಾಡಿಬಿಟ್ಟಿತ್ತು. ಆಶ್ಚರ್ಯದ ವಿಚಾರ ಏನೆಂದರೆ ಇದೇ ರಾಜೀವ್ ಗಾಂಧಿ ವಿ.ವಿ.ಗೆ ಬೇರೊಂದೆಡೆ 19.4.2002 ರಲ್ಲೇ 50 ಎಕರೆ ಭೂಮಿ ಕೊಡಲು ಸರ್ಕಾರವೇ ಅಧಿಸೂಚನೆ ಹೊರಡಿಸಿತ್ತು. ಕೆಂಗೇರಿ ಹೋಬಳಿಯ ಭೀಮನಕೊಪ್ಪೆಯ ಸರ್ವೆ ನಂಬರ್ 73 ರಲ್ಲಿ ಈ ಜಮೀನಿತ್ತು. ಸರ್ಕಾರಿ ಆದೇಶ ಸಂಖ್ಯೆ ಆರ್9 ಎಲ್‌ಜಿಬಿ 2001 ದಿನಾಂಕ 13.12.2001 ರಂತೆ ರಾಜೀವ್ ಗಾಂಧಿ ವಿವಿಯ ಅಂದಿನ ಕುಲಸಚಿವ ಕೆ.ಎಂ. ಶ್ರೀನಿವಾಸಗೌಡರು ಸದರಿ ಜಮೀನನ್ನು ರೆವಿನ್ಯೂ ಅಧಿಕಾರಿಗಳ ಸಮ್ಮುಖದಲ್ಲಿ 19.4.2002 ರಂದು ವಶಕ್ಕೆ ಪಡೆದುಕೊಂಡಿದ್ದರು.


ಅರ್ಚಕರಹಳ್ಳಿಯ ನಕ್ಷೆ

ಹೀಗೆ ವಿ.ವಿ.ಗೆ ಬೆಂಗಳೂರಿಗೆ ಹತ್ತಿರದಲ್ಲೇ 50 ಎಕರೆಯಷ್ಟು ಸಮೃದ್ಧ ಜಾಗ ಸಿಕ್ಕಿತ್ತಾದರೂ ನಿರ್ಮಾಣ ಕಾರ್ಯವೇನೂ ಶುರುವಾಗಿರಲಿಲ್ಲ, ಅದೇರೀತಿ ಅರ್ಚಕರಹಳ್ಳಿಯ ಜನರಿಗೂ ಜಮೀನು ಕಳೆದುಕೊಳ್ಳುವ ಕನಸೂ ಬಿದ್ದಿರಲಿಲ್ಲ, ಆದರೆ ಯಾವಾಗ ರಾಮನಗರವನ್ನು ಜಿಲ್ಲೆಯಾಗಿ ಬದಲಾಯಿಸಲಾಯಿತೊ, ಬಿಡದಿ ಟೌನ್‌ಶಿಪ್ ಅನ್ನು ರಿಲಯನ್ಸ್‌ನವರಿಗೆ ಒಪ್ಪಿಸುವ ಡೀಲ್ ಕುದುರಿತೊ, ಬೇರೆ ಕೆಲವು ದೊಡ್ಡ ಯೋಜನೆಗಳನ್ನು ರಾಮನಗರಕ್ಕೆ ತರುವ ಪ್ಲಾನ್ ಸಿದ್ಧವಾಯಿತು. ಜನರಿಗೇನೋ ಉಪಕಾರ ಮಾಡಿದಂತೆಯೂ ಕಾಣಿಸಬೇಕು, ಜೊತೆಗೆ ರಾಮನಗರ ಕೇಂದ್ರವಾಗಿ ಅದರ ಸುತ್ತಾ ಇನ್ನಷ್ಟು ದೊಡ್ಡ ಖಾಸಗಿ ಯೋಜನೆಗಳು, ಕಟ್ಟಡ ರಸ್ತೆ ಆಗಬೇಕು. ಇದು ಗೌಡರ ಮಕ್ಕಳ ಅಸಲಿ ಸ್ಕೀಂ. ರಾಜೀವ್ ಗಾಂಧಿ ಆರೋಗ್ಯ ವಿ.ವಿ. ಅದರ ಒಂದು ಭಾಗ ಅಷ್ಟೇ. ಹಾಗಾಗಿ ಈಗಾಗಲೇ ಜಮೀನು ಮಂಜೂರಾಗಿದ್ದರೂ ಕುಮಾರಸ್ವಾಮಿ ಸರ್ಕಾರವೇ ಮತ್ತೆ ಆ ವಿಚಾರ ಪ್ರಸ್ತಾಪಿಸಿ ಅರ್ಚಕರಹಳ್ಳಿ ಬಳಿ 250 ಎಕರೆ ನೀಡುವುದಾಗಿಯೂ, ಅಲ್ಲೇ ವಿವಿ ಸ್ಥಾಪಿಸುವಂತೆಯೂ ಸಲಹೆ ನೀಡಿತ್ತು.



ರೈತರಿಗೆ ಭಯ ಶುರುವಾಗಿದ್ದು ಆಗಲೇ. ಈ ನಡುವೆ ಸಚಿವ ರೇವಣ್ಣ ತಮಗೆ ನೇರವಾಗಿ ಸಂಬಂಧಿಸಿರದ ವಿಷಯವಾಗಿದ್ದರೂ ಭೂಸ್ವಾಧೀನ ಪ್ರಕ್ರಿಯೆ ಬಗ್ಗೆ ಅನಗತ್ಯ ಆಸಕ್ತಿ ತೋರಿಸಲು ಶುರು ಮಾಡಿದರು. ಒಂದಲ್ಲಾ ಎರಡು ಬಾರಿ ಸ್ಥಳ ಪರಿಶೀಲನೆ ನಡೆಸಿ ಬಂದರು. ಅಷ್ಟರಲ್ಲಿ ಅಲ್ಲಿನ ಲಿಂಗಾಯತ ರೈತರು ಕೆ. ಹೊನ್ನಯ್ಯ ಹಾಗೂ ಸಿದ್ದಪ್ಪನವರ ನೇತೃತ್ವದಲ್ಲಿ ಅರ್ಚಕರಹಳ್ಳಿ ರೈತರ ಹೋರಾಟ ಸಮಿತಿ ರಚಿಸಿಕೊಂಡು ಭೂಸ್ವಾಧೀನ ವಿರೋಧಿಸಿ ಧರಣಿ, ಪ್ರತಿಭಟನೆ ಪ್ರಾರಂಭಿಸಿದರು.

ಬಳಿದಾಳೆ ಈಶ

ಇಲ್ಲಿ ರೈತರ ಬೇಡಿಕೆ ಸ್ಪಷ್ಟವಾಗಿತ್ತು. ಅದೇ ಅರ್ಚಕರಹಳ್ಳಿಗೆ ತಾಗಿಕೊಂಡಂತೆ ದೊಡ್ಡಮಣ್ಣುಗುಡ್ಡೆ ಎಂಬಲ್ಲಿ ಸುಮಾರು 3 ಸಾವಿರ ಎಕರೆ ಸರ್ಕಾರಿ ಬೀಳು ಜಮೀನಿದೆ. ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಗೆ ಅಲ್ಲೇ ಜಮೀನು ನೀಡಬಹುದಿತ್ತು. ಅದುಬಿಟ್ಟು ನೂರಾರು ರೈತರನ್ನು ಒಕ್ಕಲೆಬ್ಬಿಸಿ, ಜಮೀನು ಕಿತ್ತುಕೊಂಡು, ಮನೆಗಳನ್ನು ಕೆಡವಿ ವಿ.ವಿ.ಗೆ ನೀಡುವ ಅಗತ್ಯವೇನೂ ಇರಲಿಲ್ಲ. ತಲೆ ನೆಟ್ಟಗಿರುವ ಯಾವನಿಗಾದರೂ ಇಷ್ಟು ಸರಳ ವಿಚಾರ ಅರ್ಥವಾಗುತ್ತದೆ. ಆದರೆ ರೇವಣ್ಣನಿಗೆ ಮಾತ್ರ ಇದು ಬೇಕಿಲ್ಲ. ಸ್ಥಳ ಪರಿಶೀಲನೆಗೆಂದು ಒಮ್ಮೆ ಅರ್ಚಕರಹಳ್ಳಿಗೆ ಬಂದ ರೇವಣ್ಣನಿಗೆ ರೈತರು ಮನವಿಪತ್ರ ನೀಡಲು ಹೋದಾಗ ರೇವಣ್ಣ ಬಾಯಿಗೆ ಬಂದಂತೆ ಮಾತಾಡಿದ್ದಾರೆ. "ಜಮೀನು ಕೊಡಲ್ಲ ಅಂದರೆ ಬುಲ್ಡೋಜರ್ ತರಿಸಿ ಎಲ್ಲಾ ನೆಲಸಮ ಮಾಡಿ ಜಮೀನು ತಗೋತೀವಿ" ಎಂದು ಗದರಿಸಿ ಓಡಿಸಿದ್ದಾರೆ.

ಏನಿದರ ಅರ್ಥ?

ಸಾವಿರಾರು ಎಕರೆ ಸರ್ಕಾರಿ ಭೂಮಿ ಬಿದ್ದಿದ್ದರೂ ಅದನ್ನು ಬಿಟ್ಟು ಜೀವಂತ ಹಳ್ಳಿಯೊಂದನ್ನು ನಾಶ ಮಾಡಲು ಹೊರಟವನನ್ನು ಯಾರು ತಾನೆ ಮೆಚ್ಚುತ್ತಾರೆ?

ರಾಮನಗರದ ಲಿಂಗಾಯತ ರೈತರ ಮೇಲೆ ರೇವಣ್ಣನಿಗ್ಯಾಕೆ ಇಷ್ಟೊಂದು ದ್ವೇಷ?

ಹತ್ತಿರತ್ತಿರ ಒಂದು ಸಾವಿರ ಓಟುಗಳಿರುವ ಅರ್ಚಕರಹಳ್ಳಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಜೆಡಿಎಸ್‌ಗೆ ಅಂತ ಬೆಂಬಲ ಏನಿಲ್ಲ, ಒಬ್ಬ ಒಕ್ಕಲಿಗ ಲೀಡರ್ ಮೇಕೆದಾಟು ರಾಮಯ್ಯ ಬಿಟ್ಟರೆ ಅಲ್ಲಿ ಒಕ್ಕಲಿಗ ಜಾತಿಯ ರೈತರೂ ಇಲ್ಲ. ಸರ್ಕಾರದ ಭೂ ಸ್ವಾಧೀನದ ಆದೇಶದಲ್ಲೂ ಜಾತಿ ವಾಸನೆ ಎಷ್ಟಿದೆಯೆಂದರೆ ಅರ್ಚಕರಹಳ್ಳಿಯ ಒಕ್ಕಲಿಗ ರೈತರ ಜಮೀನನ್ನು ಹೊರತುಪಡಿಸಿ ಬಹುತೇಕ ಲಿಂಗಾಯತ ರೈತರ ಭೂಮಿ ಮಾತ್ರ ನೋಟಿಫೈ ಮಾಡಲಾಗಿದೆ.

ಈ ಮಧ್ಯೆ ವಶಪಡಿಸಿಕೊಂಡ ಜಮೀನಿಗೆ ಪರಿಹಾರ ನೀಡುವ ಬಗ್ಗೆಯೂ ರೇವಣ್ಣ ತಲೆ ಹಾಕಿ ಬೆಲೆ ಕಡಿಮೆ ಮಾಡಿಸಿದ್ದಾರೆ. ಈ ಏರಿಯಾದಲ್ಲಿ stage A,B,C,D ಎಂದು ವಿಭಾಗಿಸಿ ಕ್ರಮವಾಗಿ 15 ಲಕ್ಷ ನಂತರ 12,8,6 ಲಕ್ಷ ಎಂದು ನಿಗದಿ ಮಾಡಿಸಿದ್ದಾರೆ. ಆದರೆ ಅಲ್ಲಿ ಓಪನ್ ಮಾರ್ಕೆಟ್ ಬೆಲೆ ಈಗಾಗಲೇ 70 ಲಕ್ಷ ತಲುಪಿದೆ.

ಯಾವ ರೈತರಿಗೇ ಆಗಲೀ ಸರ್ಕಾರದ ಈ ವಂಚನೆ ನೋಡಿ ರೇಗುತ್ತದಾ ಇಲ್ಲವಾ ಹೇಳಿ?

ಇಷ್ಟರ ನಡುವೆ ತಮ್ಮ ದುಃಖ ದುಗುಡ ಹೇಳಿಕೊಳ್ಳಲು ರೈತರು ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಹುಡುಕಿಕೊಂಡು ಹೋದರೆ ಅಲ್ಲಿ ರೇವಣ್ಣ ಹಾಜರಾಗಿ ತಾನೇ ಮಾತಾಡಿ ಬೈದು, ಗದರಿಸಿ ಓಡಿಸುತ್ತಿದ್ದಾರೆ.

ರಾಮನಗರವನ್ನೇನಾದರೂ ಕುಮಾರಸ್ವಾಮಿಯವರು ರೇವಣ್ಣನಿಗೆ ಅಡ ಇಟ್ಟಿದ್ದಾರಾ ಅಂತ!

ಒಕ್ಕಲಿಗರಿಗೆ ರಿಯಾಯಿತಿ

ಸರ್ಕಾರಿ ಯೋಜನೆಯೊಂದಕ್ಕೆ ಭೂಸ್ವಾಧೀನ ಮಾಡಿಕೊಳ್ಳುವಾಗ ಜಾತಿ ಲೆಕ್ಕಾಚಾರ ಹಾಕುತ್ತಾರೆ ಎಂದು ಆರೋಪಿಸುವುದು ಕಷ್ಟ ಸಾಧ್ಯ. ಆದರೆ ರೇವಣ್ಣನ ದರ್ಬಾರಿನಲ್ಲಿ ಅದು ನಿಜವಾಗಿಬಿಟ್ಟಿದೆ.

ಈಗಿನ ಪ್ರಸ್ತಾಪಿತ ರಾಜೀವ್ ಗಾಂಧಿ ಆರೋಗ್ಯ ವಿವಿಗೆ ಲಿಂಗಾಯತ ರೈತರ ಜಮೀನುಗಳನ್ನು ಮಾತ್ರ ಆರಿಸಿ ಆರಿಸಿ ನೋಟಿಫೈ ಮಾಡಿದ್ದಾರೆ. ಅಷ್ಟೇ ಅಲ್ಲ, ಅದರ ಅಕ್ಕಪಕ್ಕದಲ್ಲಿರುವ ಒಕ್ಕಲಿಗ ರೈತರ ಜಮೀನನ್ನು ನೋಟಿಫೈ ಮಾಡದೆ ರಿಯಾಯಿತಿ ತೋರಿಸಲಾಗಿದೆ. ಉದಾಹರಣೆಗೆ ಇದೇ ಅರ್ಚಕರಹಳ್ಳಿ ಗ್ರಾಮದಲ್ಲಿ ಕೆ. ರಾಮಯ್ಯ ಎಂಬ ದಳದ ಪುಂಡು ಲೀಡರ್ ಇದ್ದಾನೆ. ಮೇಕೆದಾಟು ರಾಮಯ್ಯ ಅಂತ ಇವನ ಅಡ್ಡಹೆಸರು. ಇವನು ಕೆಲ ದಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ನಾಮಕಾವಸ್ಥೆಯ ಅಧ್ಯಕ್ಷನೂ ಆಗಿದ್ದ.

ಈ ಮೇಕೆದಾಟು ರಾಮಯ್ಯನಿಗೆ ಅರ್ಚಕರಹಳ್ಳಿ ಸರ್ವೆ ನಂಬರ್ 69,70/1, 70/2, 73/2 ಗಳಲ್ಲಿ ಹದಿಮೂರೂವರೆ ಎಕರೆ ಜಮೀನಿದೆ. ಈ ಜಮೀನಿನ ಅಕ್ಕಪಕ್ಕ ಇರುವ ಲಿಂಗಾಯತ ರೈತರ ಜಮೀನು ಮಾತ್ರ ನೋಟಿಫೈ ಮಾಡಿಸಿ ಒಕ್ಕಲಿಗ ರಾಮಯ್ಯನದ್ದು ಮಾತ್ರ ಬಿಟ್ಟು ಬಿಡುತ್ತಾರೆಂದರೆ ಅದನ್ನು ಜಾತಿಯಾಧಾರಿತ ಭೂಸ್ವಾಧೀನ ಅನ್ನಬೇಕೊ ಬೇಡವೋ ನೀವೇ ಹೇಳಿ. ಇಷ್ಟಲ್ಲದೆ ಅರ್ಚಕರಹಳ್ಳಿ ಅಕ್ಕಪಕ್ಕದ ಕಲ್ಲಮಂಗಲ ದೊಡ್ಡಿ, ರಂಗರಾಯನ ದೊಡ್ಡಿಯಲ್ಲೂ ಭೂಸ್ವಾಧೀನ ಉದ್ದೇಶ ಮೊದಲಿಗೆ ಇತ್ತು, ಆದರೆ ಅಲ್ಲೆಲ್ಲಾ ಒಕ್ಕಲಿಗ ರೈತರೇ ಜಾಸ್ತಿ ಇದ್ದ ಕಾರಣ ಕೊನೆಗೆ ಲಿಂಗಾಯತರಷ್ಟೇ ಇದ್ದ ಅರ್ಚಕರಹಳ್ಳಿಯನ್ನು ರೇವಣ್ಣ ಭೂಸ್ವಾಧೀನಕ್ಕೆ ಸೂಚಿಸಿ ರಂಪ ಮಾಡಿಕೊಂಡಿದ್ದಾರೆ. ಇದಕ್ಕೆ ಸ್ಥಳೀಯ ಜೆಡಿಎಸ್ ಲೀಡರ್‌ಗಳಾದ ಅಪ್ಪೇರಹಳ್ಳಿ ಕೆ. ರಾಜು, ಉಮೇಶಾಚಾರಿಗಳ ಕುಮ್ಮಕ್ಕೂ ಇದೆ.

ಈ ರೇವಣ್ಣ ಎಂಥ ಅವಿವೇಕಿ ಅನ್ನಲು ಇನ್ನೂ ಒಂದು ಉದಾಹರಣೆ ಬೇಕೆ?

ನಿಮಗೆ ಮಂಚನಬೆಲೆ ಜಲಾಶಯ ಗೊತ್ತಿರಬೇಕು. ಹತ್ತಾರು ಕೋಟಿ ವೆಚ್ಚದ ಈ ಯೋಜನೆ ಈಗ ಪೂರ್ಣಗೊಂಡಿದೆ. ಈ ಜಲಾಶಯದ ಅಚ್ಚುಕಟ್ಟು ವ್ಯಾಪ್ತಿಗೆ ಅರ್ಚಕರಹಳ್ಳಿಯೂ ಸೇರಿದೆ. ಅಂದರೆ ಈ ಇಡೀ ಗ್ರಾಮ ನೀರಾವರಿ ಸೌಲಭ್ಯ ಪಡೆದಿರುವ ಪ್ರದೇಶ. ಹಾಗಂದ ಮೇಲೆ ಈ ಗ್ರಾಮ ಒಂದು ಕೃಷಿ ಚಟುವಟಿಕೆಯ ಗ್ರಾಮವಾಗಿ ತಾನೆ ಉಳಿಯಬೇಕು?

ಮಣ್ಣಿನ ಮಗನ ಮಗ ರೇವಣ್ಣನಿಗೆ ಅಷ್ಟು ಕಾಳಜಿಯೂ ಇಲ್ಲ. ಇಷ್ಟಕ್ಕೂ ಅರ್ಚಕರಹಳ್ಳಿಯ ಪಕ್ಕದಲ್ಲೇ ಇರುವ 3 ಸಾವಿರ ಎಕರೆ ಸರ್ಕಾರಿ ಜಮೀನನ್ನೇ ಯಾಕೆ ರಾಜೀವ್ ಗಾಂಧಿ ವಿವಿಗೆ ಕೊಡುತ್ತಿಲ್ಲ ಗೊತ್ತೆ? ಯಾವನಾದರು ದೊಡ್ಡ ಖಾಸಗಿ ಬಿಲ್ಡರ್‌ಗೆ ಒಪ್ಪಿಸಿ ಕಾಸು ಕಿತ್ತುಕೊಳ್ಳಲು ಅಷ್ಟೆ. ಹಾಗಾಗಿ ರೇವಣ್ಣನಿಗಾಗಲಿ, ಕುಮಾರಸ್ವಾಮಿಗಾಗಲಿ ಅರ್ಚಕರಹಳ್ಳಿಯ ರೈತರ ಸಂಕಟ ಕಾಣುತ್ತಿಲ್ಲ.

ರೇವಣ್ಣನ ದರ್ಬಾರಿನಲ್ಲಿ ಹಾಸನ ಬರ್ಬಾದ್

ಆಡಳಿತದ ಕೀಡುಗಾಲದಲ್ಲಿ ದೇವೇಗೌಡರ ಪುತ್ರ ರೇವಣ್ಣ ವಕ್ರದೃಷ್ಟಿ ಹಾಸನ ಜಿಲ್ಲೆ ಉದ್ಧಾರ ಮಾಡು ..., ಬಿತ್ತೋ ಅವತ್ತೇ ಕೋಟಿ ಕೋಟಿ ಖರ್ಚು ಮಾಡಿ ...ದ್ದ ಸರ್ಕಾರಿ ಕಟ್ಟಡಗಳು ನೆಲಸಮಗೊಂಡವು. ... ಅಗಲೀಕರಣ ಮಾಡ್ತೇನೆ ಎಂದು ಊರಿನ ರಸ್ತೆ ...ಯ ಕಟ್ಟಡಗಳೆಲ್ಲಾ ಧರೆಗುರುಳಿದವು. ಐದು ಗುಂಟೆ ... ಗುಂಟೆ ಇಟ್ಟುಕೊಂಡು ಇದೇ ನಮ್ಮ ಜೀವಿತಾವಧಿ ..., ಎಂದಿದ್ದ ನಗರದ ಸುತ್ತ ಮುತ್ತಲಿನ ಸಣ್ಣಪುಟ್ಟ ...ಸುವರ್ತಿವಾರರೆಲ್ಲ ಬೀದಿಗೆ ಬಂದರು. ಒಟ್ಟಾರೆ ...ವಣ್ಣನ ಅಭಿವೃದ್ಧಿ, ಹಾಸನವೂ ಸೇರಿದಂತೆ ಜಿಲ್ಲೆಯ ...ವರನ್ನು ಇನ್ನಿಲ್ಲದಂತೆ ಕಾಡುತ್ತಿದೆ.

... ರಾಜ್ಯವೇ ಬೆಕ್ಕಸಬೆರಗಾಗುವಂತೆ ಹಾಸನ ಜಿಲ್ಲೆಗೆ ...ಟ್ಯಂತರ ರೂ.ಗಳ ಅನುದಾನ ಹರಿದುಬರುತ್ತಿದೆ. ...ದ 38 ತಿಂಗಳಲ್ಲಿ ಹತ್ತಿರ ಹತ್ತಿರ 1500 ಕೋಟಿ ...ಹಾಯಿ ಹೆಚ್ಚು ಅನುದಾನವನ್ನು ಜಿಲ್ಲೆಗೆ ತಂದ ...ನ ರೋಡು ಮಂತ್ರಿ ರೇವಣ್ಣಂದು. ಅದು ಜಿಲ್ಲೆಯ ...ವೃದ್ಧಿಗೆ ಹೇಗೆ ಉಪಯೋಗವಾಗಿದೆ ಎಂದು ...ಡುಕಿದರೆ ಮಾತ್ರ ಸರ್ಕಾರದ ಹಣ ಹೇಗೆ ...ರುಪಯೋಗವಾಗುತ್ತಾ ಬರುತ್ತದೆ ಎಂಬುದಕ್ಕೆ ಉದಾ...ಣೆಯಾಗಿ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತದೆ!

ಮೆಡಿಕಲ್ ಕಾಲೇಜ್ ತಂದ ಅವಾಂತರ

... ಹಾಸನ ಜಿಲ್ಲೆಗೆ ಸರ್ಕಾರಿ ಮೆಡಿಕಲ್ ಕಾಲೇಜ್ ...ದ ಹೆಗ್ಗಳಿಕೆ ಪಡೆದ ರೇವಣ್ಣ ಅದನ್ನು ಆತನ ...ದ್ಧಿಗನುಗುಣವಾಗಿ ನಗರದ ಮಧ್ಯಭಾಗಕ್ಕೆ ತಂದಿಟ್ಟ.

ರೋಡು ಮಂತ್ರಿ ರೇವಣ್ಣನ ರಗಳೆ!

ಹಾಸನದ ಮುಖ್ಯ ರಸ್ತೆಯನ್ನು ಷಡ್ಪಥ, ಚತುಷ್ಪಥ ರಸ್ತೆ ಮಾಡುತ್ತೇನೆ ಎಂದು ಹೊರಟ ರೇವಣ್ಣ ಹಾಸನ, ಅರಸೀಕೆರೆ, ಅರಕಲಗೂಡು ನಗರಗಳ ಮುಖ್ಯ ರಸ್ತೆಗಳನ್ನು ಅಗೆದ. ಆ ರಸ್ತೆಗಳ ಪಕ್ಕಕ್ಕಿದ್ದ ಕಟ್ಟಡಗಳಿಗೆ ಯಾವುದೇ ಪರಿಹಾರ ನೀಡದೆ ಕೆಡವಿ ರಸ್ತೆ ಅಗಲೀಕರಣ ಮಾಡುತ್ತೇನೆಂದು ಹೊರಟು 2 ವರ್ಷ ಕಳೆಯಿತು. ರಸ್ತೆಗಳ ಸುತ್ತಲಿನ ಕಟ್ಟಡಗಳು ಧರೆಗುರುಳಿದವು. ರಸ್ತೆ ಅಗೆಯಲಾಯಿತು. ರಸ್ತೆ ಕಂಟ್ರಾಕ್ಟು, ರೇವಣ್ಣನ ಆಪ್ತನ ಶಿಷ್ಯ ಕೊಠಾರಿಗೆ ಮಂಜೂರಾಯಿತು. ಪರಿಣಾಮ ಎರಡು ವರ್ಷದಿಂದ ಈ ರಸ್ತೆಗಳಲ್ಲಿ ಅನಿವಾರ್ಯವಾಗಿ ಸಂಚರಿಸುತ್ತಿರುವವರ ಸ್ಥಿತಿ ಶೋಚನೀಯವಾಗಿದೆ. ರಸ್ತೆಗಳಲ್ಲೂ ಹೊಂಡಗಳಾಗಿ, ಹೊಂಡ ಕೆರೆಗಳಾದವು. ಬೇಸಿಗೆಯಲ್ಲಿ ಧೂಳುಮಯವಾಗುವ ರಸ್ತೆಗಳು ಮಳೆಗಾಲದಲ್ಲಿ ಕೆಸರುಮಯವಾದವು. ಒಂದು ತಿಂಗಳಲ್ಲಿ ಏನಿಲ್ಲವೆಂದರೂ ಈ ರಸ್ತೆಯ ಮೇಲೆ ಸಂಭವಿಸಿದ ಅಪಘಾತಗಳಲ್ಲಿ 19 ಜನರು ಪ್ರಾಣ ಕಳೆದುಕೊಂಡರು. ಅದರಲ್ಲೂ ಹಾಸನ ನಗರದ ರಸ್ತೆ ಅಗಲೀಕರಣ ಕಳೆದ ಮೂರು ವರ್ಷಗಳಿಂದ ರೋಚಕ ತಿರುವು ಪಡೆದುಕೊಳ್ಳುತ್ತಲೇ ಇದೆ. ರೇವಣ್ಣನ ಆಪ್ತರ ಮನೆ, ಕಟ್ಟಡಗಳ ಮುಂದೆ ಕಿರಿದಾಗುವ ರಸ್ತೆ, ಅಮಾಯಕರ ಕಟ್ಟಡಗಳ ತಲೆ ಸವರಿದೆ. ಇದನ್ನು ಕಂಡ ಕೇಂದ್ರ ರಸ್ತೆ ನಿಗಮದ ತಂಡ ಇದ್ಯಾವನ್ರಿ ಪ್ಲಾನ್ ಮಾಡಿದವ್ನು ಅಂತ ಯದ್ವಾತದ್ವಾ ಉಗಿದುಹೋಗಿದೆ. ಅರಕಲಗೂಡು ರಸ್ತೆ ಕೆಸರುಮಯವಾಗಿ ಜನ ಕೆಸರು

ಬಿಡಣ್ಣ" ಎನ್ನುವ ರೇವಣ್ಣ ಅಭಿವೃದ್ಧಿ ಹೆಸರಿನಲ್ಲಿ ತನ್ನ ಜನ್ಮ ದ್ವೇಷಿ ಎಂದೇ ರೂಢಿಯಾಗಿರುವ ಒಕ್ಕಲಿಗರ ದಾಸ ಪಂಗಡವೇ ಹೆಚ್ಚಾಗಿ ವಾಸಿಸುವ ಹಾಸನದ ಸುತ್ತಮುತ್ತಲಿನ ಹಳ್ಳಿಗಳನ್ನು ಸ್ವಾಧೀನಪಡಿಸಿಕೊಂಡು ಅವರನ್ನು ಆರ್ಥಿಕವಾಗಿ ದುರ್ಬಲರನ್ನಾಗಿ ಮಾಡುವುದಲ್ಲದೇ ಅವರನ್ನು ಗುಳೆ ಎಬ್ಬಿಸಲು ಹೊರಟಿದ್ದಾರೆ. ಹೋಗಲಿ ಈ ಪುಣ್ಯಾತ್ಮ ಮಾಡುತ್ತಿರುವ ಅಭಿವೃದ್ಧಿಯಿಂದ ರೈತರಿಗೆ ಉದ್ಯೋಗ ಸಿಕ್ಕು ಅವರ ಬಾಳಾದರೂ ಹಸನಾಗುತ್ತಾ ಎಂದರೆ ಅದೂ ಕಾಣುತ್ತಿಲ್ಲ. ಪಶು ವೈದ್ಯಕೀಯ ಕಾಲೇಜಿಗೆ 585 ಎಕರೆ ಪಡೆದಿದ್ದಾನೆ. ಇದರಲ್ಲಿ ಈತ ಅದ್ಯೇಗೇ ಭೂ ಮಾಲೀಕರಿಗೆ ಕೆಲಸ ಕೊಡಲು ಸಾಧ್ಯ. ಡಿ ದರ್ಜೆ ಕೆಲಸ ಸಿಗಲು ಕೂಡ ಸರ್ಕಾರದಲ್ಲಿ ಅವಕಾಶವಿದೆಯಾ ಎಂದು ಕೇಳಿದರೆ ಅದಕ್ಕೂ ಪೂರ್ತಿ ಬಾಯಿಬಿಡುತ್ತಿಲ್ಲ.


ಇದೀಗ ಹೌಸಿಂಗ್ ಬೋರ್ಡ್ ಮನೆಗಳಿಗೆ ಅಂತ 900 ಎಕರೆ ಸ್ವಾಧೀನ ಮಾಡಿದ್ದಾರೆ. ಈ ಪ್ರದೇಶದಿಂದ ಅದ್ಯಾವ ರೈತರಿಗೆ ಅದ್ಯಾವ ಕೆಲಸ ಕೊಡ್ತಾನೋ ಗೊತ್ತಿಲ್ಲ. ಇನ್ನು 5000 ಎಕರೆ ತದಡಿ ವಿದ್ಯುತ್ ಸ್ಥಾವರ, ಹಾಸನದ ಬೈಪಾಸ್‌ನಲ್ಲಿ ಐಟಿಗಾಗಿ 1000 ಎಕರೆ, ವಿಮಾನ ನಿಲ್ದಾಣ, ತರಬೇತಿ ಕಾರ್ಯಾಗಾರ, ತಾಂತ್ರಿಕ ಕಾರ್ಯಾಗಾರಕ್ಕೆ ಭುವನಹಳ್ಳಿ ಬಳಿ 2500 ಎಕರೆ, ಟರ್ಮಿನಲ್ ಮಾರ್ಕೆಟ್‌ಗಾಗಿ 180 ಎಕರೆ, ಗೃಹ ಮಂಡಳಿಗೆ 580 ಎಕರೆ, ಭವಿಷ್ಯಕ್ಕೆ ಅಂತ 5000 ಎಕರೆ ಬೇಕು ಅಂತ ರೇವಣ್ಣ ಪ್ರಪೋಸಲ್ ಇಟ್ಟಿದ್ದಾನೆ. ಇದು ರೇವಣ್ಣನ ಅಭಿವೃದ್ಧಿಯ ದುರಾಲೋಚನೆ. ವಿಶೇಷವೆಂದರೆ

ಕಸಗಿಸ್ಟಬಂದಂತೆ 90 ಜನರಿಗೆ ಮಂಜೂರು ಮಾಡಿದ್ದ ಅದಕ್ಕೆ ಗ್ರಾ.ಪಂ.ನಿಂದ ಲೈಸೆನ್ಸು ಕೊಡಿಸಿದ್ದ. 90 ಜನರು ಸಾಲಸೋಲ ಮಾಡಿ ಲಕ್ಷಾಂತರ ರೂ. ಖರ್ಚು ಮಾಡಿ ಮನೆ ಕಟ್ಟಿದ್ದರು. ಅಲ್ಲಿದ್ದವರೆಲ್ಲಾ ನಗರದಲ್ಲಿ ಹಾಸಿಪುರಿ ಮಾರಿ, ತರಕಾರಿ ಮಾರಿ, ಕೂಲಿ, ಗಾರೆಕೆಲಸ ಮಾಡಿ ಕಷ್ಟಪಟ್ಟು ಕಟ್ಟಿದ್ದ ಮನೆಗಳನ್ನು ಸರ್ಕಾರಿ ಜಾಗದಲ್ಲಿ ಕಟ್ಟಿದ್ದಾರೆ ಎಂದು ಕಾರಣಹೂಡಿ 19 ಜೆಸಿಬಿ ಹಾಗೂ ಪೊಲೀಸ್ ಸೈನ್ಯವನ್ನು ನುಗ್ಗಿಸಿ ಯಾವುದೇ ಮುನ್ಸೂಚನೆ ನೀಡದೆ, ಒಂದು ನೋಟೀಸ್ ನೀಡದೆ, ಕೊನೇ ಪಕ್ಷ ಮನೆ ಖಾಲಿ ಮಾಡಲು ಅವಕಾಶ ನೀಡದೆ ಬುಲ್ಡೋಜರ್ ನುಗ್ಗಿಸಿ 90 ಮನೆಗಳನ್ನು ಧ್ವಂಸ ಮಾಡಿದ ಕೀರ್ತಿ ರೇವಣ್ಣನದು. ಹೀಗೆ ನೂರಾರು ಉದಾಹರಣೆ ಸಿಗುತ್ತವೆ.

ಶಾಸಕರು ಮಂತ್ರಿಗಳ ಗುಲಾಮರು

ರೇವಣ್ಣನ ಆರ್ಭಟಕ್ಕೆ ಕೇವಲ ಬಡವರು, ವಿರೋಧಿಗಳು ಮಾತ್ರ ಬಲಿಯಾಗಿದ್ದಾರೆ ಎಂದರೆ ಅದು ತಪ್ಪು, ಈ ಪುಣ್ಯಾತ್ಮನ ಉಪಟಳಕ್ಕೆ ಸಿಲುಕಿ ನಲುಗಿದವರಲ್ಲಿ ಮಂತ್ರಿಗಳೂ, ಶಾಸಕರೂ, ಮಾಜಿ ರಾಜ್ಯಸಭಾ ಸದಸ್ಯರೂ ಸೇರಿದ್ದಾರೆ. ಹಾಸನ ಜಿಲ್ಲೆಯ ಶಾಸಕರನ್ನಂತೂ ತನ್ನ ಮನೆಯ ನಾಯಿಗಳಿಗಿಂತ ಕೀಳಾಗಿ ಕಾಣುವ ರೇವಣ್ಣ ಅದೇ ವರಸೆ ತೋರಿಸಲು ಹೊರಟು ಸಜ್ಜನ ರಾಜಕಾರಣಿ ಎ.ಟಿ.ಆರ್. ಅವರಿಂದ ಬಹಿರಂಗವಾಗಿಯೇ ಉಗಿಸಿಕೊಂಡಿದ್ದ.

ಉಳಿದ ಶಾಸಕರಿಗೆ ರೇವಣ್ಣನ ಮುಂದೆ ಬಾಯಿ



...ವ ಮುಂದಾಲೋಚನೆಯೂ ಇಲ್ಲದೆ, ಯಾರ ಅನು... ಪಡೆಯದೆ ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿದ್ದ ಹತ್ತಾರು ...ಡಗಳು ಧರೆಗುರುಳಿದವು. ನಂತರ ಅಲ್ಲೊಂದು ...ಜ್ಜಿತ ಕಟ್ಟಡ ತಲೆ ಎತ್ತಲಾರಂಭಿಸಿತು. ಕೇಂದ್ರದಿಂದ ...ದ ಭಾರತೀಯ ವೈದ್ಯಕೀಯ ಮಂಡಳಿ ಸದಸ್ಯರು ...ಕಲ್ ಕಾಲೇಜಿಗೆ ಬೇಕಾಗುವ 300 ಎಕರೆ ಕೊಟ್ಟರೆ ...ರ್ಮಿಷನ್ ಇಲ್ಲದಿದ್ದರೆ 40 ಕೋಟಿ ವೆಚ್ಚದಲ್ಲಿ ...ಡುತ್ತಿರುವ ಬಿಲ್ಡಿಂಗ್‌ಗೆ ಮೆಡಿಕಲ್ ಕಾಲೇಜ್ ...ರ್ಮಿಷನ್ ಇಲ್ಲ ಎಂದು ಬಿಟ್ಟಿತು. ಅದಕ್ಕೂ ತಲೆ ...ಕೊಳ್ಳದ ರೇವಣ್ಣನ ಸುಗ್ರೀವಾಜ್ಞೆಗೆ ಇತಿಹಾಸ ...ದ್ಧ ಜಾಗಗಳೆಲ್ಲ ನೋಡನೋಡುತ್ತಲೇ ಕಣ್ಮರೆ ...ಾದವು. ಮೆಡಿಕಲ್ ಕಾಲೇಜ್‌ಗೆ ಬೇಕಾಗುವ ಸ್ಥಳ ... ಕೋಟ್ಯಂತರ ರೂ.ಗಳಲ್ಲಿ ನಿರ್ಮಿಸಲಾಗಿದ್ದ ಕಾಲೇಜ್ ...ಗಳು, ನೂರಾರು ವರ್ಷದ ಇತಿಹಾಸವಿದ್ದ ಹೈಸ್ಕೂಲ್ ...್ಕ ಇತಿಹಾಸ ಪ್ರಸಿದ್ಧ ಪರಿಸರಕ್ಕೆ ಅಮೂಲ್ಯವಾಗಿದ್ದ ...ದ ಕೋರಿ ಜಾಗ ಎಲ್ಲವೂ ರೇವಣ್ಣನ ಸುಗ್ರೀ...ಜ್ಞೆಯಿಂದ ತಮ್ಮ ಅಸ್ತಿತ್ವ ಕಳೆದುಕೊಂಡವು! ಯಾವ ...ಸೂಚನೆಗಳೂ ಇಲ್ಲದೆ ಬುಲ್ಡೋಜರ್‌ಗಳ ನಾಯಕ ...ಣ್ಣ ಹೇಳಿದ್ದೇ ಕಡತಗಳಾದವು! ಪರಿಸರವಾದಿಗಳು ...ತ್ತ ಬುದ್ಧಿಜೀವಿಗಳು, ಗಂಧದ ಕೋರಿ ಉಳಿಸುತ್ತೇ...ಮ ಹೂಡಿದ ಹೋರಾಟ ರೇವಣ್ಣನಿಗೆ ಬಿಸಿ ತುಪ್ಪ...ಾದರೂ, ನಂತರ ಅವರನ್ನು ಬುಟ್ಟಿಗೆ ಹಾಕಿಕೊಂಡು ...ರಾಟ ನೆಲಕಚ್ಚಿತು. ತನ್ನ ಆಸೆಯಂತೆ ಎಲ್ಲವನ್ನು ...್ಲಿ ಮುಕ್ಕಿಸಿದ. ಹೋರಾಟಗಾರರೆಲ್ಲಾ ಇದೀಗ ...ಣ್ಣನ ಅಂಗೈನಲ್ಲಿರುವುದು ಮಾತ್ರ ಇವತ್ತಿನ ದುರಂತ. ...ಇದೇ ಮೆಡಿಕಲ್ ಕಾಲೇಜ್‌ಗಾಗಿ ಬಲಿಯಾಗುವ ...ರದಿಹ ಸರದಿ ಹಾಸನದ ನ್ಯಾಯಾಲಯ ಹಾಗೂ ...ಲರ ಸಂಘದ ಕಟ್ಟಡ, ಗ್ರಾಹಕರ ವೇದಿಕೆ ಕಟ್ಟಡ ... ಈ ಕಟ್ಟಡಗಳನ್ನೆಲ್ಲಾ ನೂತನವಾಗಿ ನಿರ್ಮಿಸಲು ...ಗಲೇ ಶಿಲಾನ್ಯಾಸಗಳು ನಡೆದಿವೆ ಎಂದರೆ ನಂಬ...ೇಕೆ! ಆದರೂ ನಂಬಲೇಬೇಕು ಏಕೆಂದರೆ ಇದು ...ನ್ನ ಹಾಸನ!

...ಹೀಗೆ ಇದ್ದದ್ದನ್ನು ಕೆಡವಿ ಅದನ್ನು ಸ್ಥಳಾಂತರಿಸಲಿ... ಸರ್ಕಾರದ ಸಾವಿರಾರು ಕೋಟಿ ವಿನಿಯೋಗ ...ತ್ತಿದೆ. ಹಾಗೇ ಹೊಸದಾಗಿ ನಿರ್ಮಾಣವಾಗು...ವ ಕಟ್ಟಡಗಳೆಂದರೆ, ಅರಣ್ಯ ಇಲಾಖೆ ಕಟ್ಟಡ, ... ಮಹಿಳಾ ಕಾಲೇಜುಗಳ ಕಟ್ಟಡ, ಒಂದು ...ಸ ಪದವಿ ಪೂರ್ವ ಕಾಲೇಜು ಕಟ್ಟಡ, ಜಿಲ್ಲಾ ...ಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ...ದ, ಕೋರ್ಟ್, ಪೋಲಿಸರುಗಳ ಭವನ, ಜಿಲ್ಲಾ ... ವೇದಿಕೆ ಕಟ್ಟಡ- ಹೀಗೆ ಆಗುತ್ತಿವೆ ಹಾಸನದ

ರಸ್ತೆಯಲ್ಲಿ ಸಸಿನೆಟ್ಟು, ಕೆಸರುಗದ್ದೆ ಕ್ರೀಡಾಕೂಟ ನಡೆಸಿ ಪ್ರತಿಭಟನೆಯನ್ನು ನಡೆಸಿದ್ದಾರೆ. ಆದರೂ ರೇವಣ್ಣನ ದಪ್ಪ ಚರ್ಮಕ್ಕೆ ಇದೆಲ್ಲಿ ಅರ್ಥವಾಗಬೇಕು!

ರೋಡಿಗೂ ವಾಸ್ತು ಅದಕ್ಕೂ 4 ಕೋಟಿ

ರೇವಣ್ಣನ ತಿಕ್ಕಲು, ಪುಕ್ಕಲು ಯೋಜನೆಗಳಿಗೆ ಸರ್ಕಾರದಿಂದ ಅದೆಷ್ಟು ಕೋಟಿಗಳು ಬಂದರೂ ಸಾಲದು. ಅದಕ್ಕೆ ಒಂದು ಉದಾಹರಣೆ ಎಂದರೆ ರೇವಣ್ಣ ಚನ್ನರಾಯಪಟ್ಟಣ ಹತ್ತಿರವಿರುವ ಶೆಟ್ಟಿಹಳ್ಳಿ ಸಮೀಪ ಒಂದು ಡೈರಿ ನಿರ್ಮಿಸುತ್ತಿದ್ದಾರೆ. ಆ ಡೈರಿ ಮುಂಭಾಗವೇ NH 48 ಬೆಂಗಳೂರು-ಮಂಗಳೂರು ಹೆದ್ದಾರಿ. ಈ ರಸ್ತೆ ಉಬ್ಬಾಗಿತ್ತು, ಡೈರಿ ಸ್ವಲ್ಪ ತಳಭಾಗದಲ್ಲಿತ್ತು, ರೇವಣ್ಣನಿಗೆ ಅದ್ಯಾವ ಜ್ಯೋತಿಷಿ ಯಾವ ಹೊತ್ತಿನಲ್ಲಿ ಮನೆಹಾಳ ಐಡಿಯಾ ಹೇಳಿ ಬಿಟ್ಟನೋ ಏನೋ. ರಸ್ತೆಯ ವಾಸ್ತು ದೋಷವಿದೆ. ಆದ್ದರಿಂದ ಈ ರಸ್ತೆ ಅಗೆದು ಇಡೀ ರಸ್ತೆಯನ್ನು ತಗ್ಗಿಸಲಾಯಿತು. ಅದಕ್ಕಾಗಿ 4 ಕೋಟಿ ಸರ್ಕಾರದ ಹಣ ಖಾಲಿಯಾಯಿತು.

ರೇವಣ್ಣನೂ ಆಂಧ್ರದ ರೆಡ್ಡಿಗಳೂ

ರೇವಣ್ಣ ಯಾವಾಗ ಮಂತ್ರಿ ಆಗುತ್ತಾರೋ ಆವಾಗಲೆಲ್ಲಾ ಆಂಧ್ರದ ರೆಡ್ಡಿಗಾರೂ ವಸ್ತುನ್ನಾರು. ರೇವಣ್ಣ ಅಧಿಕಾರಕ್ಕೆ ಬರುವವರೆಗೆ ಕಾರ್ಯಕರ್ತರೊಂದಿಗೆ ಇದ್ದು ಅಧಿಕಾರ ಸಿಕ್ಕ ನಂತರ ಆತನಿಂದ ಸಹಾಯ ಪಡೆಯುವ ಕಾರ್ಯಕರ್ತರು ಬೆರಳೆಣಿಕೆ ಜನ ಮಾತ್ರ. ಉಳಿದ ಪಾಲೆಲ್ಲಾ ಆಂಧ್ರದ ರೆಡ್ಡಿಗಳದ್ದು. ರೆಡ್ಡಿಗಳಿಗೆ ಬೇಡವಾದದ್ದು, ನಷ್ಟವಾಗುವ ಯೋಜನೆಗಳು ರೇವಣ್ಣನ ಕೆಲ ಶಿಷ್ಯರಿಗೆ ಭಕ್ಷೀಸು. ಅದಕ್ಕೆ ಉದಾಹರಣೆ ಎಂದರೆ ಹಾಸನದ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆ: ಅಂದಾಜು ವೆಚ್ಚ 56 ಕೋಟಿ (ನಾಗಾರ್ಜುನ ಕನ್ಸ್‌ಟ್ರಕ್ಷನ್), ಕೆಎಸ್‌ಆರ್‌ಟಿಸಿ ನೂತನ ಬಸ್ ನಿಲ್ದಾಣ, (21 ಕೋಟಿ ನಾಗಾರ್ಜುನ ಕನ್ಸ್‌ಟ್ರಕ್ಷನ್), ಪದವಿ ಪೂರ್ವ ಕಾಲೇಜು ಕಟ್ಟಡಗಳು (ನಾಗಾರ್ಜುನ ಕನ್ಸ್‌ಟ್ರಕ್ಷನ್) ರಿಂಗ್‌ರೋಡ್ (6.80 ಕೋಟಿ (ರೆಡ್ಡಿ ವೀರಣ್ಣ), ವೈದ್ಯಕೀಯ ಕಾಲೇಜು ಕಟ್ಟಡ (20 ಕೋಟಿ, ನಾಗಾರ್ಜುನ ಕನ್ಸ್‌ಟ್ರಕ್ಷನ್). ಇದು ಕೆಲವೇ ಕೆಲವು ಉದಾಹರಣೆ. ಉಳಿದವು ಇನ್ನೆಂತಹವು ಎಂಬುದನ್ನು ಕಲ್ಪಿಸಿದರೆ ಅರ್ಥವಾಗುತ್ತೆ.

ಭೂಸ್ವಾಧೀನವೂ ದಾಸಗೌಡರ ನಾಶವೂ

ಒಂದೇ ಕಲ್ಲಿನಲ್ಲಿ ಎರಡಕ್ಕಿ ಹೊಡೆಯುವುದನ್ನು ಕಲಿಯಬೇಕು ಎಂದರೆ ರೇವಣ್ಣನ ಹತ್ತಿರ ಕಲಿಯಬೇಕು. ಹಾಸನದ ಅಭಿವೃದ್ಧಿ ಮಾಡುತ್ತೇನೆಂದು ಹೊರಟ ರೇವಣ್ಣ ಅದಕ್ಕಾಗಿ ಹೂಡಿರುವ ಪ್ಲಾನೇ ರೋಮಾಂಚಕ. "ಅಭಿವೃದ್ಧಿಯಿಂದ ಸಾವಿರಾರು ಜನರಿಗೆ ಕೆಲಸ ಸಿಗುತ್ತೆ

ರೇವಣ್ಣನ ಇಷ್ಟೆಲ್ಲಾ ಯೋಜನೆಗಳಿಗೆ ಬಲಿಯಾಗುತ್ತಿರುವುದು ಮಾತ್ರ ಹಾಸನ ಕ್ಷೇತ್ರದ ಪ್ರಬಲ ಪಂಗಡ ದಾಸ ಒಕ್ಕಲಿಗರು.

ಕ್ಷೇತ್ರ ವಿಂಗಡನೆಯಲ್ಲಿ ಕೈ ತೂರಿದ ಅಪ್ಪ ಮಕ್ಕಳು

ಕ್ಷೇತ್ರ ವಿಂಗಡಣೆಯಲ್ಲಿ ಕೈಯಾಡಿಸಿದ ಅಪ್ಪ ಮಕ್ಕಳು ತಮಗಾಗದವರು, ಕುರುಬರು, ದಾಸಗೌಡರು ಎಲ್ಲೆಲ್ಲಿದ್ದರೋ ಆ ಜಾಗಗಳನ್ನು ತಮ್ಮ ಕ್ಷೇತ್ರದಿಂದ ಬೇರ್ಪಡಿಸಿ ಮತ್ತಾವುದೋ ಕ್ಷೇತ್ರಕ್ಕೆ ಸೇರಿಸಿ ತಮ್ಮ ಕ್ಷೇತ್ರ ಭದ್ರಪಡಿಸಿದ್ದಾರೆ. ಅದಕ್ಕೆ ಉದಾಹರಣೆಯೆಂದರೆ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿ ಮೈಸೂರು ಹೋಬಳಿಯನ್ನು ಅರಕಲಗೂಡಿಗೆ ಅಂಟಿಸಿ ಕೈತೊಳೆದುಕೊಂಡಿರುವ ಅಪ್ಪ ಮಕ್ಕಳು, ಹಾಸನದ ಕಟ್ಟಾಯ ಹೋಬಳಿಯನ್ನು ಸಕಲೇಶಪುರಕ್ಕೆ ತಾಕಿಸಿಕೊಂಡಿದ್ದಾರೆ. ವಿಶೇಷವೆಂದರೆ ಹಳ್ಳಿಮೈಸೂರು ಹೋಬಳಿಯಲ್ಲಿ ಕುರುಬರೇ ಹೆಚ್ಚಿದ್ದರೆ ಕಟ್ಟಾಯಿ ಹೋಬಳಿಯಲ್ಲಿ ದಾಸಗೌಡರೇ ಪ್ರಬಲವಾಗಿದ್ದಾರೆ.

ರಿವೇಂಜ್ ರಾಜಕಾರಣ

ಯಾರನ್ನು ತನ್ನೊಂದಿಗೆ ಇಟ್ಟುಕೊಂಡು ಅವನನ್ನು ಹೇಗೆ ತುಳಿಯಬೇಕು ಎಂಬುದರಿಂದ ಹಿಡಿದು ಯಾರ್‍ಯಾರು ತನ್ನ ವಿರುದ್ಧವಿದ್ದರೆ ಅವರನ್ನು ಬಗ್ಗು ಬಡಿಯುವುದಕ್ಕೆಲ್ಲಾ ಕರಾರುವಾಕ್ಕಾಗಿ ಸ್ಕೆಚ್ ಹಾಕುವ ಸಚಿವ ರೇವಣ್ಣ ಭೂಸ್ವಾಧೀನ, ಅಭಿವೃದ್ಧಿ ಹೆಸರಿನಲ್ಲಿ ಹಾಸನದಲ್ಲಿ ಮಾಡಿರುವ ದಾಂಧಲೆ ಒಂದೆರಡಲ್ಲ, ಅದಕ್ಕೆ ತಾಜಾ ಉದಾಹರಣೆ ಎಂದರೆ ಕೆ.ಟಿ. ಗಿರೀಶ್ ದಾಸಪ್ಪ ಎಂಬುವವರ ಭೂಮಿ ಈ ಹಿಂದೆ ಚನ್ನಪಟ್ಟಣದ ಸಮೀಪ ಹೌಸಿಂಗ್ ಬೋರ್ಡ್‌ಗೆ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಅದನ್ನು ಪ್ರಶ್ನಿಸಿ 10 ವರ್ಷಗಳ ಹಿಂದೆ ಕೆ.ಟಿ. ಗಿರೀಶ ಹೈಕೋರ್ಟ್ ಮೆಟ್ಟಿಲೇರಿದ್ದರು. ಇತ್ತೀಚೆಗೆ ಅವರ ತಂದೆ ನಿಧನರಾದರು. ದುರ್ದೈವ ಎಂಬಂತೆ ಅವರು ದುಃಖತಪ್ತರಾಗಿದ್ದ ಸಂದರ್ಭದಲ್ಲೇ ಅವರ 5 ಎಕರೆ ಭೂಮಿಯಲ್ಲಿ ಬೆಳೆದಿದ್ದ 500 ತೆಂಗಿನ ಮರಗಳನ್ನು 11 ಜೆ.ಸಿ.ಬಿ.ಯ ಮುಖಾಂತರ ಉರುಳಿಸಿ ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘಿಸಿದರು.

ರುದ್ರೇಗೌಡ ಎಂಬಾತ ಸರ್ಕಾರಿ ಜಾಗವನ್ನು

ಮಾಡಲಾಗದೆ ತಮ್ಮ ದುಃಖವನ್ನು ದೇವೇಗೌಡರಲ್ಲಿ ತೋಡಿಕೊಳ್ಳುತ್ತಾರೆ. ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವ ಎಚ್.ಕೆ. ಕುಮಾರಸ್ವಾಮಿ ಪಾಡು ಹೇಳತೀರದು. ಮೊದಲೇ ದಲಿತರಾಗಿರುವ ಕುಮಾರಸ್ವಾಮಿ ಬೇಲೂರಿಗೆ ಮುಖ್ಯಮಂತ್ರಿ ಕರೆದುಕೊಂಡು ಹೋಗುವ ಅಭಿಲಾಷೆಗೆ ರೇವಣ್ಣ ಸದಾ ಅಡ್ಡಗಾಲು. ಮುಖ್ಯಮಂತ್ರಿಯಾದ ನಂತರ 18 ತಿಂಗಳಲ್ಲಿ 32 ಬಾರಿ ಜಿಲ್ಲೆಗೆ ಬಂದಿರುವ ಕುಮಾರಸ್ವಾಮಿ ಬೇಲೂರಿಗೆ ಮೂರು ಬಾರಿ ಬರುತ್ತೇವೆಂದು ಹೇಳಿ ತಾಂತ್ರಿಕ ಕಾರಣ ನೀಡಿ ಕೈ ಎತ್ತಿದ್ದಾರೆ. ಇದಕ್ಕೆ ರೇವಣ್ಣನೇ ಕಾರಣ!

ಬೇಲೂರಿನಲ್ಲಿ ರೇವಣ್ಣನ ಬಂಟರಿಗಿರುವ ಮರ್ಯಾದೆ ಈ ದಲಿತ ಸಚಿವರಿಗಿಲ್ಲ. ಇಲ್ಲಿ ಮಾಜಿ ರಾಜ್ಯಸಭಾ ಸದಸ್ಯ ಎಚ್.ಕೆ. ಜವರೇಗೌಡನ ಜಬರ್ದಸ್ತೇ ನಡೆಯುತ್ತೆ. ಆದರೆ ಈ ಜವರೇಗೌಡನೂ ಕೂಡ ರೇವಣ್ಣನಿಂದ ಉಗಿಸಿಕೊಂಡು ಕೋಪಕ್ಕೆ ಒಳಗಾಗುತ್ತಿರುವವನೇ. ಒಮ್ಮೆ ಡಿ ದರ್ಜೆ ನೌಕರನ ಮಗನಿಗೆ ಕೆಲಸ ಕೇಳಲು ತನ್ನ ಪತ್ರ ನೀಡಿ ರೇವಣ್ಣನಿಗೆ ಶಿಫಾರಸ್ಸು ಮಾಡಿದ. ಅಮಾಯಕ ಜವರೇಗೌಡ ನೀಡಿದ ಪತ್ರ ಪಡೆದು ರೇವಣ್ಣನ ಬಳಿಗೆ ಬಂದರೆ ಪತ್ರ ನೋಡಿದ್ದೆ ಕೆಂಡಮಂಡಲವಾಗಿ ನೂರಾರು ಜನರ ಮುಂದೆ ಆ ಪತ್ರ ಹರಿದು ಹಾಕಿ "ಆ ಜವರ ಬೂ-ಸೂ... ನನಗೆ ಪತ್ರ ಬರಿತಾನಾ" ಎಂದು ಹಾರಾಡಿ ಅಮಾಯಕರನ್ನು ಹೊರದಬ್ಬಿ ಬಿಟ್ಟ. ಇಷ್ಟಾದ್ರೂ ತಸ, ಆ ಅಮಾಯಕ ಎಲ್ಲರಿಗೂ ಹೇಳಿಕೊಂಡು ಕಣ್ಣೀರಿಡುತ್ತಾನೆ. ಆದರೆ ಜವರೇಗೌಡ ಯಾರಲ್ಲಿಯೂ ಹೇಳಿಕೊಳ್ಳದೆ "ಮುಂದಿನ ಚುನಾವಣೆಯಲ್ಲಿ ಇದೆ ಮಾರಿಹಬ್ಬ" ಎನ್ನುತ್ತಲೇ ರೇವಣ್ಣ ಟೈಮಾಗಲೀ ಟೈಮಿಕೊಂಡು ಹುಸಿನಗೆ ಬೀರುತ್ತಿದ್ದಾನೆ.

-ವರದಿಗಾರ

ಶ್ರೀರಾಮ ಸೇನೆ V/s ಭಜರಂಗದಳ

ಹೆಣ್ಣುಬಾಕ ಚೆಡ್ಡಿಗಳು

"ಭಜರಂಗಿ ನಾಯಕ ರಾಜು ಕುಲಾಲನ ಕಚ್ಚೆ ಹರುಕತನಗಳನ್ನು ಬಯಲು ಮಾಡಿದ್ದು ನಾವೇ" ಎಂದು ಶ್ರೀರಾಮ ಸೇನೆಯವರು ಅಂದು ಮಂಗಳೂರಿನಲ್ಲಿ ವಿಜಯೋತ್ಸವವನ್ನು ಆಚರಿಸಿದ್ದರೆ. ಇಂದು ಉಡುಪಿಯಲ್ಲಿನ ಭಜರಂಗಿಗಳು ಸಂಭ್ರಮಿಸುತ್ತದ್ದಾರೆ. ಅದಕ್ಕೆ ಕಾರಣ ಶ್ರೀರಾಮ ಸೇನೆಯ ಪುಢಾರಿ ನಾಯಕ ಉಮೇಶ್ ಶೆಟ್ಟಿ ಎಂಬಾತ ಹೈಸ್ಕೂಲ್ ಬಾಲಕಿಯೊಬ್ಬಳನ್ನು ಅಪಹರಿಸಿ ಅವಳನ್ನು ಕೆಡಿಸಿದ್ದು ಈಗ ಬಯಲಾಗಿ ಆತನ ಮಾನ ಹರಾಜಾಗಿದೆ. ಇದನ್ನು ಕಂಡು ಸಹಜವಾಗಿಯೇ ಭಜರಂಗಿಗಳು ಕೇಕೆ ಹಾಕಿ ಕುಣಿಯುತ್ತಿದ್ದಾರೆ. ಒಟ್ಟಾರೆ ಹಿಂದೂ ಸಮಾಜ ಸೇವಕರಾದ ತಾವು ಸ್ತ್ರೀಯರಿಗೆ ರಕ್ಷಣೆ ನೀಡುತ್ತೇವೆಂದು ಹೇಳುತ್ತಲೇ ಈ ಎರಡೂ ಸಂಘಟನೆಗಳ ನಾಯಕರ ಹೆಣ್ಣುಬಾಕುತನ ಬಟಾಬಯಲಾಗುತ್ತಿದೆ. ಇದು ಹೀಗೇ ಮುಂದುವರೆದರೆ, ತಮ್ಮ ರಕ್ಷಣೆಗಾಗಿ ಸ್ತ್ರೀಯರೇ ಈ ಹಿಂದೂ ರೇಪಿಸ್ಟ್‌ಗಳ ವಿರುದ್ಧ ಬೀದಿಗೆ ಇಳಿಯುವ ದಿನ ದೂರವಿಲ್ಲ ಎನಿಸುತ್ತಿದೆ.

ಈ ಹಿಂದೆ ಶಿರೂರು ಸ್ವಾಮಿಗಳ ರೌಡಿ ಬಂಟ ಬಾಳೆಕಾಯಿ ಸುಧಾಕರನ ಬಸ್‌ನಲ್ಲಿ ಡ್ರೈವರ್ ಆಗಿದ್ದ ಈ ಉಮೇಶ್ ಶೆಟ್ಟಿ. ಆಗ ಸುಧಾಕರನಿಗೆ ತಕ್ಕ ಸಾಥಿಯೂ ಆಗಿದ್ದ. ಆರಂಭದಲ್ಲಿ ಹಿಂದೂ ಯುವ ಸೇನೆಯ ಕಾರ್ಯಕರ್ತನಾಗಿ, ಆನಂತರ ಭಜರಂಗದಳದವನಾಗಿ, ಕೊನೆಗೆ ಪ್ರಮೋದ್ ಮುತಾಲಿಕನ ಶ್ರೀರಾಮ ಸೇನೆಯನ್ನು ಸೇರಿ ಉಡುಪಿ ಘಟಕದಲ್ಲಿ ಮಿಂಚಲಾರಂಭಿಸಿದ್ದ.

ಈ ಉಮೇಶ್ ಶೆಟ್ಟಿ ಹುಡುಗಿಯರನ್ನು ಪಟಾಯಿಸುವುದರಲ್ಲಿ ಪಳಗಿದ ಕೈ. ಇತ್ತೀಚೆಗೆ ಸ್ವಂತದ ಕಾರನ್ನು ಖರೀದಿಸಿ ಕಲ್ಪನಾ ಸ್ಟ್ಯಾಂಡ್ ಬಳಿ ಬಾಡಿಗೆಗೆ ನಿಲ್ಲುತ್ತಿದ್ದ. ಆದರೆ ಕಾರ್ ಓಡಿಸುವ ಬದಲಾಗಿ ಅಲ್ಲೇ ಪಕ್ಕದಲ್ಲಿದ್ದ ಗಾರ್ಮೆಂಟ್ಸ್ ಕಾರ್ಖಾನೆಗೆ ಕೆಲಸಕ್ಕೆಂದು ಬರುತ್ತಿದ್ದ ತರುಣಿಯರನ್ನು ಬುಟ್ಟಿಗೆ ಹಾಕಿಕೊಳ್ಳುವುದರಲ್ಲೇ ಹೆಚ್ಚು ಕಾಲ ತಳ್ಳುತ್ತಿದ್ದ. ಇಂತಹ ಶೆಟ್ಟಿನ ಗಾಳಕ್ಕೆ ಬಿದ್ದು ಮಾನಾಪಹರಣಕ್ಕೆ ಒಳಗಾದ ಲೇಟೆಸ್ಟ್ ಹುಡುಗಿಯೇ ಉಡುಪಿ ಬಾಲಕಿಯರ ಹೈಸ್ಕೂಲ್‌ನ 9 ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಉಷಾ. ಪ್ರಾಯ ಇನ್ನೂ 17 ವರ್ಷ. ತಂದೆ ಕೃಷ್ಣಪುರ ಮಠದಲ್ಲಿ ಅಡುಗೆ ಭಟ್ಟ.

ಈ ಹುಡುಗಿಯ ಬೇಟೆಗಿಳಿದ ಉಮೇಶ್ ಶೆಟ್ಟಿ ಒಂದು ದಿನ ಮೊಬೈಲ್ ಫೋನ್ ಅನ್ನು ಗಿಫ್ಟ್ ಆಗಿ ನೀಡಿದ್ದಾನೆ. ಹುಡುಗಿ ಕ್ಲೀನ್ ಬೌಲ್ಡ್ ಆಗಿದ್ದಾಳೆ. ಕಳೆದ ಆರು ತಿಂಗಳಿನಿಂದ ಅವನೊಂದಿಗೆ ಕಾರಿನಲ್ಲಿ ಸುತ್ತಾಡುವುದೇ ಅವಳ ದಿನಚರಿಯಾಗಿಹೋಗಿದೆ. ಹೀಗೇ ಅವರ ನಡುವೆ ಸಲುಗೆ ಬೆಳೆದಿದೆ. ಆಕೆಯನ್ನು ಮದುವೆ ಯಾಗುವುದಾಗಿಯೂ ಆತ ನಂಬಿಸಿದ್ದಾನೆ.

ಅಂದು 10 ನೇ ತಾರೀಖು ಶುಕ್ರವಾಗ. ಅಂದೂ ಕೂಡ ಎಂದಿನಂತೆ ಆಕೆಯನ್ನು ದಿನವಿಡೀ ಕಾರಲ್ಲಿ ತಿರುಗಿಸಿದ ಉಮೇಶ್ ಶೆಟ್ಟಿಗೆ ಸಂಜೆಯಾಗುತ್ತಿದ್ದಂತೆ ಆಕೆಯನ್ನು ಮನೆಗೆ ಕಳುಹಿಸಿ ಕೊಡುವ ಮನಸ್ಸಾಗಲಿಲ್ಲ, ಅಂದೇ ಆಕೆಯೊಂದಿಗೆ ಎಲ್ಲವನ್ನು ಮಾಡಿ ಮುಗಿಸುವ ಆತುರಕ್ಕೆ ಬಿದ್ದ ಕಾಮುಕ ಉಮೇಶ್ ಶೆಟ್ಟಿ ತನ್ನ ಚಪಲವನ್ನು ತೋಡಿಕೊಂಡಿದ್ದು ಇನ್ನೋರ್ವ ಶ್ರೀರಾಮ ಸೇನಾ ಕಾರ್ಯಕರ್ತ ಕಂ ಸ್ನೇಹಿತ ಬಾಲು ಯಾನೆ ಬಾಲೇಜನ ಮುಂದೆ. ಹತ್ತು ವರ್ಷಗಳ ಹಿಂದೆ ಉಡುಪಿಯ ಮಂಗಳ ಜ್ಯುವೆಲ್ಲರಿ ಅಂಗಡಿಗೆ ಬಂದಿದ್ದ ಕೊಯಮತ್ತೂರಿನ ಚಿನ್ನದ ವ್ಯಾಪಾರಿಯನ್ನೇ ದರೋಡೆ ಮಾಡಿದ್ದ ಈ ಕುಖ್ಯಾತ ಬಾಲು. ಆ ಕ್ರಿಮಿನಲ್ ಕೃತ್ಯದಿಂದಾಗಿ ಶಿಕ್ಷೆಗೊಳಗಾಗಿದ್ದ ಬಾಲು ಸಾಮಾನ್ಯನಲ್ಲ.

ಮಂಗಳೂರಿನ ಕೀರ್ತಿ ಬಾರ್ನ್ ನಲ್ಲಿ ರೂಮೊಂದನ್ನು ಹೊಂದಿರುವ ಬಾಲೇಜ, ತನ್ನ ಮಿತ್ರ ಉಮೇಶ್ ಶೆಟ್ಟಿ ಮತ್ತು ಉಷಾಳನ್ನು ತನ್ನ ಇಂಡಿಕಾ ಕಾರಿನಲ್ಲಿ ಮಂಗಳೂರಿಗೆ ಕರೆತಂದಿದ್ದಾನೆ. ಅವರಿಬ್ಬರನ್ನು ತನ್ನ ರೂಮಿನಲ್ಲಿ ಬಿಟ್ಟು "ಹನಿಮೂನ್ ಆಚರಿಸಿ" ಎಂದು ಹೇಳಿ ತಾನು ಹೊರಗೆ ಕಾರಲ್ಲೇ ಮಲಗಿದ್ದಾನೆ.

ಉಮೇಶ್ ಶೆಟ್ಟಿ ತನ್ನ ಆಸೆಯನ್ನು ತೀರಿಸಿಕೊಂಡು ಮರುದಿನ ಉಡುಪಿಗೆ ಹಿಂದಿರುಗಿದರೆ, ಇವನನ್ನೇ ನಂಬಿ ಕಾಲು ಜಾರಿದ್ದ ಹುಡುಗಿ ಉಷಾ ಮನೆಗೆ ವಾಪಸ್ಸು ಹೋಗಲು ನಿರಾಕರಿಸಿದ್ದಾಳೆ. ಆಗ ಉಮೇಶ್ ಶೆಟ್ಟಿಗೆ ಸಂಕಷ್ಟವಾಗಿದೆ. ಏನು ಮಾಡುವುದೆಂದು ತೋಚದೆ ಶ್ರೀರಾಮ ಸೇನೆಯ ರಾಜ್ಯ ಸಹ ಸಂಚಾಲಕ ಜಿತೇಶ್ ನೆರವನ್ನು ಕೇಳಿದ್ದಾನೆ. ಉಮೇಶನ ಪರಿಸ್ಥಿಯನ್ನು 'ಅರ್ಥ' ಮಾಡಿ ಕೊಂಡ ಜಿತೇಶ್ ತನ್ನ ಹೆಂಡತಿ ರೇಖಾಳ ಸಹಾಯದಿಂದ ಆ ಹುಡುಗಿಯನ್ನು ತನ್ನ ಮನೆಯಲ್ಲೇ ಇಟ್ಟುಕೊಂಡಿದ್ದಾನೆ.

ಮೂಲತಃ ಮಂಜೇಶ್ವರದವನಾದ ಜಿತೇಶ್ ಕಾರ್ಕಳದಲ್ಲಿ ಸೆಕೆಂಡ್ಸ್ ವ್ಯವಹಾರ ಮಾಡಿಕೊಂಡಿದ್ದವನು. ನಾಲ್ಕು ವರ್ಷಗಳ ಹಿಂದೆ ಉಡುಪಿಯಲ್ಲಿ ನಡೆದ ಹಿಂದೂ ಸಮಾಜೋತ್ಸವಕ್ಕೆ ಬಂದ ಈತ ಇಲ್ಲೇ ತಳವೂರಿದ್ದ, ಅಷ್ಟೇ ಅಲ್ಲದೆ, ಗೋಸಾಗಾಟಗಾರರ ಮೇಲೆ ಹಲ್ಲೆ, ನಾಗಾರ್ಜುನ ಹೋರಾಟದಲ್ಲಿ ಪೊಲೀಸ್ ಚೌಕಿ ಧ್ವಂಸ, ಇಂತಹದ್ದೇ ಕೃತ್ಯಗಳಲ್ಲಿ ಭಾಗಿಯಾಗಿದ್ದನಲ್ಲದೆ, ತನ್ನ ಮಂಗಗಳ ಪಡೆಯನ್ನೂ ಈ ಕೃತ್ಯಗಳಲ್ಲಿ ಪಾಲ್ಗೊಳ್ಳುವಂತೆ ಪ್ರಚೋದಿಸುತ್ತಿದ್ದ. ಈತನ ವಿರುದ್ಧ ಹಲವು ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಇತ್ತ ಉಡುಪಿಯ ಪೊಲೀಸರಿಗೂ, ಅತ್ತ ಬಿಜೆಪಿಯ ಶಾಸಕ ರಘುಪತಿ ಭಟ್ಟರಿಗೂ ಕಿರಿಕಿರಿಯಾಗಿದ್ದಾನೆ ಈ ಜಿತೇಶ್.

ಇಷ್ಟೊತ್ತಿಗೆ ಸ್ಕೂಲಿಗೆ ಹೋದ ಮಗಳು ಮನೆಗೆ ಬಾರದಿದ್ದರಿಂದ ಆತಂಕಗೊಂಡು ಆಕೆಯ ಪಾಲಕರು ಪೊಲೀಸ್ ಕಂಪ್ಲೇಂಟು ನೀಡಿದ್ದರು. ಒಂದೆಡೆ ಮಠದ ಸ್ವಾಮೀಜಿಯಿಂದ ಒತ್ತಡ, ಇನ್ನೊಂದೆಡೆ ಹುಡುಗಿಯ ದೂರದ ಸಂಬಂಧಿಯೂ ಆಗಿರುವ ಶಾಸಕ ರಘುಪತಿ ಭಟ್ಟರಿಂದ ಒತ್ತಡ, ಇವೆರಡರಿಂದಾಗಿ ಸ್ಥಳಿಯ ಪೊಲೀಸರು ಚುರುಕಾದರು.

ಇದರ ಬಗ್ಗೆ ಗೊತ್ತಾಗುತ್ತಿದ್ದಂತೆ ಜಿತೇಶ್ ಗಲಿಬಿಲಿಗೊಂಡ. ಉಷಾಳನ್ನು ಕರಕೊಂಡು ಬಂದು ಪೇಟೆಯಲ್ಲಿ ಬಿಟ್ಟು ಹೊರಟೇ ಹೋದ. ಕಣ್ಣೀರಿಡುತ್ತಾ ಮನೆ ಸೇರಿದ ಉಷಾ ಹೆತ್ತವರ ಮುಂದೆ ನಡೆದದ್ದನ್ನೆಲ್ಲಾ ಹೇಳಿದಳು. ಉಮೇಶ್ ಶೆಟ್ಟಿ, ಬಾಲು, ಜಿತೇಶ್.... ಇವರುಗಳ ಹೆಸರುಗಳು ಕೇಳಿದ್ದೇ ತಡ ಭಜರಂಗದಳದ ಲೀಡರ್ ಮಧುಕರ ಮುದ್ರಾಡಿ ಮತ್ತು ರಘುಪತಿ ಭಟ್ಟರಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯಿತು.

ನಗರ ಪೊಲೀಸ್ ಠಾಣೆಯ ವೃತ್ತನಿರೀಕ್ಷಕ ವಿಶ್ವನಾಥ ಪಂಡಿತರಿಗೂ, ಶಾಸಕ ರಘುಪತಿ ಭಟ್ಟರನ್ನು ಓಲೈಸಲು ಇದೊಂದು ಸುವರ್ಣಾವಕಾಶವಾಯಿತು. ಒಟ್ಟಾರೆ ಭಜರಂಗದಳವರಿಗೆ ಮಂಗಳೂರಿನ ಕುಲಾಲ ಪ್ರಕರಣಕ್ಕೆ ಸೇಡು ತೀರಿಸಿಕೊಂಡಂತಾಗಿದೆ. ಜಿತೇಶ್, ಆತನ ಪತ್ನಿ ರೇಖಾ, ಉಮೇಶ್ ಶೆಟ್ಟಿ, ಬಾಲು ಎಲ್ಲರನ್ನೂ ಬಂಧಿಸಿದ ಪೊಲೀಸರು ಅಪಹರಣ, ರೇಪ್ ಮತ್ತು ಸಹಕಾರ ಎಲ್ಲಾ ಸೇರಿಸಿ ಭರ್ತಿ ಕೇಸು ಜಡಿದು ಬಿಟ್ಟದ್ದಾರೆ.

ಇದೆಲ್ಲ ಇನ್ನು ಯಾವ ಯಾವ ಆಯಾಮ ಪಡುತ್ತೋ? ಅಂತೂ ಚೆಡ್ಡಿಗಳೇ ಈಗ ಪರಸ್ಪರ ಗುದ್ದಾಡುತ್ತಿರುವುದು ಒಂದು ರೀತಿಯಲ್ಲಿ ಮಜವಾಗಿದೆ. ಆದರೆ ಅಮಾಯಕ ಹೆಣ್ಣುಮಕ್ಕಳನ್ನು ಈ ನೀಚರಿಂದ ರಕ್ಷಿಸುವವರ್ಯಾರು? ■



ಮುಲ್ಕಿ ರಫೀಕ್ ಹತ್ಯೆ ಸೇಡು ಗುಲಾಂಗೆ ಸ್ಕೆಚ್

ಇದು ಮುಲ್ಕಿ ರಫೀಕ್ ಎನ್‌ಕೌಂಟರ್‌ನ ಪ್ರತೀಕಾರದ ಸೂಚನೆ! ಇದೇ ಆಗಸ್ಟ್ 9 ನೇ ತಾರೀಖು ಮಧ್ಯಾಹ್ನ ಬೋಳಾರದ ಶಾದಿ ಮಹಲ್‌ನಲ್ಲಿ ಮದುವೆ ಊಟ ಮುಗಿಸಿ ಬಸ್ಸು ಹಿಡಿಯಲು ನಡೆದುಕೊಂಡು ಹೋಗುತ್ತಿದ್ದ ಮುಲ್ಕಿ ರಫೀಕನ ಬಗ್ಗೆ ಪೊಲೀಸರಿಗೆ ಮಾಹಿತಿದಾರನಾಗಿದ್ದ ಗುಲಾಂ ಎಂಬಾತನ ಮೇಲೆ ಏಕಾಏಕಿ ಎರಡು ಬೈಕುಗಳಲ್ಲಿ ಬಂದ ನಾಲ್ವರ ತಂಡ ಹಲ್ಲೆ ನಡೆಸಿ ಪರಾರಿಯಾಗಿದೆ.

ಇದು ಮುಲ್ಕಿ ರಫೀಕ್ ಎನ್‌ಕೌಂಟರ್‌ನ ಪ್ರತೀಕಾರದ ಸೂಚನೆ!

ಇದೇ ಆಗಸ್ಟ್ 9 ನೇ ತಾರೀಖು ಮಧ್ಯಾಹ್ನ ಬೋಳಾರದ ಶಾದಿ ಮಹಲ್‌ನಲ್ಲಿ ಮದುವೆ ಊಟ ಮುಗಿಸಿ ಬಸ್ಸು ಹಿಡಿಯಲು ನಡೆದುಕೊಂಡು ಹೋಗುತ್ತಿದ್ದ ಗುಲಾಂ ಎಂಬಾತನ ಮೇಲೆ ಏಕಾಏಕಿ ಎರಡು ಬೈಕುಗಳಲ್ಲಿ ಬಂದ ನಾಲ್ವರ ತಂಡ ಹಲ್ಲೆ ನಡೆಸಿ ಪರಾರಿಯಾಗಿದೆ. ಮಾರಣಾಂತಿಕವಾದ ಹಲ್ಲೆಗೊಳಗಾದ ಗುಲಾಂ ಅಹಮದ್ ಮೂಲತಃ ಹಳೆಯಂಗಡಿಯ ಪಾವಂಜೆ ಗ್ರಾಮದವನು. ಈತ ಇನ್ನೂ ಆಸ್ಪತ್ರೆಯಲ್ಲಿ ಸುಧಾರಿಸಿಕೊಳ್ಳುತ್ತಿರುವಾಗಲೇ ಮುಲ್ಕಿ ರಫೀಕನ ಹೆಂಡತಿ ಜೋಹರಾ "ಮುಲ್ಕಿ ರಫೀಕ್‌ನ ಎನ್‌ಕೌಂಟರ್‌ಗೆ ಸೇಡಿನ ಕ್ರಮವಾಗಿ ಈ ಕೃತ್ಯ ಎಸಗಿದ್ದಾರೆ" ಎಂದು ಪತ್ರಿಕಾ ಹೇಳಿಕೆ ಕೊಟ್ಟಳಲ್ಲದೇ "ಗುಲಾಂ ನನ್ನ ಗಂಡ ರಫೀಕನ ಹತ್ತಿರದ ಸಂಬಂಧಿ. ಆತ ಪೊಲೀಸರಿಗೆ ರಫೀಕ್‌ನ ಬಗ್ಗೆ ಮಾಹಿತಿ ಕೊಡಲು ಸಾಧ್ಯವೇ ಇಲ್ಲ" ಎಂದೂ ಸಮರ್ಥಿಸಿಕೊಂಡಿದ್ದಾಳೆ.

ರಫೀಕ್‌ನ ಎನ್‌ಕೌಂಟರ್ ನಂತರ ಪೊಲೀಸರ ಬಗ್ಗೆ ಮೆತ್ತಗಾಗಿರುವ ಪತ್ನಿ ಜೊಹರಾಳ ವರ್ತನೆ ಮತ್ತು ಗುಲಾಂನ ಹಿನ್ನೆಲೆ ನೋಡಿದರೆ ಹಲವಾರು ಗುಮಾನಿಗಳು ಪ್ರಾರಂಭವಾಗುತ್ತವೆ. ಯಾಕೆಂದರೆ ರಫೀಕನ ಎನ್‌ಕೌಂಟರ್‌ನ ರೂವಾರಿ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನನಿಗೆ ಆವತ್ತಿನಿಂದ ಇವತ್ತಿನ ತನಕ ಈ ಗುಲಾಂ 'ಶಬರಿ'ಯಂತೆ ಸಹಕರಿಸುತ್ತಾ ಬಂದಿದ್ದಾನೆ. ಕಾರು ಕಳ್ಳತನ, ನಕಲಿ ಆರ್.ಸಿ. ಸೃಷ್ಟಿಸುವುದು, ಇತ್ಯಾದಿ ದೋ ದಂಧೆಗಳಲ್ಲಿ ನಿರತನಾಗಿರುವ ಗುಲಾಂ ಆಗಾಗ ಪೊಲೀಸರಿಗೆ ಬೇಕಾಗುತ್ತಿದ್ದ.

ಈತ ಮುಲ್ಕಿ ರಫೀಕನ ಹತ್ತಿರ ಸಂಬಂಧಿಯೂ ಹೌದು. ಹಿಂದೊಮ್ಮೆ ಸೊರಲ್ಪಾಡಿ ಫೈನಾನ್ಸ್‌ನಿಂದ ವಾಹನ ಸಾಲ ಪಡೆದಿದ್ದ ಈತ ಅದನ್ನು ಕಟ್ಟದೇ ಮುಲ್ಕಿ ರಫೀಕ್‌ನಿಂದ ಧಮಕಿ ಹಾಕಿಸಿ ಸಾಲ ಕೊಟ್ಟಿದ್ದ ಸಂಸ್ಥೆಗೆ ಪಂಗನಾಮ ಹಾಕಿದ್ದ. ಅನಂತು ಮರ್ಡರ್ ನಂತರ ಮುಲ್ಕಿ ರಫೀಕ್ ಭೂಗತನಾದಾಗ, ಮುಲ್ಕಿಯಲ್ಲಿದ್ದ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನರಿಗೆ ಮಾಹಿತಿದಾರನಾಗಿ ಆಪ್ತನಾದ. ಆ ಮೂಲಕ ತನ್ನ ದೋ ದಂಧೆಗಳಿಗೆ ಪೊಲೀಸ್ ರಕ್ಷಣೆಯನ್ನೂ ಪಡೆಯುತ್ತಿದ್ದ. ಒಂದು ಸಲವಂತೂ ಕ್ವಾಲೀಸ್ ವಾಹನವೊಂದಕ್ಕೆ ಎರಡೆರಡು ನಕಲಿ ಆರ್.ಸಿ. ಸೃಷ್ಟಿಸಿ, ಇದೇ ವೆಂಕಟೇಶ್ ಪ್ರಸನ್ನನ ಕೈಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದ. ಆಗ ಬಚಾವಾಗಲು, ಆಗ ತಾನೇ ವಾಂಟೆಡ್ ಆಗಿದ್ದ ಮುಲ್ಕಿ ರಫೀಕನ ಬಗ್ಗೆ ಕ್ಲೂ ಕೊಡುತ್ತೇನೆಂದು ಮಾತು ಕೊಟ್ಟಿದ್ದ.

ಉಂಡ ಮನೆಗೇ ಎರಡು ಬಗೆಯುವ ಈ ನೀಚ[...] ತನ್ನ ದೋ ದಂಧೆಗಳನ್ನು ಸುಗಮವಾಗಿಸಿಕೊಳ್ಳ[...] ಅಂದು ಆಪತ್ತಿನಲ್ಲಿ ಸಿಲುಕಿದ್ದ ರಫೀಕನೇ ದಾಳವಾಗಿ[...] ಪೊಲೀಸರ ಪಾಲಿಗಂತೂ ರೊಟ್ಟಿ ಹಳಸಿತ್ತು ನಾಂ[...] ಹಸಿದಿತ್ತು ಎಂಬಂತಾಗಿತ್ತು. ಇದಾದ ನಂತರ[...] ವೆಂಕಟೇಶ್ ಪ್ರಸನ್ನ ಮುಲ್ಕಿ ರಫೀಕನ ಬೇಟೆಗೆ ಇಳಿದ[...] ಮತ್ತು ಆತನನ್ನು ಮುಗಿಸಿದ್ದು ಕೂಡ.


ಇದೇ ಸಮಯದಲ್ಲಿ, ವೆಂಕಟೇಶ್ ಪ್ರಸನ್[...] ಗುಂಡಿಗೆ 'ಎನ್‌ಕೌಂಟರ್' ನಲ್ಲಿ ಸತ್ತ ಗಂಡನ ಶವವನ[...] ನೋಡುವ ಭಾಗ್ಯವಿಲ್ಲದೇ ಜೊಹರಾ ಮೈಸೂ[...] ಜೈಲಿಗೆ ರವಾನೆಯಾದಳು. ಈ ನಕಲಿ ಎನ್‌ಕೌಂಟ[...] ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ದಾ[...] ಹೂಡಲು ಕೆಲವು ಸಂಘಟನೆಗಳು ತಯಾರಿ ನಡೆಸಿದ[...] ಇದು ಒಂದಲ್ಲ ಒಂದು ದಿನ ತನ್ನ ಬುಡಕ್ಕೇ ನೀ[...] ತರುತ್ತದೆ ಎಂದು ಗೊತ್ತಾದಾಗ ಖುದ್ದು ವೆಂಕಟೇ[...] ಪ್ರಸನ್ನ ತನ್ನ ಗುಲಾಮನಂತಿದ್ದ ಗುಲಾಂನನ್ನು ಮೈಸೂ[...] ಕಪ್ಪ ಸಮೇತ ಕಳುಹಿಸಿಕೊಟ್ಟರು. ಅಲ್ಲಿಯವರೆಗ[...] ಪೊಲೀಸರ ಬಗ್ಗೆ ಕೆಂಡಕಾರುತ್ತಿದ್ದ ಜೊಹರಾ ಮ[...] ಗಾದಳು. "ಗಂಡ ಸತ್ತು ಮುಂಡೆಯಾದದ್ದಾಯಿ[...] ಇನ್ನೇನು ಪೊಲೀಸರ ಮೇಲೆ ಕೇಸು ಹಾಕಿ[...] ಆತ ಬದುಕಿ ಬರುತ್ತಾನೆಯೇ?" ಎಂಬ ಡೈಲಾ[...] ಬಿಡತೊಡಗಿದ ಜೊಹರಾ "ನನ್ನ ಗಂಡನ ಹೆಸ[...] ಹೇಳಿಕೊಂಡು ಲಕ್ಷಾಂತರ ಹಣ ಕಲೆಕ್ಷನ್ ಮಾ[...] ತಿಂದು ಹಾಕಿದರು" ಎಂದು ಮುಸ್ಲಿಂ ಸಂಘಟನೆ[...] ವಿರುದ್ಧ ಚೀರತೊಡಗಿದಳು.

ಇತ್ತ ರಫೀಕ್‌ನ ತಾಯಿ "ನನ್ನ ಮ[...] ಎನ್‌ಕೌಂಟರ್‌ನಲ್ಲಿ ಸಾಯಲು, ರೌಡಿಯಾಗಿ ಬೆಳೆಯ[...] ಆತನ ಹೆಂಡತಿಯೇ ಕಾರಣ" ಎಂದು ಗೋಳಾಡಿದ್ದ[...] ಈಕೆ ಇದೀಗ ನ್ಯಾಯ ಹುಡುಕುತ್ತಾ ಮಾನವ ಹಕ್ಕು[...] ಆಯೋಗದ ಮೊರೆ ಹೋಗಿದ್ದಾಳೆ. ಇದೇ[...] ಹಿನ್ನೆಲೆಯಲ್ಲಿ ಮುಲ್ಕಿ ರಫೀಕನ ಸಾವಿಗೆ ಪ್ರತ್ಯಕ್ಷ ಮ[...] ಪರೋಕ್ಷವಾಗಿ ಸಹಕರಿಸಿ, ಉಂಡ ಮನೆಗೇ ಎರ[...] ಬಗೆದ ಗುಲಾಂ ಬಗ್ಗೆ ಆಕ್ರೋಶ ಮನೆ ಮಾಡಿತ[...]

ಇದೇ ಸಂದರ್ಭದಲ್ಲಿ ಈತ ಇತ್ತೀಚೆಗೆ ಮು[...] ಕನ್‌ನೀರೆ ಇಸ್ಮಾಯಿಲ್ ಎಂಬಾತನ ನಕಲಿ ಆರ್[...] ಜಾಲದ ಬಗ್ಗೆ ವೆಂಕಟೇಶ್ ಪ್ರಸನ್ನಗೆ ಮಾಹಿತಿ ಕೊ[...] ಆತನನ್ನು ಹಿಡಿಸಿದ್ದ. ಈ ಸಿಟ್ಟು ಬೇರೆ ಗುಲಾ[...] ಮೇಲಿತ್ತು, ಇದೆಲ್ಲದರ ಮೊತ್ತವಾಗಿ ಗುಲಾಂನ ಮೆ[...] ಈಗ ದಾಳಿಯಾಗಿದೆ. ಅಂದರೆ ಮುಂದಿನ ದಿನಗ[...] ಏನೋ 'ಅಪಾಯ' ಕಾದಿದೆ ಎನ್ನುವುದರ ಮುನ್[...]ಚನೆಯೇ ಆಗಿದೆ.

-ಭೂಮಿ[...]

ಮಾಡೂರು ಇಸುಬು ಕಿಡಿಕಿಡಿ!



ಚಂದ್ರಶೇಖರ ಉಚ್ಚಿಲ[...]

ಉಳ್ಳಾಲದ ಬಿಜೆಪಿ ಎಂಎಲ್‌ಎ ಕ್ಯಾಂಡಿಡೇಟ್ ಚಂದ್ರಶೇಖರ ಉಚ್ಚಿಲನ ಬದ್ಧವೈರಿ ಮಾಡೂರು ಇಸುಬು. ಈತ ಮುಲ್ಕಿ ರಫೀಕ್‌ನ ಸಹಚರನಾಗಿದ್ದವನು ಮಾತ್ರವಲ್ಲ ರಫೀಕ್‌ಗಿಂತಲೂ ಅನಾಹುತಕಾರಿ. ಅದೊಂದು ದಿನ ಚಂದ್ರಶೇಖರ ಉಚ್ಚಿಲನನ್ನು ಅಡ್ಡಗಟ್ಟಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದ ಇಸುಬು, ಆನಂತರ ಪೊಲೀಸರಿಂದ ಬಚಾವಾಗಲು ದೇಶ ಬಿಟ್ಟು ಪರಾರಿಯಾಗಿದ್ದ. ಇಸುಬು ಇಲ್ಲಿರುವ ತನಕ ಎಂದೂ ಏಕಾಂಗಿಯಾಗಿ ರಸ್ತೆಗಿಳಿಯದ ಉಚ್ಚಿಲನೆಂಬ ಭಜರಂಗಿ ಪುಂಡ, ಹಲ್ಲೆಯ ಸಿಂಪತಿ ಮೇಲೆಯೇ ಲೀಡರ್ ಆಗಿ ಬೆಳೆದ. ಸುಖಾನಂದ ಶೆಟ್ಟಿಯ ಕೊಲೆಗೂ ಸುಪಾರಿ ನೀಡಿದ್ದು ಮಾಡೂರು ಇಸುಬು ಎನ್ನುವುದಿದೆ. ಆದರೆ ಈತ ಸ್ಕೆಚ್ ಹಾಕಿದನೆಂದರೆ ಕೆಲಸ ಆಯಿತೆಂದೇ ಲೆಕ್ಕ. ಆತ ಅಂತಹ ಅಪಾಯಕಾರಿ. ಆದ್ದರಿಂದ ಈಗ[...] ಮಂಗಳೂರು ಪೊಲೀಸರ ಮೋಸ್ಟ್ ವಾಂಟೆಡ್ ರೌಡಿಯೆಂದರೆ ಮಾಡೂರು ಇಸುಬು. ಆದರೆ ಈತನನ್ನು[...] ಬೇಟೆಯಾಡಲು 'ಇಂಟರ್‌ಪೋಲ್' ಸಮಸ್ಯೆ. ಆದರೆ ಇದನ್ನೇ ಬಂಡವಾಳ ಮಾಡಿಕೊಂಡು ದುಬೈಯಿಂದ[...] ರಜೆ ಮೇಲೆ ಊರಿಗೆ ಬರುವ ಮುಸ್ಲಿಂ ಯುವಕರ ಬಗ್ಗೆ ಪೊಲೀಸರಿಗೆ ಮಾಹಿತಿ ಕೊಟ್ಟು ಕಿರುಕು[...] ನೀಡುವುದು ಗುಲಾಂನ ಕಾಯಕವಾಗಿದೆ. ಇದು ಗೊತ್ತಾದದ್ದೇ ಮಾಡೂರು ಇಸುಬು ಕೂಡಾ ಕಿಡಿಕಿಡಿಯಾಗಿದ್ದಾ[...]

ಬೇಲಿಯೇ ಎದ್ದು ಹೊಲ ಮೇಯ್ದರೆ ಏನಾಗುತ್ತದೆ ಎಂಬುದಕ್ಕೆ ರಾಜೀವ್‌ಗಾಂಧಿ ಆರೋಗ್ಯ ಶಿಕ್ಷಣ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಈ ಹಗರಣವೇ ಸಾಕ್ಷಿ. ಈ ವಿವಿಯ ಕುಲಪತಿ ಮತ್ತು ಕುಲಸಚಿವರು ಹಲವು ದುಡ್ಡುಳ್ಳ ವಿದ್ಯಾರ್ಥಿಗಳೊಂದಿಗೆ ಕೈಜೋಡಿಸಿ ಅನರ್ಹರಿಗೆಲ್ಲಾ ರ‍್ಯಾಂಕುಗಳನ್ನು ದಯಪಾಲಿಸಿದ್ದಾರೆ. ಈ ಕ್ರಿಯೆಯಿಂದ ಅರ್ಹ ವಿದ್ಯಾರ್ಥಿಗಳಿಗೆ ಅನ್ಯಾಯ ಎಸಗಿದ್ದಾರಲ್ಲದೆ, ಇಡೀ ಆರೋಗ್ಯ ಶಿಕ್ಷಣ ವ್ಯವಸ್ಥೆಯನ್ನೇ ಗಬ್ಬೆಬ್ಬಿಸಿದ್ದಾರೆ.



ರಾಜೀವ್‌ಗಾಂಧಿ ಆರೋಗ್ಯ ಶಿಕ್ಷಣ ವಿಶ್ವವಿದ್ಯಾಲಯ

ಇಲ್ಲಿ ರ‍್ಯಾಂಕ್‌ಗಳು ಮಾರಾಟಕ್ಕಿವೆ!

ರಾಜೀವ್‌ಗಾಂಧಿ ವಿವಿಯು ಪ್ರತಿವರ್ಷ ಎಂಬಿಬಿಎಸ್ ಪದವಿ ಪಡೆದಿರುವ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಗೆ ಪರೀಕ್ಷೆಗಳನ್ನು (ಪಿಜಿಇಟಿ) ನಡೆಸುತ್ತದೆ. ರಾಜ್ಯದಲ್ಲಿ ಕೇವಲ ಐನೂರರಷ್ಟಿರುವ ವೈದ್ಯಕೀಯ ಮತ್ತು ದಂತಶಾಸ್ತ್ರದ ಪಿಜಿ ಕೋರ್ಸುಗಳಿಗೆ ದೊಡ್ಡ ಸ್ಪರ್ಧೆಯೇ ನಡೆಯುತ್ತದೆ. ಈ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ಉನ್ನತ ವ್ಯಾಸಂಗಕ್ಕೆ ಅವಕಾಶ.

ಇಂತಹ ಒಂದು ಜವಾಬ್ದಾರಿಯುತ ಹೊಣೆಯನ್ನು ಹೊತ್ತಿರುವ ರಾಜೀವ್‌ಗಾಂಧಿ ವಿವಿಯ ಅಧಿಕಾರಿಗಳೇ ಅವ್ಯವಹಾರದಲ್ಲಿ ತೊಡಗಿ 2006ರಲ್ಲಿ ನಡೆದ ಪರೀಕ್ಷೆಗಳಲ್ಲಿ ಅನರ್ಹರಿಗೆ ರ‍್ಯಾಂಕ್‌ಗಳನ್ನು ನೀಡಿದ್ದಾರೆ. ಹೀಗೆ ರ‍್ಯಾಂಕ್‌ಗಳನ್ನು ಪಡೆದವರು ಅಧಿಕಾರಿಗಳ ಜೇಬುಗಳಿಗೆ ಇಳಿಸಿದ್ದು ಎಷ್ಟು ಕೋಟಿ ರೂಪಾಯಿಗಳೋ!

ಹತ್ತನೇ ಇಯತ್ತೆಯಿಂದ ಮೊದಲುಗೊಂಡು ಎಂಬಿಬಿಎಸ್‌ನ ವರೆಗೆ ನಡೆದ ಸಮಸ್ತ ಪರೀಕ್ಷೆಗಳನ್ನೂ ತಿಣುಕಾಟದಿಂದಲೇ ಬರೆದು ನಾಲ್ಕೈದು attempt ಗಳಲ್ಲಿ ಪಾಸು ಮಾಡಿದ ಅನೇಕ ವಿದ್ಯಾರ್ಥಿಗಳು, ರಾಜೀವ್‌ಗಾಂಧಿ ವಿವಿ ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ ರ‍್ಯಾಂಕುವೀರರು! ಆದರೂ ಏನೊ ಹುಡುಗ್ರು ಚೆಂದಗೆ ಓದ್ಕಂಡಿರಬೇಕು ಅಂದುಕೊಂಡು ಸಂಬಂಧಿಸಿದವರೆಲ್ಲಾ ಸುಮ್ಮನಾಗುತ್ತಿದ್ದರೋ ಏನೋ. ಆದರೆ ರಾಜೀವ್‌ಗಾಂಧಿ ವಿವಿ PGET ಪರೀಕ್ಷೆ ನಡೆಸಿದ ಬೆನ್ನಿಗೇ ಕಾಮೆಡ್‌ಕೆಯವರೂ ಪ್ರವೇಶ ಪರೀಕ್ಷೆ ಏರ್ಪಡಿಸಿದ್ದರಲ್ಲಾ.... ಅದರಲ್ಲಿ PGET ಪರೀಕ್ಷೆಯ ರ‍್ಯಾಂಕು ವೀರರೆಲ್ಲಾ ಫೇಲು!

ಈ ಎರಡೂ ಪರೀಕ್ಷೆಗಳಲ್ಲಿನ ಪ್ರಶ್ನೆ ಪತ್ರಿಕೆಗಳು ಬಹುತೇಕ ಸಮವಾಗಿಯೇ ಇರುತ್ತವಾದರೂ ಬಂದ ಫಲಿತಾಂಶಗಳಲ್ಲಿ ಅಜ-ಗಜಾಂತರ ವ್ಯತ್ಯಾಸ! PGET ಯ ರ‍್ಯಾಂಕು ವೀರರಿಗೆಲ್ಲಾ ಕಾಮೆಡ್‌ಕೆಯಲ್ಲಿ ಲಭಿಸಿದ್ದು ಚಿಲ್ಲರೆ ನಂಬರ್‌ಗಳು! ರಾಜೀವ್‌ಗಾಂಧಿ ವಿವಿಯ ಪರೀಕ್ಷೆಯ ಸುತ್ತಲಿನ ಅನುಮಾನಗಳು ಬಲಗೊಂಡಿದ್ದು ಆವಾಗಲೇ!

ಸರ್ಕಾರಕ್ಕೆ ದೂರು

ಅನರ್ಹರೆಲ್ಲಾ ಕೈತುಂಬಾ ರ‍್ಯಾಂಕು ಪಡೆದುಕೊಂಡು ಬೀಗುತ್ತಿದ್ದರೆ, ಅವಕಾಶ ವಂಚಿತ ಅರ್ಹರೆದೆಯಲ್ಲಿ ವಿವಿಯ ವಿರುದ್ಧ ಆಕ್ರೋಶದ ಜ್ವಾಲಾಮುಖಿಯೆದ್ದಿದೆ. ಈ ವಿಷಯ ಹಲವಾರು ಪ್ರಜ್ಞಾವಂತರ ಗಮನಕ್ಕೂ ಬಂದಿದೆ. ಆದ ಅನ್ಯಾಯವನ್ನು ವಿಶ್ವವಿದ್ಯಾಲಯದ ಕುಲಪತಿಗಳ ಮುಂದಿಟ್ಟರೆ ನ್ಯಾಯ ದೊರಕಬಹುದೇನೋ ಎಂಬ ತಟುಕು ಆಸೆಯೊಂದಿಗೆ ವಿದ್ಯಾರ್ಥಿಗಳು ಪ್ರಯತ್ನಪಟ್ಟರಾದರೂ ವಿಶ್ವವಿದ್ಯಾಲಯದ ಕುಲಪತಿ ಡಾ. ಪಿ.ಎಸ್. ಪ್ರಭಾಕರನ್ ಹಾಗೂ ಕುಲಸಚಿವ ಡಾ. ವಿ.ಐ. ಹುಕ್ಕೇರಿ ತುಟಿಕ್-ಪಿಟಿಕ್ ಎನ್ನಲಿಲ್ಲ.

ಇದನ್ನೆಲ್ಲಾ ಮನಗಂಡ ನೊಂದ ಮಂದಿ ಸರ್ಕಾರದ ಮೊರೆ ಹೋಗಿದ್ದಾರೆ. ಈ ಬಗ್ಗೆ ಪರಾಮರ್ಶೆ ನಡೆಸಿದ ಸರ್ಕಾರಕ್ಕೆ ಆದ ಅವ್ಯವಹಾರದ ಅರಿವಾದದ್ದೇ, ಪ್ರಸಂಗವನ್ನು ಸಿಬಿಐ ತನಿಖೆಗೊಪ್ಪಿಸಿತು. ಈ ಬಗ್ಗೆ ವಿಸ್ತೃತ ತನಿಖೆ ನಡೆಸಿರುವ ಡಿವೈಎಸ್ಪಿ ಎಲ್.ಎಸ್. ಪದ್ಮಕುಮಾರ್ ಸರ್ಕಾರಕ್ಕೆ ಪ್ರಥಮ ಮಾಹಿತಿ ವರದಿ ಸಲ್ಲಿಸಿದ್ದು, ಅದರ ಪ್ರತಿಯೊಂದು 'ಲಂಕೇಶ್'ಗೆ ಲಭ್ಯವಾಗಿದೆ. ಆ ವರದಿಯಲ್ಲಿನ ಮಾಹಿತಿಯ ಪ್ರಕಾರ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕುಲ ಸಚಿವರುಗಳ ಸಹಭಾಗಿತ್ವದಿಂದಲೇ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಅವ್ಯವಹಾರ ಸಂಭವಿಸಿದ್ದು ಮನದಟ್ಟಾಗಿದೆ. ಜೊತೆಗೆ ವಾಮ ಮಾರ್ಗದಿಂದ ಪಾಸಾದ ರ‍್ಯಾಂಕು ವೀರರ ವಿವರನ್ನೊಮ್ಮೆ ಓದಿ ಅವರ ಹಿಂದಿನ ಶೈಕ್ಷಣಿಕ ಪಟ್ಟಿಯಲ್ಲಿ ಕಣ್ಣಾಡಿಸಿದರೆ ಒಂದೊಂದೇ ಭಯಾನಕ ಸತ್ಯಗಳು ಹೊರಬರುತ್ತವೆ.

ಎಂತೆಂಥವರಿಗೆ ರ‍್ಯಾಂಕು!

ಬಹುಶಃ ರಾಜೀವ್‌ಗಾಂಧಿ ವಿವಿ ನಡೆಸಿದ PGET ಸ್ನಾತಕೋತ್ತರ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆಗಳೇ ಬೇಡವೇನೋ! ಪ್ರವೇಶ ಪರೀಕ್ಷೆಯಲ್ಲಿ ರ‍್ಯಾಂಕು ದಕ್ಕಿಸಿಕೊಂಡ ಈ ಡಾಕ್ಟರುಗಳಲ್ಲಿ ಎಂತೆಂಥಾ ಪ್ರತಿಭಾನ್ವಿತರಿದ್ದಾರೆ ನೀವೇ ನೋಡಿ. 2006 ರ ಫೆಬ್ರವರಿ 12 ರಂದು ರಾಜೀವ್‌ಗಾಂಧಿ ವಿವಿ ಪರೀಕ್ಷೆ ನಡೆದು ಫಲಿತಾಂಶ ಪ್ರಕಟವಾದದ್ದು ಫೆಬ್ರವರಿ 20 ರಂದು. ಇದಾಗಿ ಹತ್ತು ದಿನಗಳಲ್ಲೇ ಕಾಮೆಡ್-ಕೆ ನಡೆಸಿದ ಪ್ರವೇಶ ಪರೀಕ್ಷೆಯ ಫಲಿತಾಂಶಗಳೂ ಹೊರಬಿದ್ದಿವೆ. ಇಲ್ಲಿ ರ‍್ಯಾಂಕ್ ಗಳಿಸಿದ ವಿದ್ಯಾರ್ಥಿ ಕಾಮೆಡ್-ಕೆಯಲ್ಲೂ ಪರೀಕ್ಷೆ ಬರೆದಿದ್ದಾರೆ. ಆದರೆ ಬಂದ ಫಲಿತಾಂಶದಲ್ಲಿ ಅದೆಷ್ಟು ಅಂತರವಿದೆ ಗಮನಿಸಿ.

ಪ್ರಥಮ ರ‍್ಯಾಂಕ್ ಪಡೆದ ನಾಲ್ಕು ಮಂದಿಯಲ್ಲಿ ಬೆಳಗಾಂನ ಜೆ.ಎನ್.ಎಮ್.ಸಿ. ಕಾಲೇಜಿನಲ್ಲಿ ವೈದ್ಯಕೀಯ ಪದವಿ ಮುಗಿಸಿದ ಡಾ. ನಿತೀಶ್ ದೇಸಾಯಿ ಎಂಬಾತ ಎಂಬಿಬಿಎಸ್‌ನಲ್ಲಿ 64.27% ಅಂಕ ಗಳಿಸಿದ್ದಾರೆ. ಪಿಜಿಇಟಿಯಲ್ಲಿ ಫಸ್ಟ್ ರ‍್ಯಾಂಕ್. ಕಾಮೆಡ್-ಕೆಯಲ್ಲಿ ಈತನದು 3607 ನೇ ರ‍್ಯಾಂಕು!

ದಾವಣಗೆರೆಯ ಜೆಜೆಎಮ್ ಮೆಡಿಕಲ್ ಕಾಲೇಜಿನ ಡಾ. ಆನಂದ್ ಹಳಿಯಾಳ್ ಕಾಮೆಡ್-ಕೆಯಲ್ಲಿ 3023ನೇ ರ‍್ಯಾಂಕ್ ಗಳಿಸಿದ್ದು ಪಿಜಿಇಟಿಯಲ್ಲಿ ಫಸ್ಟ್ ರ‍್ಯಾಂಕ್! ಎಂಬಿಬಿಎಸ್‌ನಲ್ಲಿ ಈತನದ್ದು ಸೆಕೆಂಡ್ ಕ್ಲಾಸ್! ಮೈಸೂರು ಎಂಎಂಸಿ ಕಾಲೇಜಿನ ಡಾ. ಮೇಖಳಾ ದ್ವಾರಕಾನಾಥ್‌ಗೆ PGETಯಲ್ಲಿ ದೊರಕಿದ್ದು ಫಸ್ಟ್ ರ‍್ಯಾಂಕ್. ಕಾಮೆಡ್-ಕೆಯಲ್ಲಿ ಲಭಿಸಿದ್ದು 3276 ನೇ ರ‍್ಯಾಂಕ್. ಎಸ್‌ಎಸ್‌ಎಲ್‌ಸಿಯಲ್ಲಿ 74% ಹಾಗೂ ಪಿಯುಸಿಯಲ್ಲಿ 79% ನಲ್ಲಿ ಪಾಸಾದ ಈಕೆ, ಎಂಬಿಬಿಎಸ್ ಪದವಿಯನ್ನು ನಾಲ್ಕನೇ attempt ನಲ್ಲಿ ಪಾಸು ಮಾಡಿದ್ದಾಳೆ!

ಇವರೆಲ್ಲರಿಗಿಂತ ಮೈಸೂರಿನ ಜೆಎಸ್ಎಸ್ ಮೆಡಿಕಲ್ ಕಾಲೇಜಿನ ಡಾ. ನಂದಿತ ಶೆಟ್ಟಿಯದ್ದೊಂದು ಭಾರೀ ಯಶೋಗಾಥೆ! ಎಸ್‌ಎಲ್‌ಎಲ್‌ಸಿಯಲ್ಲಿ 70% ಅಂಕಗಳಿಸಿದ ಈಕೆ, ಪಿಯುಸಿಯಲ್ಲಿ 63% ನಲ್ಲಿ ಪಾಸಾಗಿದ್ದು, ಎಂಬಿಬಿಎಸ್‌ಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ ಈಕೆಯದ್ದು 12,000 ನೇ ರ‍್ಯಾಂಕ್! ಜೊತೆಗೆ ಎಂಬಿಬಿಎಸ್ ಅನ್ನು 14 attempt ಗಳಲ್ಲಿ ಪಾಸು ಮಾಡಿದ್ದಾಳೆ. ಇಂಥ ಪ್ರತಿಭಾನ್ವಿತೆಗೆ PGET ಯಲ್ಲಿ ದೊರಕಿದ್ದು 6 ನೇ ರ‍್ಯಾಂಕು. ಕಾಮೆಡ್-ಕೆ ಕೊಟ್ಟದ್ದು 3742 ನೇ ರ‍್ಯಾಂಕ್! ಅದಿನ್ನೆಂತಾ ಅವ್ಯವಹಾರ ನಡೆದಿದೆಯೋ ನೀವೇ ಯೋಚಿಸಿ! ಅಷ್ಟೇನೂ ಬುದ್ಧಿವಂತರಲ್ಲದ ವಿದ್ಯಾರ್ಥಿಗಳು ಈ ಪರಿ ಅಂಕಗಳಿಸಿ ರ‍್ಯಾಂಕು ತಲೆಗೇರಿಸಿಕೊಂಡಿದ್ದಾರೆಂದರೆ ಏನರ್ಥ?

ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಈ ಹಿಂದಿನ ಫಲಿತಾಂಶ ಪಟ್ಟಿ ತಿರುವಿ ಹಾಕಿದರೆ ಹಿಂದೆಂದೂ ನಡೆಯದ ಕ್ಷಿಪ್ರ ಬೆಳವಣಿಗೆಯೊಂದು 2006 ರ ಫಲಿತಾಂಶದಲ್ಲಿ ಘಟಿಸಿ ಹೋಗಿರುವ ಅಂಶ ತಿಳಿಯುತ್ತದೆ. 2005 ರಲ್ಲಿ ನಡೆದ ಪರೀಕ್ಷೆಯಲ್ಲಿ ಒಬ್ಬನೇ ಒಬ್ಬ ಅಭ್ಯರ್ಥಿ ಫಸ್ಟ್ ರ‍್ಯಾಂಕ್ ಗಳಿಸಿದ್ದ. 2004 ರಲ್ಲೂ ಫಸ್ಟ್‌ರ‍್ಯಾಂಕ್ ಒಬ್ಬ ವಿದ್ಯಾರ್ಥಿಯ ಪಾಲಾಗಿತ್ತು. ಆದರೆ ಈ ಬಾರಿ ಫಸ್ಟ್ ರ‍್ಯಾಂಕ್ ಗಳಿಸಿಕೊಂಡಿದ್ದು 56 ಮಂದಿ! ಅವರಲ್ಲಿ ಕನಿಷ್ಠವೆಂದರೂ 17 ಮಂದಿ ಅಕ್ರಮವಾಗಿ ಅಂಕಗಳನ್ನು ಪಡೆದ ರ‍್ಯಾಂಕ್ ವೀರರು. ಇನ್ನೊಂದು ಗಮನಾರ್ಹ ಅಂಶವೆಂದರೆ ಈ ಹಿಂದೆ 200 ಅಂಕಗಳಿಗೆ ಹೆಚ್ಚೆಂದರೆ 168 ಅಂಕ ಗಳಿಸಲಾಗಿತ್ತು. ಆದರೆ 2006 ರಲ್ಲಿ ರ‍್ಯಾಂಕು ವೀರರು ಪಡೆದ ಅಂಕ ಸರಾಸರಿ 194 ಕ್ಕೆ ಬಂದು ಮುಟ್ಟಿದೆ.

ಕುಲಸಚಿವರೇ ಸೂತ್ರಧಾರಿ!

'ಲಂಕೇಶ್' ವಾರಪತ್ರಿಕೆಗೆ ಲಭಿಸಿರುವ ಮಾಹಿತಿಯ ಪ್ರಕಾರ ರಾಜೀವ್‌ಗಾಂಧಿ ಕುಲಸಚಿವ ವಿ.ಟಿ. ಹುಕ್ಕೇರಿಯವರ ಸಂಪೂರ್ಣ ಸಹಕಾರದಿಂದಲೇ ಈ ಹಗರಣ ನಡೆದಿದೆ. 2006 ರಲ್ಲಿ ನಡೆದ PGET ಪರೀಕ್ಷೆಯ ಸಂಪೂರ್ಣ ಅಧಿಕಾರವಿದ್ದದ್ದೂ ಈ ಆಸಾಮಿ ಯೊಬ್ಬರಿಗೇ. ಪ್ರಶ್ನೆಪತ್ರಿಕೆ ಬಯಲಾಗಿದ್ದೇ ಆದರೆ ಅದು ಅವರು ಇವರ ಸಹಕಾರವಿಲ್ಲದೆ ಆಗಲಾರದು.

ಪ್ರಶ್ನೆಪತ್ರಿಕೆ ರೆಡಿ ಮಾಡುವ ಕೆಲಸವೂ ಹುಕ್ಕೇರಿಯದ್ದೇ ಆದ ಕಾರಣ ಹುಕ್ಕೇರಿಯವರು ಪ್ರಶ್ನೆಪತ್ರಿಕೆಯನ್ನು ಪರಿಚಯಸ್ಥರಲ್ಲೇ ಪ್ರಿಂಟಿಂಗ್‌ಗೆ ಕೊಟ್ಟದ್ದಾರೆ. ಗುಮಾನಿಯ ಪ್ರಕಾರ ಪ್ರಶ್ನೆಗಳೆಲ್ಲಾ ಜಾಹೀರಾಗಿದ್ದು ಆ ಸಂದರ್ಭದಲ್ಲೇ! ಜೊತೆಗೆ ತನಿಖಾ ತಂಡಗಳು ಗಮನಿಸಿದ ಅಂಶಗಳ ಪ್ರಕಾರ ಪ್ರಶ್ನೆಗಳಿಗೆ ಉತ್ತರ ಸೂಚಿಸುವ OMRC ಶೀಟ್ಸ್‌ಗಳಲ್ಲಿ ಬಹುತೇಕ ಎಲ್ಲವುಗಳಲ್ಲಿಯೂ ಒಂದೇ ಪೆನ್ನಿನಿಂದ ಉತ್ತರವನ್ನು ಟಿಕ್ ಮಾಡಲಾಗಿದೆ. ಹಾಗಾದರೆ ಅಭ್ಯರ್ಥಿಗಳಿಂದ ಹಣ ಪಡೆದುಕೊಂಡು ವ್ಯವಸ್ಥಿತವಾಗಿ ಬೇರೆಯವರಿಂದ ಒಂದೇ ಬಾರಿ ಉತ್ತರ ಬರೆಸಲಾಗಿದೆ ಎಂಬ ವಿಷಯ ಸ್ಪಷ್ಟವಾಯಿತಲ್ಲವೆ?

ಇವಿಷ್ಟು ಹಗರಣದ ಬಗ್ಗೆ 'ಲಂಕೇಶ್' ಕಲೆ ಹಾಕಿರುವ ಮಾಹಿತಿಗಳು. ಸರ್ಕಾರ ಈ ಬಗ್ಗೆ ಕಾಳಜಿ ವಹಿಸಿ ಶೀಘ್ರ ತನಿಖೆ ನಡೆಸಿ ಅಪರಾಧಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದರೆ ಅರ್ಹರಿಗೆ ಬೆಲೆಯುಳಿದೀತು. ವಿದ್ಯಾರ್ಥಿಗಳ ಪಾಲಿಗೆ ಬೆಳಕಾಗಿ ದಾರಿ ತೋರಿಸಬೇಕಾದ ಸರ್ಕಾರದ ಸಂಸ್ಥೆಗಳಲ್ಲಿಯೇ ಇಂತಹ ಅವ್ಯವಹಾರಗಳು ನಡೆದರೆ ಏನರ್ಥ? ಪ್ರತಿಭೆಯೊಂದನ್ನೇ ನಂಬಿ ಬದುಕು ರೂಪಿಸಿಕೊಳ್ಳ ಹೊರಟವರ ಗತಿ ಏನಾಗಬೇಕು?

ಇದೊಂದು ಬೃಹತ್ ಅಪರಾಧ ಜಾಲ. ಇದರಲ್ಲಿ ಕುಲಪತಿ ಮತ್ತು ಕುಲಸಚಿವ ಎನ್ನಿಸಿಕೊಂಡು ಆಯಕಟ್ಟಿನ ಜಾಗದಲ್ಲಿ ಕುಳಿತವರೇ ಶಾಮೀಲಾಗಿದ್ದಾರೆಂಬುದು ಸ್ಪಷ್ಟವಾಗಿದೆ. ಸರ್ಕಾರ ಇದನ್ನು ಹಗುರವಾಗಿ ಪರಿಗಣಿಸದೆ ಸಮಗ್ರ ತನಿಖೆ ನಡೆಸಬೇಕಿದೆ.

-ವರದಿಗಾರ

ಕಳ್ಳರ ಗ್ಯಾಂಗ್!

ರಾಜೀವ್‌ಗಾಂಧಿ ವಿವಿಯಲ್ಲಿ ನಡೆದ ಭಾರೀ ಅವ್ಯವಹಾರ ಬಯಲಿಗೆ ಬರುತ್ತಲೇ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ವಹಿಸಿತಲ್ಲಾ? ಸಿಬಿಐ ಈವರೆಗೆ ನಡೆಸಿದ ತನಿಖೆಯ ಪ್ರಕಾರ 24 ಮಂದಿಯನ್ನು ಅಪರಾಧಿಗಳೆಂದು ಪರಿಗಣಿಸಿದೆ. ಸಿಬಿಐ ಸೂಚಿಸಿದ ಆಪಾದಿತರ ಹೆಸರುಗಳು ಕೆಳಕಂಡಂತಿವೆ.



ಕುಲಪತಿ
ಡಾ.ಪಿ.ಎಸ್. ಪ್ರಭಾಕರನ್

ರಾಜೀವ್‌ಗಾಂಧಿ ವಿವಿಯ ಕುಲಪತಿ ಡಾ.ಪಿ.ಎಸ್. ಪ್ರಭಾಕರನ್, ಕುಲಸಚಿವ ಡಾ. ವಿ.ಡಿ. ಹುಕ್ಕೇರಿ, ಸಹಾಯಕ ರಿಜಿಸ್ಟ್ರಾರ್ ಡಾ.ಹನುಮಂತ ಪ್ರಸಾದ್, ಸಹಾಯಕ ರಿಜಿಸ್ಟ್ರಾರ್ ಎಚ್.ಎಲ್. ರವೀಂದ್ರ ಪ್ರಸಾದ್, ಸೂಪರ್‌ವೈಸರ್ ಡಾ. ಬಿ.ಆರ್.ಗೋಪಾಲ ಕೃಷ್ಣಪ್ಪ, ಸಹಾಯಕ ಕುಲಸಚಿವ ಡಾ. ಪ್ರಾಣೇಶ್ ಗುಡೂರ್, ಡಾ. ನಿತೀಶ್ ದೇಸಾಯಿ, ಡಾ. ಆನಂದ್ ಹಳಿಯಾಳ್, ಡಾ. ಗಿರಿಧರ್ ಎಸ್.ಎ. ಸಿದಾ ಟಾಗೋರ್, ಡಾ. ಬಬಿತಾ, ಡಾ. ನದಿಪಾ ಡಿ ಶೆಟ್ಟಿ, ಡಾ. ಹರ್ಷ, ಡಾ. ಎಂ.ಎಚ್. ರಮಣ್, ಡಾ. ಶಾಂತನೂ ಸಾಮ್ರಾರ್, ಡಾ. ಬಿ. ಗಿರೀಶ್, ಶಂಕ್ರಣ್ಣ ಮುನವಳ್ಳಿ ಹಾಗೂ ಚಿಕ್ಕ ಹನುಮಯ್ಯ. ಸರ್ಕಾರ ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸುವುದೇ ಕಾದುನೋಡಬೇಕಿದೆ.

ಕೊಳ್ಳೇಗಾಲ: ಬಡ ನರ್ಸಿಂಗ್ ವಿದ್ಯಾರ್ಥಿಗಳ ಕೈಗೆ ನಕಲಿ ಸರ್ಟಿಫಿಕೇಟ್!

ಇತ್ತೀಚೆಗೆ ನರ್ಸಿಂಗ್ ಕಾಲೇಜುಗಳನ್ನೂ ಒಳಗೊಂಡಂತೆ ಸಕಲ ವಿದ್ಯಾಸಂಸ್ಥೆಗಳೂ 'ವಂಚಕರ' ಪಾಲಿಗೆ ಹಣ ಹರಿಸುವ ಕಾಮಧೇನುಗಳಾಗಿ ಮಾರ್ಪಟ್ಟು, 'ನಕಲಿ' ಶಿಕ್ಷಣ ಸಂಸ್ಥೆಗಳು ರಾಜ್ಯಾದ್ಯಂತ ಗರಿಗೆದರಿ ನಿಂತಿವೆ. ಇಂತಹ ನಕಲಿ ಶಿಕ್ಷಣ ಸಂಸ್ಥೆಗಳಿಗೆ ಹದಿನೈದಿಪ್ಪತ್ತು ಸಾವಿರ ಫೀಜು ಕಟ್ಟಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗೆ ಕೈಲಿರುವ ಸರ್ಟಿಫಿಕೇಟ್ ನಕಲಿ ಎಂದಾದರೆ ಹೇಗಾಗಿರಬೇಡ? ಇಂಥದ್ದೇ ಮಹಾವಂಚನೆ ಮಾಡಿ ಸುದ್ದಿಯಾಗಿದ್ದು ಕೊಳ್ಳೇ ಗಾಲದ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಐಎಂಎಸ್). ಇಂಥಾದ್ದೊಂದು ನಕಲಿ ಸಂಸ್ಥೆಯ ಮೂಲಕ ನೂರಾರು ವಿದ್ಯಾರ್ಥಿಗಳನ್ನು ವಂಚಿಸಿದವನು ಅರುಣ್ ಕುಮಾರ್!

ಮಹಾವಂಚಕ

ನೋಡೋದಕ್ಕೆ ಕೆಳ್ಳ-ಬೆಳ್ಳಗೆ ಹರಡು ದಿಸೆಂಟ್ [illegible] ಕಾಣುವ ಅರುಣ್ ಕುಮಾರ್‌ನೊಳಗಿನ [illegible] ಅಂತಿಂಥದ್ದಲ್ಲ. ಈತ ಚಾಮರಾಜನಗರದ [illegible] 2005ರಲ್ಲಿ ಕೊಳ್ಳೇಗಾಲಕ್ಕೆ ವಲಸೆ ಬಂದವನೇ ಇಲ್ಲಿನ [illegible] ಎದುರಿನ ಲಯನ್ಸ್ ಶಾಲೆಯ [illegible] ಬಾಡಿಗೆ ಕಟ್ಟಡವೊಂದರ ಎದುರಿಗೆ 'ಇನ್‌ಸ್ಟಿಟ್ಯೂಟ್ [illegible] ಮೆಡಿಕಲ್ [illegible] [illegible] ಈ ಸಂಸ್ಥೆ ಕೇಂದ್ರ ಸರ್ಕಾರದಿಂದ ಪರವಾನಗಿ ಪಡೆದಿದೆಯಲ್ಲದೇ ರಾಜ್ಯ ಸರ್ಕಾರದಿಂದ ನೊಂದಣಿ ಪಡೆದಿದ್ದು ಎಸ್ ಎಸ್ ಎಜುಕೇಷನ್ ಟ್ರಸ್ಟ್ ಇದರ ಆಡಳಿತ ನೋಡಿಕೊಳ್ಳುತ್ತೆ ಅಂತೊಂದು ಸುಳ್ಳನ್ನು ಸುತ್ತಮುತ್ತೆಲ್ಲ ಹರಿಯಬಿಟ್ಟ! ಜೊತೆಗೆ ತನ್ನ ಸಂಸ್ಥೆಯಲ್ಲಿ ನರ್ಸಿಂಗ್ ಅಸಿಸ್ಟೆಂಟ್ ಎಂಬ ಎರಡು ವರ್ಷಗಳ ಕೋರ್ಸ್ ತೆರೆದ ಅರುಣ್, ಭರ್ತಿ ಪ್ರಚಾರ ನಡೆಸಿದನಲ್ಲದೇ ಕೋರ್ಸ್ ಪೂರ್ತಿಗೊಳಿಸುತ್ತಿದ್ದಂತೆ ರಾಜ್ಯದ ಪ್ರಮುಖ ಆಸ್ಪತ್ರೆಗಳಲ್ಲಿ ಕೆಲಸ ಗ್ಯಾರಂಟಿ ಅಂತ ಡೋಂಗಿಬಿಟ್ಟ. ಈತನ ಈ ಪ್ರಚಾರಕ್ಕೆ ಎಷ್ಟು ಮಂದಿ ಹಿಗ್ಗಿ ಬಿದ್ದರೆಂದರೆ 8 ವಿದ್ಯಾರ್ಥಿಗಳು, 32 ಮಂದಿ ವಿದ್ಯಾರ್ಥಿನಿಯರು ತಲಾ 15 ಸಾವಿರದಂತೆ ಅರುಣನ ಕೈಗಿಟ್ಟು ಕೋರ್ಸ್‌ಗೆ ಸೇರಿಕೊಂಡರು. ಹಾಗೆ ಈತನ ಕೈ ಸೇರಿದ್ದು ಬರೋಬ್ಬರಿ 6 ಲಕ್ಷ!

[illegible]


ಇತ್ತ ವಿದ್ಯಾರ್ಥಿಗಳ 2 ವರ್ಷದ ಕೋರ್ಸ್ ಮುಗಿಯಿತು. ಸಂಸ್ಥೆಯಿಂದ ಸಿಕ್ಕ ಸರ್ಟಿಫಿಕೇಟ್ ಅನ್ನು ನೌಕರಿ ದೊರಕಿಸಿಕೊಳ್ಳುವ ಉದ್ದೇಶದಿಂದ ವೈದ್ಯಕೀಯ ಸಂಸ್ಥೆ ಹಾಗೂ ಅಧಿಕಾರಿಗಳ ಕೈಗಿತ್ತರೆ "ಈ ಸಂಸ್ಥೆ ಅಸಲಿಯಲ್ಲ ಜೊತೆಗೆ ಈ ಸರ್ಟಿಫಿಕೇಟ್ ನಕಲಿ. ಈ ಸಂಸ್ಥೆಯನ್ನು ಯಾವುದೇ ಅನುಮತಿ ಪಡೆಯದೇ ನಡೆಸಲಾಗುತ್ತಿದೆ" ಎಂದಾಗ ವಿದ್ಯಾರ್ಥಿಗಳ ಪ್ರಾಣ ಹೋಗುವುದೊಂದೇ ಬಾಕಿ. ಸರಿ, ವಿಷಯ ತಿಳಿಯೋಣ ಅಂತ ಅರುಣ್ ಹತ್ತಿರ ಹೋದರೆ ಆತನಾಗಲೇ ನಾಪತ್ತೆ!

ದಿಕ್ಕು ತೋಚದಂತಾದ ವಿದ್ಯಾರ್ಥಿಗಳು ಬೇರೆ ದಾರಿ ಕಾಣದೆ ಉಪವಿಭಾಗಾಧಿಕಾರಿ ಸತ್ಯಭಾಮರಿಗೆ ದೂರು ನೀಡಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಅವರು ಹಲವಾರು ಸಂಘ ಸಂಸ್ಥೆಗಳ ನೆರವಿನಿಂದ ಅರುಣ್‌ನನ್ನು ಹಿಡಿದು ತಂದು ನ್ಯಾಯಾಲಯಕ್ಕೊಪ್ಪಿಸಿದ್ದಾರೆ. ನ್ಯಾಯಮೂರ್ತಿ ಪುಟ್ಟಸ್ವಾಮಿ, ವಂಚಕ ಆರೋಪಿಯನ್ನು [illegible] ಬಂಧನದಲ್ಲಿಡುವಂತೆ ಸೂಚಿಸಿದ್ದಾರೆ. ಅಷ್ಟರ ಮಟ್ಟಿಗೆ ಸಮಾಧಾನಪಟ್ಟುಕೊಳ್ಳುವ ಅವಕಾಶವಿದೆಯಾದರೂ ವಿದ್ಯಾರ್ಥಿಗಳ ಪರಿಸ್ಥಿತಿ ನೆನೆದರೆ ಹೆದರಿಕೆ ಹುಟ್ಟುತ್ತದೆ. ದುರಂತವೆಂದರೆ ಈತನಿಂದ ವಂಚನೆಗೊಳಗಾದ ವಿದ್ಯಾರ್ಥಿಗಳಲ್ಲಿ ಅನೇಕರು ಬಡವರ ಮಕ್ಕಳು. ದಟ್ಟ ಬಡತನದ ನಡುವೆಯೂ ಹೇಗೋ ಹಣವನ್ನು ಹೊಂದಿಸಿ ಮಕ್ಕಳಿಗೊಂದು ನೆಲೆ ಕಲ್ಪಿಸುವ ಬಗ್ಗೆ ತಂದೆ-ತಾಯಿ ಕಂಡ ಕನಸೀಗ ನುಚ್ಚು ನೂರಾಗಿದೆ.

ಚಾಮರಾಜನಗರ-ಮೈಸೂರು ಸುತ್ತಮುತ್ತ ಇಂತಹ ಅನೇಕ ನಕಲಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿ ಬಡ ವಿದ್ಯಾರ್ಥಿಗಳ ತಲೆ ಮೇಲೆ ಚಪ್ಪಡಿ [illegible] ಸನ್ನಾಹದಲ್ಲಿವೆ. ಸಂಬಂಧಿಸಿದವರು ಈ ಬಗ್ಗೆ ಗಮನ ಹರಿಸಿ ಅರುಣ್‌ನಂತಹ ಪಾಪಿಗಳಿಗೆ ಶಿಕ್ಷೆ ವಿಧಿಸಿ [illegible] ವಿದ್ಯಾರ್ಥಿಗಳಿಗೆ [illegible] ದಾರಿ ತೋರಿಸ [illegible] [illegible]

-ವರದಿಗಾರ

[illegible]



ಕತೆ

ಇಂಗ್ಲಿಷ್ ಮೂಲ: ಡೊರೊಥಿ ಪಾರ್ಕರ್

ಕನ್ನಡಕ್ಕೆ: ಗೌರಿ ಲಂಕೇಶ್

ಟೆಲಿಫೋನ್ ಕರೆ

ದಯವಿಟ್ಟು ದೇವರೇ, ಅವನು ನನಗೆ ಫೋನ್ ಮಾಡುವಂತಾಗಲಿ. ಈ ಕ್ಷಣವೇ ಆತ ಕರೆದರೆ ನಿನಗೆ ಏನು ಬೇಕೋ ಅದನ್ನು ಕೊಡುವೆ. ನಿನ್ನಿಂದ ಇನ್ನೇನನ್ನೂ ನಾನು ಕೇಳಲ್ಲ. ಒಂದೇ ಒಂದು ಬಾರಿ ಆತ ಫೋನ್ ಮಾಡುವಂತೆ ಮಾಡು ಪ್ಲೀಸ್.

ಇಲ್ಲ, ಅವನ ಕರೆಯ ಬಗ್ಗೆ ನಾನು ಯೋಚಿಸದಿದ್ದರೇನೇ ಆತ ಕರೆಯಬಹುದು. ಹಲವೊಮ್ಮೆ ಹಾಗಾಗುತ್ತೆ. ಹೌದು, ನಾನು ಬೇರೆಯದರ ಬಗ್ಗೆ ಯೋಚಿಸ ಬೇಕು. ಐದು ಬಾರಿ ಐನೂರರವರೆಗು ಎಣಿಸಿದರೆ ಹೇಗೆ? ಹಾಗೆ ಎಣಿಸುವಾಗ ಮೋಸ ಮಾಡಬಾರದು. ಲೆಕ್ಕ ತಪ್ಪದೇ ಎಣಿಸಬೇಕು. ಹಾಗೆ ನಾನು ಎಣಿಸುವುದರೊಳಗೇ ಆತ ಫೋನ್ ಮಾಡಬಹುದು. ಆಕಸ್ಮಾತ್ ನಾನು ಎಣಿಸುತ್ತಿದ್ದಾಗಲೇ ಆತ ಫೋನ್ ಮಾಡಿದರೆ ನಾನು ಅರ್ಧಕ್ಕೆ ನಿಲ್ಲಿಸುವುದಿಲ್ಲ. ಒಂದು, ಎರಡು, ಮೂರು...... ನಲವತ್ತೊಂಬತ್ತು, ಐವತ್ತು, ಓ ದೇವರೇ ಫೋನ್ ರಿಂಗ್ ಆಗುವಂತೆ ಮಾಡು, ಪ್ಲೀಸ್.

ನಾನು ಗಡಿಯಾರದತ್ತ ನೋಡುವುದಿಲ್ಲ, ಇದೇ ಕೊನೆಯ ಬಾರಿ. ಈಗ ಏಳು ಗಂಟೆ ಹತ್ತು ನಿಮಿಷಗಳಾಗಿದೆ. ಆತ "ಐದು ಗಂಟೆಗೆ ಫೋನ್ ಮಾಡ್ತೇನೆ, ಡಾರ್ಲಿಂಗ್" ಅಂದಿದ್ದ. ಹೌದು ಆತ ನನ್ನನ್ನು ಡಾರ್ಲಿಂಗ್ ಅಂತ ಕರೆದಿದ್ದ ಅನ್ನಿಸುತ್ತಿದೆ. ಅದರ ಬಗ್ಗೆ ಯಾವುದೇ ಅನುಮಾನಗಳಿಲ್ಲ, ಯಾಕೆಂದರೆ ಆತ ಎರಡು ಬಾರಿ ನನ್ನನ್ನು 'ಡಾರ್ಲಿಂಗ್' ಅಂತಲೇ ಕರೆದಿದ್ದಾನೆ. ಅವತ್ತು "ಬೈ" ಅನ್ನುವಾಗಲೂ "ಡಾರ್ಲಿಂಗ್" ಅಂತ ಸೇರಿಸಿದ್ದ. ಅವತ್ತು ಆತ ಆಫೀಸಿನಲ್ಲಿ ತುಂಬಾ ಬ್ಯುಸಿ ಆಗಿದ್ದ ಆದರೂ ಹಾಗೆಂದೇ ನನ್ನನ್ನು ಎರಡು ಬಾರಿ ಕರೆದಿದ್ದ. ನಾನೇ ಅವನಿಗೆ ಫೋನ್ ಮಾಡಿದರೆ ಹೇಗೆ? ಇಲ್ಲ, ಅದು ಅವನಿಗೆ ಇಷ್ಟವಾಗಲ್ಲ. ನಾನು ಹಾಗೆ ಪದೇ ಪದೇ ಫೋನ್ ಮಾಡಿದ್ದು ಅವನಿಗೆ ಇಷ್ಟವಾಗಿರಲಿಲ್ಲ. ಆದರೆ ಅವತ್ತು ಅವನೊಂದಿಗೆ ಮಾತನಾಡಿ ಮೂರು ದಿನಗಳಾಗಿದ್ದವು. "ತೊಂದರೆ ಕೊಡುತ್ತಿದ್ದೇನೆಯೇ?" ಅಂತ ಕೇಳಿದ್ದಕ್ಕೆ, "ಇಲ್ಲ, ಹಾಗೇನಿಲ್ಲ" ಅಂದಿದ್ದ. ತೊಂದರೆ ಕೊಡುತ್ತಿದ್ದರೆ ಆತ ಹಾಗೆ ಹೇಳುತ್ತಿರಲಿಲ್ಲ, ಅಲ್ಲವೇ. ಆಮೇಲೆ ಅವನೇ ಫೋನ್ ಮಾಡುವುದಾಗಿ ಹೇಳಿದ್ದ. ನಾನೇನು ಫೋನ್ ಮಾಡು ಅಂತ ಅವನನ್ನ ಕೇಳಿರಲಿಲ್ಲ. ನಿಜವಾಗಲೂ ಕೇಳಿರಲಿಲ್ಲ. ಆದರೆ ಫೋನ್ ಮಾಡುತ್ತೇನೆ ಅಂದವನು ಯಾಕೆ ಮಾಡಲಿಲ್ಲ. ದೇವರೇ, ಪ್ಲೀಸ್, ಆತ ನನಗೆ ಫೋನ್ ಮಾಡುವಂತೆ ಮಾಡು ಪ್ಲೀಸ್.

"ಐದು ಗಂಟೆಗೆ ಫೋನ್ ಮಾಡ್ತೀನಿ, ಡಾರ್ಲಿಂಗ್", "ಬೈ ಡಾರ್ಲಿಂಗ್" ಅಂದಿದ್ದ. ಹೌದು ಅವನು ತುಂಬಾ ಬ್ಯುಸಿ, ಅವನ ಸುತ್ತ ಜನರಿರುತ್ತಾರೆ. ಆದರೆ ಅವನು "ಡಾರ್ಲಿಂಗ್" ಅಂದದ್ದು ನನಗೆ, ಅವು ನನ್ನವು. ಅವನನ್ನು ಇನ್ನು ಮುಂದೆ ಎಂದೂ ನೋಡದಿದ್ದರೂ ಅವು ನನ್ನವು. ಅಯ್ಯೋ ಅದೆಷ್ಟು ಚಿಕ್ಕದ್ದು. ಅಷ್ಟು ಸಾಲುವುದಿಲ್ಲ. ಅವನನ್ನು ನಾನು ಮತ್ತೆ ಭೇಟಿಯಾಗದಿದ್ದರೆ ಎಲ್ಲವೂ ಶೂನ್ಯ. ದೇವರೇ, ಪ್ಲೀಸ್, ನನಗಾತ ಬೇಕು, ತುಂಬಾ ಬೇಕು. ಒಮ್ಮೆ ಅವನು ನನ್ನನ್ನು ಭೇಟಿಯಾಗುವಂತೆ ನೀನು ಮಾಡಿದರೆ ನಾನು ಇನ್ನು ಮುಂದೆ ಒಳ್ಳೆಯವಳಾಗಿರುತ್ತೇನೆ. ಅವನು ನನಗೆ ಫೋನ್ ಮಾಡುವಂತೆ ಮಾಡು ಪ್ಲೀಸ್.

ಓ, ನನ್ನ ಬೇಡಿಕೆ ನಿನಗೆ ತುಂಬಾ ತುಚ್ಛವಾಗಿ ಕಾಣಿಸುತ್ತಿದೆಯೇ? ನಿನಗೇನು ಗೊತ್ತು, ನೀನು ಸ್ವರ್ಗದಲ್ಲಿ ಮೋಡಗಳ ಮೇಲೆ ಆರಾಮವಾಗಿ ಕೂತಿದ್ದಿ. ನಿನ್ನ ಸುತ್ತ ಅಪ್ಸರೆಗಳು, ದೇವಾನುದೇವತೆಗಳು. ನಿನ್ನ ಮುಂದೆ ನಾನು ಒಂದು ಫೋನ್ ಕರೆಗಾಗಿ ಬೇಡುತ್ತಿದ್ದೇನೆ. ದೇವಾ, ನಗಬೇಡ. ನನಗೆ ಹೇಗೆ ಅನ್ನಿಸುತ್ತಿದೆ ಅಂತ ನಿನಗೆ ಗೊತ್ತಿಲ್ಲ. ಯಾರೂ ಯಾವುದೂ ನಿನ್ನನ್ನು ತಾಗದಂತೆ ಸುರಕ್ಷಿತವಾಗಿದ್ದೀ. ಯಾರೂ ನಿನ್ನ ಹೃದಯವನ್ನು ಕಿತ್ತು, ಕೈಯಲ್ಲಿ ಹಿಡಿದು ಹಿಸುಕಲಾರರು. ಇದು ನಿನಗೆ ಅರ್ಥವಾಗದ ಯಾತನೆ ದೇವರೇ. ದಯವಿಟ್ಟು ನನಗೆ ಸಹಾಯ ಮಾಡಲಾರೆಯಾ? ಒಂದೇ ಒಂದು ಫೋನ್ ಕರೆ, ಅಷ್ಟೇ ನಾನು ನಿನ್ನಲ್ಲಿ ಕೇಳುತ್ತಿರುವುದು.

ಇಲ್ಲಿ ನಾನು ಇದನ್ನೆಲ್ಲ ನಿಲ್ಲಿಸಬೇಕು. ನಾನು ಹೀಗೆಲ್ಲ ಆಡಬಾರದು. ನೋಡು, ಹಲವೊಮ್ಮೆ ಹುಡುಗನೊಬ್ಬ ಹುಡುಗಿಗೆ ಫೋನ್ ಮಾಡುತ್ತೇನೆ ಎಂದಿರುತ್ತಾನೆ. ಆದರೆ ಅದ್ಯಾವುದೋ ಕಾರಣಕ್ಕೆ ಫೋನ್ ಮಾಡಲಿಕ್ಕಾಗಿರುವುದಿಲ್ಲ. ಅದೊಂದು ದೊಡ್ಡ ದುರಂತವೇ? ಜಗತ್ತಿನೆಲ್ಲೆಡೆ ಪ್ರತಿ ದಿನ ಹೀಗಾಗುತ್ತಿರುತ್ತೆ, ಅಯ್ಯೋ ಜಗತ್ತಿನಲ್ಲೆಲ್ಲೋ ಆಗುತ್ತಿರುವುದನ್ನು ಕಟ್ಟಿಕೊಂಡು ನನಗೇನಾಗಬೇಕಿದೆ? ಈ ಟೆಲಿಫೋನಿಗೆ ರಿಂಗ್ ಆಗುವುದಕ್ಕೆ ಏನಾಗಿದೆ? ದಯವಿಟ್ಟು ರಿಂಗ್ ಆಗು, ಪ್ಲೀಸ್. ದರಿದ್ರದ್ದೆ ನಿನಗೇನಾಗಬೇಕು ಹೇಳು. ರಿಂಗ್ ಆದರೆ ನಿನ್ನದೇನು ಕಳೆದು ಹೋಗುತ್ತೆ? ನೋವಾಗುತ್ತೇನು ನಿನಗೆ? ನಿನ್ನಾ.... ನಿನ್ನ ವೈರ್‌ಗಳನ್ನೆಲ್ಲ ಕಿತ್ತುಹಾಕುತ್ತೇನೆ ನೋಡು, ಆಗ ನಿನಗೆ ಗೊತ್ತಾಗುತ್ತೆ, ಹಾಳಾಗಿ ಹೋಗು....

ಇಲ್ಲ, ಇಲ್ಲ, ಇದನ್ನೆಲ್ಲ ನಾನು ನಿಲ್ಲಿಸಬೇಕು. ಬೇರೆಯದರ ಬಗ್ಗೆ ಯೋಚಿಸಬೇಕು. ಹೌದು ಅದನ್ನೇ ಮಾಡುತ್ತೇನೆ. ಈ ಗಡಿಯಾರಾನ ಇನ್ನೊಂದು ರೂಮಿನಲ್ಲಿಡುತ್ತೇನೆ. ಅದರ ಮುಖವನ್ನೇ ನೋಡಬಾರದು. ನಾನು ಮತ್ತೆ ಅದರತ್ತ ನೋಡುವ ಮುನ್ನ ಆತ ಫೋನ್ ಮಾಡಿದರೆ? ನಾನು ತುಂಬಾ ಪ್ರೀತಿಯಿಂದ ಮಾತನಾಡುತ್ತೇನೆ. ಆಕಸ್ಮಾತ್ ಇವತ್ತು ಭೇಟಿ ಆಗಲು ಸಾಧ್ಯವಿಲ್ಲ ಎಂದು ಅವನು ಹೇಳಿದರೆ "ಪರವಾಗಿಲ್ಲ ಜಾನ" ಅಂತೀನಿ. ಅವನನ್ನು ಮೊದಲು ಭೇಟಿ ಆದಾಗ ಹೇಗಿದ್ದೇನೋ ಹಾಗೇ ಇರ್ತೀನಿ. ಹೋ, ಪ್ರೀತಿ ಮಾಡುವ ಮುನ್ನ ಒಳ್ಳೆಯವರಾಗಿರುವುದು ಎಷ್ಟು ಸಹಜ.

ದೇವರೇ ನಾನು ಆಗ ಹೇಗೆ ಒಳ್ಳೆಯವಳಾಗಿದ್ದೆನೋ, ಹಾಗೆ ಇರ್ತೀನಿ, ಆತ ನನ್ನನ್ನು ಮತ್ತೆ ಪ್ರೀತಿಸುವಂತೆ ಇರ್ತೀನಿ, ನನಗೆ ಕರೆ ನೀಡುವಂತೆ ಮಾಡು, ದಯವಿಟ್ಟು. ಹಾಗೆ ಅವನು ಫೋನ್ ಮಾಡಿದರೆ ಇನ್ನು ಮುಂದೆ ನಿನ್ನನ್ನು ನಾನು ಏನನ್ನೂ ಕೇಳುವುದಿಲ್ಲ, ಪ್ರಾಮಿಸ್.


ನನಗೆ ಶಿಕ್ಷೆ ನೀಡುತ್ತಿದ್ದೀಯಾ ದೇವಾ? ನಾನು ತಪ್ಪು ಮಾಡಿದೆ ನಿಜ. ಆದರೆ ಈ ಜಗತ್ತಿನಲ್ಲಿ ನನಗಿಂತಾ ದೊಡ್ಡ ತಪ್ಪು ಮಾಡಿರುವವರು ಅದೆಷ್ಟು ಜನ ಇಲ್ಲ - ಅವರಿಗೆ ಯಾವ ಶಿಕ್ಷೆಯನ್ನೂ ನೀಡದ ನೀನು ನನಗೆ ಮಾತ್ರ ಯಾಕೆ ನೀಡುತ್ತಿದ್ದೀಯಾ? ನಾನು ಯಾರನ್ನೂ ನೋಯಿಸಿಲ್ಲ, ಬೇಕಂತಲೇ ನೋಯಿಸಿಲ್ಲ, ಆದರೂ ನನಗೆ ಅನ್ಯಾಯ ಮಾಡುತ್ತಿದ್ದೀಯಾ ನೀನು. ಅವನು ಈ ಕ್ಷಣವೇ ನನ[ಗೆ] ಫೋನ್ ಮಾಡುವಂತೆ ಮಾಡುತ್ತೀಯೋ ಇಲ್ಲವೋ?

ದೇವರೇ, ಅವನು ಫೋನ್ ಮಾಡದಿದ್ದರೆ ನೀನ[ು] ನನ್ನ ಮೇಲೆ ಮುನಿಸಿಕೊಂಡಿದ್ದೀಯಾ ಅಂತಲ[ೇ] ಭಾವಿಸುತ್ತೇನೆ. ನಾನು ಐದು ಬಾರಿ ಐನೂರರ ತನ[ಕ] ಎಣಿಸುವುದರೊಳಗೆ ಆತ ಫೋನ್ ಮಾಡದಿದ್ದರೆ ನೀನ[ು] ನನ್ನ ಸಹಾಯಕ್ಕೆ ಬರಲ್ಲ ಅಂತಾನೂ ಅಂದುಕೊಳ್ಳುತ್ತೇನ[ೆ]. ಒಂದು, ಎರಡು, ಮೂರು... ಐವತ್ತೈದು.... ಹೌದ[ು] ತಪ್ಪು ಮಾಡಿದೆ. ಅದಕ್ಕೆ ಬೇಕಾದರೆ ನನ್ನನ್ನು ನಿನ್ನ ನರಕ[ಕ್ಕೆ] ದೂಡು, ಪರವಾಗಿಲ್ಲ. ನಿನ್ನ ಆ ನರಕ ಈ ನರಕಕ್ಕಿಂತಲ[ೂ] ಯಾತನಾಮಯವಾಗಿರಲಿಕ್ಕಿಲ್ಲ.

ಇಲ್ಲ, ನಾನು ಇದನ್ನ ನಿಲ್ಲಿಸಬೇಕು. ಯಾವುದೋ ಕಾರಣಕ್ಕೆ ಆತನಿಗೆ ತಡವಾಗಿರಬೇಕು. ಅದಕ್ಕೆ ನಾನ[ು] ಇಷ್ಟೆಲ್ಲ ಚಿಂತಿಸುವುದು ಬೇಡ. ಹೋ, ಆತ ಫೋನ[್] ಮಾಡದೇ ಇಲ್ಲಿಗೇ ನೇರವಾಗಿ ಬರುತ್ತಿರಬಹುದು. ಅದಕ್ಕೆ ಆತ ಫೋನ್ ಮಾಡಿಲ್ಲ, ಅಷ್ಟೆ. ಅವನು ಮನೆ[ಗೆ] ಬಂದು ನಾನು ಹೀಗೆ ಅಳುತ್ತಾ ಕೂತಿರುವುದನ್ನು ನೋಡಿದ[ರೆ] ಕೋಪ ಮಾಡಿಕೊಳ್ಳುತ್ತಾನೆ. ಅವರಿಗೆ ಅಳುವುದನ್ನು ಕಂಡ[ರೆ] ಆಗುವುದಿಲ್ಲ, ಅವನು ಅಳುವುದೇ ಇಲ್ಲ, ಅವನ[ನ್ನು] ಅಳುವಂತೆ ದೇವರು ಮಾಡುವುದಿಲ್ಲ ಯಾಕೆ? ಅವ[ನ] ಹೃದಯವೂ ನನ್ನದರಷ್ಟೇ ನೋಯುವುದಿಲ್ಲ ಯಾಕೆ[?] ನಾನು ಅವನಿಗೆ ನರಕದಷ್ಟು ನೋವು ಕೊಡಬೇಕ[ು] ಅನ್ನಿಸುತ್ತಿದೆ.

ಇಲ್ಲ, ಅವನು ನನಗೆ ಅಂತಹ ನೋವನ[್ನು] ಬಯಸುವುದಿಲ್ಲ. ಆದರೆ ಆತ ನನಗೆಷ್ಟು ನೋ[ವು] ಕೊಡುತ್ತಿದ್ದಾನೆ ಎಂಬುದು ಮಾತ್ರ ಅವನಿಗೆ ಗೊತ್ತಿ[ಲ್ಲ.] ಇದೊಂದು ವಿಚಿತ್ರ. ನಾವು ಅಳಕೂಡದು, ಅವರಿಂದಾ[ಗಿ] ಯಂತೂ ಅಳಕೂಡದು. ಅತ್ತರೆ ನಾವು ಅವರ ಮೇ[ಲೆ] ಅಧಿಕಾರ ಸ್ಥಾಪಿಸುತ್ತಿದ್ದೇವೆ ಎಂದುಕೊಳ್ಳುತ್ತಾರೆ. ಹಾಗಂದ[ು]ಕೊಂಡು ನಮ್ಮನ್ನು ದ್ವೇಷಿಸಲಾರಂಭಿಸುತ್ತಾರೆ. ಆಗ ನಾ[ವು] ಹೇಳಿದ್ದೆಲ್ಲವನ್ನು ವಿರೋಧಿಸಲಾರಂಭಿಸುತ್ತಾರೆ. ನಾ[ವು] ನಮಗನ್ನಿಸಿದ್ದನ್ನು ಹೇಳದೇ ಸುಮ್ಮನಿರಬೇಕು. ಇಂತ[ಹ] ಕಳ್ಳ ಆಟಗಳಲ್ಲಿ ಸದಾ ತೊಡಗಿರಬೇಕು. ಹೀಗಿರುತ್ತೆ ಅಂ[ತ] ನಾನು ಅಂದುಕೊಂಡೇ ಇರಲಿಲ್ಲ, ಇಂತಹ ಆಟಗಳನ್ನಾ[ಡ] ಬೇಕು ಅಂತ ಭಾವಿಸಿರಲಿಲ್ಲ, ನನಗೆ ಅನ್ನಿಸಿದ್ದನ್ನು ಹೇ[ಳ]ಬಹುದು ಈ ಜಗತ್ತಿನಲ್ಲಿ ಅಂದುಕೊಂಡಿದ್ದೆ. ಆದರೆ [ಈ] ಜಗತ್ತು ಅಷ್ಟು ದೊಡ್ಡದಲ್ಲ ಅಂತ ಈಗ ಗೊತ್ತಾಗಿ[ದೆ.] ಅಯ್ಯೋ, ಆತ ಫೋನ್ ಮಾಡುತ್ತಿಲ್ಲ ಯಾಕೆ? ಅವ[ನು] ಮಾಡಿದರೆ ನನಗೆ ಬೇಜಾರಾಗಿರುವುದನ್ನು ಹೇಳುವುದಿ[ಲ್ಲ.] ಅವನಿಗಿಷ್ಟವಾಗುವಂತೆ ಸಂತೋಷದಿಂದ, ನಗುನಗು[ತ್ತಾ] ಇರುತ್ತೇನೆ. ಅವನು ಫೋನ್ ಮಾಡಲಿ, ಅಷ್ಟು ಸಾಕು.

ಅವನು ಫೋನ್ ಮಾಡಲು ಪ್ರಯತ್ನಿಸಿರಬೇಕು. ಆದರೆ ಹಲವೊಮ್ಮೆ ಆಗುತ್ತಲ್ಲ, ಹಾಗೆ ಆತನಿಗೆ ಸಂಪರ್ಕ ಸಿಕ್ಕಿಲ್ಲದಿರಬಹುದು. ಅಥವಾ ಅವನಿಗೆ ಏನಾದರೂ ಆಗಿರಬಹುದೇ? ಇಲ್ಲ, ಅವನಿಗೆ ಏನೂ ಆಗಿರುವುದಿಲ್ಲ. ಇಲ್ಲ, ಹಾಗೆಲ್ಲ ನಾನು ಅವನ ಬಗ್ಗೆ ಯೋಚಿಸಬಾರದು. ದಾರಿಯಲ್ಲಿ ಅಪಘಾತವಾಗಿ ಆತ ಸತ್ತ ಹೆಣವಾಗಿ ಬಿದ್ದಿರುವುದನ್ನೂ ನಾನು ಕಲ್ಪಿಸಿಕೊಳ್ಳಬಾರದು. ಹಾಳಾದವನು, ಸತ್ತು ಹೋಗಲಿ. ಛೀ, ಅದೆಂತಹ ಕೆಟ್ಟ ಆಶೆ. ಆದರೂ ಎಂಥ ಸೊಗಸಾದ ಆಶೆ. ಅವನು ಸತ್ತರೆ ಅವನು ನನ್ನವನಾಗಿಯೇ ಇರುತ್ತಾನೆ, ಆಗ ಅವನ ಬಗ್ಗೆ ಕೆಟ್ಟದ್ದನ್ನು ಯೋಚಿಸುವ ಬದಲಾಗಿ, ನಾವಿಬ್ಬರು ಕಳೆದಿರುವ ಸುಂದರ ಸಮಯಗಳ ಬಗ್ಗೆಯೇ ಯೋಚಿಸುತ್ತೇನೆ. ಆ ನೆನಪುಗಳು ಎಷ್ಟು ಆಹ್ಲಾದಕರವಾಗಿರುತ್ತವೆ. ಅವನು ಸಾಯಲಿ. ಸಾಯಿ, ಸಾಯಿ, ಸಾಯಿ.



ಅವನು ಫೋನ್ ಮಾಡಲು ಪ್ರಯತ್ನಿಸಿರಬೇಕ[ು.] ಆದರೆ ಹಲವೊಮ್ಮೆ ಆಗುತ್ತಲ್ಲ, ಹಾಗೆ ಆತನಿಗೆ ಸಂಪ[ರ್ಕ] ಸಿಕ್ಕಿಲ್ಲದಿರಬಹುದು ಅಥವಾ ಅವನಿಗೆ ಏನಾದರೂ ಆಗಿ[ರ]ಬಹುದೇ? ಇಲ್ಲ, ಅವನಿಗೆ ಏನೂ ಆಗಿರುವುದಿ[ಲ್ಲ.] ಇಲ್ಲ, ಹಾಗೆಲ್ಲ ನಾನು ಅವನ ಬಗ್ಗೆ ಯೋಚಿಸಬಾರದ[ು.] ದಾರಿಯಲ್ಲಿ ಅಪಘಾತವಾಗಿ ಆತ ಸತ್ತ ಹೆಣವಾ[ಗಿ] ಬಿದ್ದಿರುವುದನ್ನೂ ನಾನು ಕಲ್ಪಿಸಿಕೊಳ್ಳಬಾರದು. ಹಾಳಾ[ದ]ವನು, ಸತ್ತು ಹೋಗಲಿ. ಛೀ, ಅದೆಂತಹ ಕೆಟ್ಟ ಆ[ಶೆ.] ಆದರೂ ಎಂಥ ಸೊಗಸಾದ ಆಶೆ. ಅವನು ಸತ್ತರೆ ಅವ[ನು] ನನ್ನವನಾಗಿಯೇ ಇರುತ್ತಾನೆ, ಆಗ ಅವನ ಬಗ್ಗೆ ಕೆಟ್ಟದ್ದ[ನ್ನು] ಯೋಚಿಸುವ ಬದಲಾಗಿ, ನಾವಿಬ್ಬರು ಕಳೆದಿರುವ ಸುಂದ[ರ] ಸಮಯಗಳ ಬಗ್ಗೆಯೇ ಯೋಚಿಸುತ್ತೇನೆ. ಆ ನೆನಪುಗ[ಳು] ಎಷ್ಟು ಆಹ್ಲಾದಕರವಾಗಿರುತ್ತವೆ. ಅವನು ಸಾಯಲಿ. ಸಾಯ[ಿ,] ಸಾಯಿ, ಸಾಯಿ.

ಛೀ, ಇದೆಲ್ಲ ಎಷ್ಟು ಸಿಲ್ಲಿ, ಫೋನ್ ಮಾಡುತ್ತೇ[ನೆ] ಎಂದ ಸಮಯಕ್ಕೆ ಫೋನ್ ಮಾಡಲಿಲ್ಲ ಎಂಬ ಸ[ಣ್ಣ] ಕಾರಣಕ್ಕೆ ಆತ ಸಾಯಲಿ ಎಂದು ಆಶಿಸುವುದು ಎಂ[ಥ] ದುಷ್ಟತನ. ಪ್ರಾಯಶಃ ಈ ಗಡಿಯಾರ ತುಂಬಾ ಮುಂ[ದೆ] ಓಡುತ್ತಿರಬಹುದು. ಆತ ಫೋನ್ ಮಾಡಲು ತಡಮಾ[ಡ]ದಿರಬಹುದು. ಆಫೀಸಿನಿಂದ ನೇರವಾಗಿ ಮನೆಗೆ ಹೋ[...]

ಅಧಿಕಾರ ಯಾವಾಗಲೂ ನೈತಿಕತೆ ಹೊಂದಿಲ್ಲದಿರುವವರನ್ನು ಆಕರ್ಷಿಸುತ್ತೆ - ಆಲ್ಬರ್ಟ್ ಐನ್‌ಸ್ಟೀನ್

ಅಲ್ಲಿಂದಲೇ ಫೋನ್ ಮಾಡಬಹುದು. ಅಥವಾ ಆತ ಬ್ಯುಸಿ ಆಗಿದ್ದು ನಾನೇ ಫೋನ್ ಮಾಡಲಿ ಅಂತ ಕಾಯುತ್ತಿರಬಹುದು. ಹೌದು ನಾನೇ ಯಾಕೆ ಫೋನ್ ಮಾಡಬಾರದು?

ಇಲ್ಲ, ಮಾಡಬಾರದು, ಮಾಡಬಾರದು, ಮಾಡಬಾರದು. ಓ ದೇವರೇ, ನಾನು ಫೋನ್ ಮಾಡದಂತೆ ನನ್ನನು ತಡೆದು ಹಿಡಿ. ಅವನೇ ಮಾಡುವಂತೆ ಮಾಡು.

ಆತ ನನಗೆ ಫೋನ್ ಕರೆ ಮಾಡುವಂತೆ ನೀನು ಮಾಡುತ್ತಿಲ್ಲ ಯಾಕೆ. ನೋಡು, ನಿನಗೂ ಗೊತ್ತು, ನನಗೂ ಗೊತ್ತು ನಾನು ನೋವನ್ನು ಅನುಭವಿಸುತ್ತಿದ್ದೇನೆ ಅಂತ ಅವನಿಗೆ ಗೊತ್ತಾದರೆ ಆತ ಖಂಡಿತವಾಗಿಯೂ ಫೋನ್ ಮಾಡುತ್ತಾನೆ. ನನ್ನ ನೋವನ್ನು ಅವನಿಗೆ ತಿಳಿಸು. ನನ್ನ ನೋವನ್ನು ಕಡಿಮೆ ಮಾಡು ಅಂತ ನಾನು ನಿನ್ನನ್ನು ಕೇಳುತ್ತಿಲ್ಲ, ಅದು ನಿನ್ನಿಂದ ಸಾಧ್ಯವೂ ಇಲ್ಲ, ಆದರೆ ಈ ಜಗತ್ತನ್ನೇ ಸೃಷ್ಟಿಸಿದ ನಿನಗೆ ನನ್ನ ನೋವಿನ ಬಗ್ಗೆ ಅವನಿಗೆ ತಿಳಿಸಲಾಗುವುದಿಲ್ಲವೇ? ಇದು ನಿನ್ನಿಂದ ಸಾಧ್ಯವೋ ಇಲ್ಲವೋ ಎಂಬುದನ್ನಾದರೂ ನನಗೆ ತಿಳಿಸು. ನಾನು ಆಶಿಸುತ್ತಾ ಇರುವಂತೆ ಮಾಡಬೇಡ, ನಾನು ಸುಳ್ಳು ನಿರೀಕ್ಷೆಗಳಲ್ಲಿ ಬದುಕುವಂತೆ ಮಾಡಬೇಡ. ದಯವಿಟ್ಟು ದೇವರೆ, ನನಗೆ ಸಹಾಯ ಮಾಡು.

ಇಲ್ಲ, ನಾನು ಅವನಿಗೆ ಫೋನ್ ಮಾಡುವುದಿಲ್ಲ, ಎಂದೆಂದೂ ಮಾಡುವುದಿಲ್ಲ, ಆತ ಹಾಳಾಗಿ ಹೋಗಲಿ. ಇದಕ್ಕೆ ನಿನ್ನ ಸಹಾಯವೇನೂ ಬೇಡ ದೇವರೆ, ನನಗೆ ಅಷ್ಟು ತಾಕತ್ತಿದೆ. ನಾನು ಅವನಿಗೆ ಬೇಕಿದ್ದರೆ ಆತ ಬರುತ್ತಿದ್ದ. ನಾನು ಎಲ್ಲಿದ್ದೇನೆ ಅಂತ ಅವನಿಗೆ ಗೊತ್ತು. ನಾನು ಅವನಿಗಾಗಿ ಇಲ್ಲಿ ಕಾಯುತ್ತಿದ್ದೇನೆ ಅಂತಲೂ ಅವನಿಗೆ ಚೆನ್ನಾಗಿ ಗೊತ್ತು. ಅಲ್ಲ, ನಾವು ಅವರನ್ನು ಪ್ರೀತಿಸುತ್ತೇವೆ ಅಂತ ಗೊತ್ತಾದ ಮೇಲೆ ಅವರೇಕೆ ನಮ್ಮನ್ನು ದ್ವೇಷಿಸಲು ಪ್ರಾರಂಭಿಸುತ್ತಾರೆ?

ನಾನೇ ಆತನಿಗೆ ಫೋನ್ ಮಾಡಬಾರದೇಕೆ? ಇಲ್ಲ, ನಾನು ಮಾಡಬಾರದು. ದೇವರೇ ನನ್ನನ್ನು ಆ ಫೋನ್‌ನಿಂದ ದೂರವಿಡು, ನನ್ನಲ್ಲಿ ಉಳಿದಿರುವ ಸ್ವಲ್ಪ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡು. ಆ ಸ್ವಾಭಿಮಾನ ನನಗೆ ಬೇಕು, ಕೊನೆಗೆ ಅದೊಂದೇ ನನ್ನೊಂದಿಗೆ ಉಳಿಯುವುದು.

ಹೋ, ಅವನೇ ನನ್ನೊಂದಿಗಿಲ್ಲದಿದ್ದರೆ ಸ್ವಾಭಿಮಾನ ಕಟ್ಟಿಕೊಂಡು ಏನಾಗಬೇಕಿದೆ?

ಸ್ವಾಭಿಮಾನ!

ಎಷ್ಟು ಸಿಲ್ಲಿ ಮತ್ತು ಕಚಡಾ ಅದು. ಸ್ವಾಭಿಮಾನ ಇಲ್ಲದಿರುವುದೇ ನಿಜವಾದ ಸ್ವಾಭಿಮಾನ. ಅಲ್ಲ, ಅವನೊಂದಿಗೆ ಮಾತನಾಡಬೇಕು ಎಂಬ ಆಶೆಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ, ಆದರೆ ಅದು ಸತ್ಯ ನನಗೊತ್ತು. ನಾನು ಪುಟ್ಟ ಸ್ವಾಭಿಮಾನವನ್ನೂ ಮೀರಿದ ದೊಡ್ಡ ವ್ಯಕ್ತಿಯಾಗಿರುತ್ತೇನೆ.

ದೇವರೇ ನನ್ನನ್ನು ಆ ಫೋನ್‌ನಿಂದ ದೂರವಿಡು.

ಅಲ್ಲ, ಸ್ವಾಭಿಮಾನಕ್ಕೂ ಇದಕ್ಕೂ ಏನು ಸಂಬಂಧ? ಇಂಥ ಚಿಕ್ಕ ವಿಷಯಕ್ಕೆಲ್ಲ ಸ್ವಾಭಿಮಾನದ ಹಂಗೇಕೆ? ನಾನೇ ಆತ ಹೇಳಿದ್ದನ್ನು ತಪ್ಪಾಗಿ ಕೇಳಿಸಿಕೊಂಡಿರಬಹುದು. ಆತ "ಐದು ಗಂಟೆಗೆ ಫೋನ್ ಮಾಡು ಡಾರ್ಲಿಂಗ್" ಅಂದಿದ್ದಿರಬಹುದು. ನಾನೇ ಸ್ಪಷ್ಟವಾಗಿ ಕೇಳಿಸಿಕೊಂಡಿಲ್ಲದಿರಬಹುದು. ಹೌದು ಆತ ನನಗೇ ಫೋನ್ ಮಾಡಲು ಹೇಳಿದ್ದ, ಖಂಡಿತವಾಗಿಯೂ. ಅಯ್ಯೋ ದೇವರೇ, ನಾನು ಹೀಗೆಲ್ಲ ಭ್ರಮಿಸದಂತೆ ನನ್ನನ್ನು ತಡೆ.

ನಾನು ಸುಮ್ಮನೆ ಏನನ್ನಾದರೂ ಓದುತ್ತಾ ಇರಬೇಕೆನಿಸುತ್ತಿದೆ. ಸುಮ್ಮನೆ ತಟಸ್ಥಳಾಗಿ ಕೂತು ಪುಸ್ತಕಗಳನ್ನು ಓದಬೇಕು. ಆದರೆ ಎಲ್ಲ ಪುಸ್ತಕಗಳೂ ಪ್ರೇಮ ಕತೆಗಳೇ ಆಗಿವೆಯಲ್ಲ, ಯಾರು ಯಾರನ್ನು ಎಷ್ಟು ಪ್ರೀತಿಸಿದರು ಎಂಬುದನ್ನೆ ಕುರಿತದ್ದಾಗಿವೆಯಲ್ಲ, ಅಲ್ಲ, ಅದರ ಬಗ್ಗೆ ಅವನ್ನೆಲ್ಲ ಬರೆದದ್ದು ಯಾಕೆ? ಅದು ನಿಜವಲ್ಲ ಎಂದು ಗೊತ್ತಿದ್ದರೂ? ಅದೊಂದು ಭ್ರಮೆ ಎಂದು ಗೊತ್ತಿದ್ದರೂ? ಅವುಗಳು ನೋವನ್ನು ಹೆಚ್ಚಿಸುತ್ತವೆ ಎಂದು ಗೊತ್ತಿದ್ದರೂ ಅಂತಹ ಸುಳ್ಳನ್ನ ಯಾಕೆ ಬರೆದಿದ್ದಾರೆ?

ದೇವರೇ, ಆತ ನನಗೆ ಫೋನ್ ಮಾಡುವಂತೆ ಏನು ಮಾಡಲಾರೆಯಾ? ನಿಜವಾಗಲೂ? ಸ್ವಲ್ಪ ದಯೆ ತೋರೆಯಾ? ಸಾಧ್ಯವಿಲ್ಲವಾ? ಈ ಕ್ಷಣವೇ ಆತ ಫೋನ್ ಮಾಡಬೇಕೆಂದೇನಿಲ್ಲ, ಸ್ವಲ್ಪ ಹೊತ್ತಿನ ನಂತರವಾದರೂ ಸರಿಯಷ್ಟೆ, ನಾನು ಮತ್ತೆ ಐದು ಬಾರಿ ಐನೂರರ ತನಕ ಎಣಿಸುತ್ತೇನೆ. ನಿಧಾನವಾಗಿ, ಲೆಕ್ಕ ತಪ್ಪದಂತೆ. ದಯವಿಟ್ಟು ಆತ ಫೋನ್ ಮಾಡುವಂತೆ ಮಾಡು. ಪ್ಲೀಸ್.

ಒಂದು, ಎರಡು, ಮೂರು, ನಾಲ್ಕು, ●




ಅಮ್ಮ ಹೊರಿಸಿದ ಭಾರ

ನನಗೆ ರಾಜನಲ್ಲಿ ಪ್ರೀತಿಯೇ ಇಲ್ಲದ ಕಾರಣ ನಾನು ಅವನನ್ನು ಕರೆದುಕೊಂಡು ಬರಲಿಲ್ಲವೆಂಬ ಆರೋಪವನ್ನೂ ಕೆಲವೊಮ್ಮೆ ಆಕೆ ನನ್ನ ಮೇಲೆ ಹೊರಿಸುತ್ತಿದ್ದಳು. ಆಕೆಯೊಂದಿಗೆ ಮತ್ತು ರಾಜನೊಂದಿಗೆ ಒಂದಿಷ್ಟೂ ಸ್ನೇಹವಿಲ್ಲದ ಮನುಷ್ಯ ನಾನೆಂದು ಆಕೆ ನಮ್ಮ ಸಂಬಂಧಿಕರು ಮತ್ತು ನಮ್ಮನ್ನು ಭೇಟಿಯಾಗಲು ಬಂದವರೊಡನೆ ಹೇಳಿಕೊಳ್ಳುತ್ತಿದ್ದಳು.

ರಾಜನ ಅಮ್ಮ ಮಾನಸಿಕ ರೋಗಿಯಾದುದು ರಾಜನ ದುರಂತದ ಬಳಿಕವೇ ಎಂಬ ಪ್ರಶ್ನೆಯನ್ನು ಹಲವು ಬಾರಿ ನಾನು ಎದುರಿಸಬೇಕಾಯಿತು. ಆದರೆ ರಾಜನ ಕಣ್ಮರೆಗೆ ಮೊದಲೇ ರಾಧೆಯಲ್ಲಿ ಸಣ್ಣದಾಗಿ ಮಾನಸಿಕ ಅಸ್ವಸ್ಥತೆ ಕಾಣಿಸಿಕೊಂಡಿತ್ತು. ನನ್ನ ಹಿರಿಯ ಮಗಳು ರಮಾ ಹುಟ್ಟಿದ 15ನೇ ತಿಂಗಳಲ್ಲಿ ರಾಧ ಪ್ರಥಮ ಬಾರಿ ಮಾನಸಿಕ ಅಸ್ವಸ್ಥತೆಗೊಳಗಾದಳು. ಅಂದು ನೀಡಿದ ಷಾಕ್ ಟ್ರೀಟ್‌ಮೆಂಟನಿಂದ ಅವಳು ಗುಣಮುಖಳಾದಳು.

ಅಂದು ಏಳು ಬಾರಿ ಷಾಕ್ ನೀಡಲಾಗಿತ್ತು. ಬಳಿಕ ರಾಜ ಹುಟ್ಟಿದನು. ಆತ ಹುಟ್ಟಿದ ಬಳಿಕ ಮೂರನೇ ಮಗು ಚಾಂದ್‌ಳನ್ನು ಹೊತ್ತು ಗರ್ಭಿಣಿಯಾದಾಗ ರಾಧ ಮತ್ತೊಮ್ಮೆ ಮಾನಸಿಕ ದೌರ್ಬಲ್ಯ ತೋರಿದಳು. ಆದರೆ ಗರ್ಭಿಣಿಯಾಗಿರುವುದರಿಂದ ಷಾಕ್ ನೀಡಲು ಸಾಧ್ಯವಿಲ್ಲವೆಂದು ವೈದ್ಯರು ತಿಳಿಸಿದರು. ಹಾಗಾಗಿ ಆಯುರ್ವೇದ ಚಿಕಿತ್ಸೆ ನೀಡಲಾಯಿತು. ಆಕೆ ಕೊಂಚ ಚೇತರಿಸಿಕೊಂಡಳು. ಹೆರಿಗೆಯ ಬಳಿಕ ಮತ್ತೊಮ್ಮೆ ಅಲೋಪತಿ ಚಿಕಿತ್ಸೆಗೆ ಕರೆದೊಯ್ದಾಗ ಷಾಕ್ ಪರಿಣಾಮಕಾರಿಯಾಗಲಿಲ್ಲ. **'She had become shock proof'** ಎಂಬುದು ಡಾಕ್ಟರ್ ಅಭಿಪ್ರಾಯವಾಗಿತ್ತು. ಆ ಬಳಿಕ ಚಿಕಿತ್ಸೆ ಮುಂದುವರೆಯುತ್ತಲೇ ಇತ್ತು. ರಾಜನ ದುರಂತ ಆಕೆಗೆ ತಿಳಿಯಲಿಲ್ಲ. ಕೋಝಿಕೋಡಿನಿಂದ ನಾನು ಎರ್ನಾಕುಲಂಗೆ ಬಂದಾಗಲೆಲ್ಲ ಆಕೆ ರಾಜನನ್ನು ಕೇಳುತ್ತಲೇ ಇದ್ದಳು. ನಾನು ಹೇಳುವ ಸುಳ್ಳುಗಳು ಆಕೆಯನ್ನು ಮತ್ತಷ್ಟು ಅಸ್ವಸ್ಥಳನ್ನಾಗಿಸುತ್ತಿತ್ತು. ಸ್ನೇಹಿತರೊಡನೆ ಹಾಗೂ ಭೇಟಿಗಾಗಿ ಬಂದವರೊಡನೆ ಅವಳು ತುಂಬಾ ಹಟ ಮಾಡತೊಡಗಿದಳು.

ನನ್ನ ಮೂವರು ಮಕ್ಕಳಲ್ಲಿ ಆಕೆಗೆ ರಾಜನಲ್ಲಿ ಅಧಿಕ ವಾತ್ಸಲ್ಯವಿತ್ತೇನೋ ಎಂದೆನಿಸುತ್ತದೆ. ರಾಜನು ಚೆನ್ನಾಗಿ ಹಾಡುತ್ತಿರುವುದೇ ಅದಕ್ಕೆ ಕಾರಣವಾಗಿತ್ತು. ರಾಧಾ ಕೂಡಾ ಚೆನ್ನಾಗಿ ಹಾಡುತ್ತಿದ್ದಳು. ಕಾಲೇಜಿನಿಂದ ಬಂದಾಗಲೆಲ್ಲ ರಾಜನು ಹಾಡುತ್ತಿದ್ದ ಹಾಡುಗಳು ಆಕೆಯಲ್ಲಿ ಆಹ್ಲಾದವನ್ನುಂಟುಮಾಡುತ್ತಿತ್ತು. ರಾಜನು ಆತನ ತಾಯಿ ಹೇಳಿದಾಗಲ್ಲದೆ ಬೇರಾರೂ ಹೇಳಿದಾಗಲೂ ಹಾಡಿದ್ದನ್ನು ನಾನು ಕೇಳಿಲ್ಲ. ರಜಾ ದಿನಗಳಲ್ಲಿ ತಾಯಿ ಮತ್ತು ಮಗ ನಡೆಸುವ ಕಛೇರಿ ಕೆಲವೊಮ್ಮೆ ಅರ್ಧ ರಾತ್ರಿಯವರೆಗೂ ಮುಂದುವರಿಯುತ್ತಿತ್ತು. ರಾಜನಿಗಾಗಿ ಹೊಸ ಹಾಡುಗಳನ್ನು ಕಲಿತು ಹಾಡಲೂ ಕೂಡಾ ರಾಧ ಶ್ರಮಿಸುತ್ತಿದ್ದಳು. ಇದಲ್ಲದೆ ರಾಜನು ಗಂಡು ಹುಡುಗನೆಂಬ ವ್ಯಾಮೋಹ ಕೂಡಾ ರಾಜನಲ್ಲಿ ಪ್ರತ್ಯೇಕ ವಾತ್ಸಲ್ಯ ತೋರಲು ಕಾರಣವಾಗಿತ್ತು.



ಕಂದೆಯ ನೆನಪುಗಳು 2

■ ಈಚಾರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕರ್

ರಾಜನ ಮುಂದುವರಿದ ಅನುಪಸ್ಥಿತಿ ರಾಧೆಯನ್ನು ಪ್ರತಿದಿನವೆಂಬಂತೆ ದುರ್ಬಲಗೊಳಿಸುತ್ತಿತ್ತು. ಅದರ ಎಲ್ಲಾ ತೊಂದರೆಗಳನ್ನೂ ನಾನು ಸಹಿಸಿಕೊಳ್ಳಬೇಕಾಗಿತ್ತು. ಕೋಝಿಕೋಡಿನಿಂದ ನಾನು ಬರುವಾಗಲೆಲ್ಲ, ನನ್ನೊಡನೆ ರಾಜನಿದ್ದಾನೆಯೇ ಎಂದು ಮೇರೆ ಮೀರಿ ಕಾತುರದಿಂದ ಆಕೆ ನೋಡುತ್ತಿದ್ದಳು. ನನ್ನೊಡನೆ ರಾಜನಿಲ್ಲದ್ದನ್ನು ಕಂಡು ಆಕೆಯ ಮುಖ ನಿರಾಶೆಯಿಂದ ಕಳೆಗುಂದುತ್ತಿತ್ತು. ಕ್ರಮೇಣ ಆಕೆಯ ಮುಖದಲ್ಲಿ ಹರಡಿದ ನಿರಾಶಾಭಾವ ದ್ವಿಗುಣಗೊಳ್ಳುತ್ತಿತ್ತು. ಆಕೆ ಯಾರೊಡನೆಯೂ ಹೆಚ್ಚು ಮಾತನಾಡದಾದಳು.

ನನಗೆ ರಾಜನಲ್ಲಿ ಪ್ರೀತಿಯೇ ಇಲ್ಲದ ಕಾರಣ ನಾನು ಅವನನ್ನು ಕರೆದುಕೊಂಡು ಬರಲಿಲ್ಲವೆಂಬ ಆರೋಪವನ್ನೂ ಕೆಲವೊಮ್ಮೆ ಆಕೆ ನನ್ನ ಮೇಲೆ ಹೊರಿಸುತ್ತಿದ್ದಳು. ಆಕೆಯೊಂದಿಗೆ ಮತ್ತು ರಾಜನೊಂದಿಗೆ ಒಂದಿಷ್ಟೂ ಸ್ನೇಹವಿಲ್ಲದ ಮನುಷ್ಯ ನಾನೆಂದು ಆಕೆ ನಮ್ಮ ಸಂಬಂಧಿಕರು ಮತ್ತು ನಮ್ಮನ್ನು ಭೇಟಿಯಾಗಲು ಬಂದವರೊಡನೆ ಹೇಳಿಕೊಳ್ಳುತ್ತಿದ್ದಳು.

ಇದರೆಡೆಯಲ್ಲಿ ರಾಜನ ಸ್ನೇಹಿತರ ಮದುವೆಗಳಾದುವು. ಒಂದು ದಿವಸ ಎರ್ನಾಕುಲಂ ತಲುಪಿದಾಗ ಆಕೆ ನನ್ನೊಡನೆ ಒಂದು ಪ್ರಶ್ನೆ ಕೇಳಿದಳು. "ಅಲ್ಲಾ, ರಾಜನ ಗೆಳೆಯರೆಲ್ಲರ ಮದುವೆಯಾಯಿತಲ್ಲ? ನೀವ್ಯೋರ್ವ ತಂದೆಯಲ್ಲವಾ? ಅವನಿಗೊಂದು ಮದುವೆ ಮಾಡಬೇಕೆಂಬ ಯೋಚನೆಯೇನಾದರೂ ನಿಮಗಿದೆಯೇ?"

ನನ್ನ ಮಗ ಮೃತಪಟ್ಟನಲ್ಲಾ ಎಂಬ ಒಂದು ವಾಕ್ಯ ನನ್ನ ಹೃದಯದಲ್ಲೆಲ್ಲೋ ಸಿಕ್ಕಿಕೊಂಡಿತು. ಆಕೆಯೊಡನೆ ಮತ್ತು ಇಡೀ ಜಗತ್ತಿನೊಡನೆ ಒಂದು ನಿಮಿಷ ನನಗೆ ದ್ವೇಷವುಂಟಾಯಿತು. ಥಟ್ಟನೆ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು ನಾನಂದೆ, "ರಾಜನ ವಿವಾಹಾಲೋಚನೆಯ ಕುರಿತು ನಾನು ವಿಚಾರಿಸುತ್ತಿದ್ದೇನೆ. ಮತ್ತೇ... ಒಳ್ಳೆಯ ಒಂದು ಹುಡುಗಿ ದೊರೆಯುವುದು ಅಷ್ಟು ಸುಲಭವಾ ರಾಧಾ?" ನನ್ನ ಮಾತುಗಳಿಗೆ ಅಪನಂಬಿಕೆ ತುಂಬಿದ ಒಂದು ನೋಟವಾಗಿತ್ತು ಅವಳ ಉತ್ತರ.

ರಾಜನ ಗೆಳೆಯರು ನಮ್ಮನ್ನು ನೋಡಲು ಬಂದರೆ "ರಾಜನನ್ನು ಕಂಡಿದ್ದೀರಾ?" ಎಂಬ ಪ್ರಶ್ನೆ ಎತ್ತುತ್ತಲೇ ಇದ್ದಳು ಆಕೆ. ಆಕೆಯನ್ನೆದುರಿಸಲು ಸಾಧ್ಯವಾಗದೆ ರಾಜನ ಗೆಳೆಯರು ನಮ್ಮಲ್ಲಿಗೆ ಬರುವುದನ್ನೇ ನಿಲ್ಲಿಸಿದರು.

ನಾನು ಎರ್ನಾಕುಲಂನಿಂದ ಹಿಂತಿರುಗುವಾಗಲೆಲ್ಲ ಆಕೆ ನನ್ನೊಡನೆ ಹಣ ಕೇಳುತ್ತಿದ್ದಳು. ಹತ್ತು ರೂಪಾಯಿ ಆಕೆಯ ಅಗತ್ಯವಾಗಿತ್ತು. ಈ ಹಣದಿಂದ ಬಿಸ್ಕೆಟ್ ಕೊಂಡುಕೊಂಡು ರಾಜನಿಗಾಗಿ ತೆಗೆದಿಡುತ್ತಿದ್ದಳು. ಅದು ಹಾಳಾದ ಬಳಿಕವಷ್ಟೆ ಅದನ್ನು ಇತರ ಮಕ್ಕಳಿಗೆ ಕೊಡುತ್ತಿದ್ದಳು. ಅವರು ಅದನ್ನು ತಾಯಿಗೆ ಕಾಣದಂತೆ ಮನೆಯ ಹಿಂಭಾಗದಲ್ಲಿ ಎಸೆಯುತ್ತಿದ್ದರು. ಚಿಕ್ಕ ಚಿಕ್ಕ ನಾಣ್ಯಗಳನ್ನೂ ಆಕೆ ರಾಜನಿಗಾಗಿ ಶೇಖರಿಸಿ ತನ್ನ ಪೆಟ್ಟಿಗೆಯಲ್ಲಿ ತೆಗೆದಿಡುತ್ತಿದ್ದಳು. ಈ ಪೆಟ್ಟಿಗೆಯನ್ನು ಯಾರೂ ತೆರೆಯುವುದು ಅವಳಿಗೆ ಇಷ್ಟವಾಗುತ್ತಿರಲಿಲ್ಲ. ಈ ವಿಷಯದಲ್ಲಿ ಅವಳು ಯಾರನ್ನೂ ನಂಬುತ್ತಿರಲಿಲ್ಲ.

ರಾಜನ ಕಣ್ಮರೆಯನ್ನು 40 ದಿನಗಳವರೆಗೆ ನಾನು ಮನೆಯವರಿಂದ ಮರೆಮಾಚಿದೆ. ಕರುಣಾಕರನನ್ನು ಭೇಟಿ ಮಾಡಿ ಹಿಂತಿರುಗುವಾಗಲೂ ನಾನು ಮನೆಗೆ ಹೋಗಲಿಲ್ಲ.

2000ದ ಮಾರ್ಚ್ 13ರಂದು ರಾಜನ ತಾಯಿ ನನ್ನನ್ನಗಲಿದಳು. ರಾಧೆಯ ಮರಣದ ಕೊನೆಯ ವಾರ ನಾನು ಆಕೆಯನ್ನು ನೋಡಲು ಹೋಗಿದ್ದೆ. ಸಾಯಂಕಾಲ ನಾನು ತ್ರಿಚೂರಿಗೆ ಹೊರಟಾಗ ಆಕೆ ಹಾಸಿಗೆಯಲ್ಲಿ ಮಲಗಿಕೊಂಡು ನನ್ನ ಕೈಹಿಡಿದುಕೊಂಡಳು. ಆಕೆಯ ಕಣ್ಣುಗಳಲ್ಲಿ ದೈನ್ಯತೆಯ ಒಂದು ಅಪೇಕ್ಷಾಭಾವ ತುಂಬಿಕೊಂಡಿತ್ತು.

"ಇನ್ನು ಬರುವಾಗ, ಒಮ್ಮೆ ನೋಡಲು ರಾಜನನ್ನು ಕರೆದುಕೊಂಡು ಬರುವಿರಾ?"

ನಾನಾಕೆಯ ಮುಖದೆಡೆಗೆ ನೋಡಲಿಲ್ಲ, ಆಕೆಯ ಮುಖ ನೋಡಿ ಸುಳ್ಳು ಹೇಳುತ್ತಿರುವಾಗ ನಾನನುಭವಿಸುತ್ತಿದ್ದ ಆತ್ಮನಿಂದೆ ನನ್ನನ್ನು ಬೇಟೆಯಾಡಲಾರಂಭಿಸಿ ವರ್ಷಗಳೇ ಕಳೆದುಹೋಗಿತ್ತು.

ಈ ಭೇಟಿಯ ಬಳಿಕ ಐದು ದಿವಸಗಳೊಳಗೆ ನಾನು ಮತ್ತೊಮ್ಮೆ ರಾಧೆಯ ಬಳಿಗೆ ತಲುಪಿದೆ. ಅವಳ ತೀರಾ ಸಮೀಪದಲ್ಲಿ ಮರಣ ಸಿದ್ಧವಾಗಿ ನಿಂತಿತ್ತು. ಆದರೆ ರಾಧೆಗೆ ಎಲ್ಲವೂ ಚೆನ್ನಾಗಿ ನೆನಪಿತ್ತು. ಆಕೆ ನನ್ನನ್ನು ಸಮೀಪಕ್ಕೆ ಕರೆದಳು. "ನಾನು ಒಂದು ಜವಾಬ್ದಾರಿ ನೀಡಿದರೆ ನೆರವೇರಿಸುವಿರಾ?" ಎಂದು ಕೇಳಿದಳು. "ಖಂಡಿತ" ನಾನಂದೆ. ಆಗ ಅವಳು ಶೇಖರಿಸಿದ್ದ ಚಿಲ್ಲರೆ ನಾಣ್ಯಗಳ ಕಟ್ಟನ್ನು ನನ್ನ ಕೈಯಲ್ಲಿಟ್ಟು, "ಇದನ್ನು ನಮ್ಮ ಮಗ ರಾಜನಿಗೆ ಕೊಡಬೇಕು. ನಿಮ್ಮಲ್ಲಿ ಮಾತ್ರ ನನಗೆ ನಂಬಿಕೆ ಇದೆ" ಎಂದಳು. ಆಮೇಲೆ ಅವಳು ಯಾವ ಮಾತುಗಳನ್ನೂ ಆಡಲಿಲ್ಲ.

ಮರಣದ ತಣ್ಣಗಿನ ಸ್ಪರ್ಶ ಅವಳನ್ನು ಸ್ಪರ್ಶಿಸಲಾರಂಭಿಸಿತ್ತು. ರಾಧಳ ಮರಣದ ಮರುದಿನ ಬೆಳಿಗ್ಗೆ ನಾನು ಒರಗು ಕುರ್ಚಿಯಲ್ಲಿ ಕುಳಿತು ತೂಕಡಿಸಿದೆ. ಆಗಲೂ ರಾಜನ ಅಮ್ಮ ಒಪ್ಪಿಸಿದ ಚಿಲ್ಲರೆ ನಾಣ್ಯಗಳ [illegible] ಕೈಯಲ್ಲಿತ್ತು.

(ಮುಂದುವರೆಯುವುದು)

ಅಂಗರೆ ಕರ್ನಾಟಕದ ದೇವರುಗಳಿಗೆ ಪವರ್‍ರಿಲ್ಲ ಅಂದಂಗಾಯ್ತು

ಬಿತ್ತಿದ್ದ ರಾಗಿ ಮೊಳಕೆಯೊಡೆದು, ಪೈರು ಅಂಗುಲ ದುದ್ದ ಬೆಳೆಯುವಷ್ಟರಲ್ಲಿ ಮಳೆ ಕಾಣದೆ ಸೊರಗಿ ಹೋಗಿದ್ದವು. ಇದನ್ನು ನೋಡಲಾಗದ ಕಾಳಮಾವ ಹೊಲದ ಕಡೆ ಹೋಗಲಾರದ ಹೋಟೆಲಿನಲ್ಲೇ ಕೂತು.

"ದೇಶದ ತುಂಬ ಮಳೆಯಾಗಿ ಪ್ರಳಯಾಯ್ತಾ ಅದೆ. ಅಂತರೆ, ಇಲ್ಲಿ ನೋಡಿದ್ರೆ ಹಿಂಗೆ" ಎಂದು ನಿಟ್ಟುಸಿರುಬಿಟ್ಟ.

"ಮತ್ತೆ ಕುಮಾರಸ್ವಾಮಿ ವಳ್ಳೆ ಮಳೆಯಾಗ್ಯದೆ, ವಳ್ಳೆ ಬ್ಯಳೆನೂ ಬತ್ತದೆ ಅಂದವುನಲ್ಲ ಮಾವ?" ಎಂದಳು ಜುಮ್ಮಿ.

"ವಳ್ಳೆ ಮಳೆ ಎಲ್ಲಿ ಹುಯ್ಯಬೇಕೊ ಅಲ್ಲಿ ಹುಯ್ಯಬೇಕು ಕಂಡ್ಳೆ, ಮಾವ ಮಹಾ ಗಂಡಸಾದ್ರೆ ಸ್ವಸಿಗೆ ಬಂದ ಭಾಗ್ಯೇನೂ ಅನ್ನಂಗೆ, ಮಲ್ನಾಡಲ್ಲಿ ಮಳೆ ಹೂದ್ರೆ ನಮಿಗೆ ಬಂದಿದ್ದೇನೂ?"

ಬಂಗಾರು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅಂಗೆ ಆಯ್ತಪ್ಪ ಈಗ."

"ಇನ್ನ ಮ್ಯಾಲೆ ಮಳೆ ನೀವೇಳಿದಂಗೆ ಹುಯ್ಯದಿಲವಂತೆ ಕಣಮಾವ" ಎಂದ ಉಗ್ರಿ.

"ಇನ್ಯಂಗೂದತ್ಲ?"

"ವರುಸುಕ್ಕೆ ಒಂದು ಸತಿನೊ ಯರಡ ಸತಿನೊ ಹೂದ ವಂಟೋಯ್ತದಂತೆ."

"ಅದ್ಯಾಕ್ಲ?"

"ಪ್ರಪಂಚದ ಜನ್ವಲ್ಲ ಸೇರಿ ಮಳೆಗಾಲ ಕೆಡಿಸಿದ್ದರಂತೆ. ಅದ್ಕೆ ಇನ್ನಮ್ಯಾಲೆ ಕ್ಯರೆ ಕಟ್ಟ ದೊಡ್ಡವ ಮಾಡಿಕಂಡು ನೀರು ನಿಲ್ಲಿಸಿಕಂಡು ಬ್ಯಾರೆ ತರನೇ ಬದುಕು ಮಾಡಕ್ಕೆ ತಯಾರಾಗಬೇಕಂತೆ."

"ತಯಾರಾಗ್ಲಿ ಬುಡು ನಂದಿನ್ನೇನು ಆಯ್ತಲ್ಲ."

"ಇನ್ನು ಅದೆ ಕಣಮಾವ. ದ್ಯಾವೇಗೌಡ್ನೂ ನಿನ್ನಂಗೆ ಅನ್ನಕಂಡು ಸುಮ್ಮನಾಗಕ್ಯಾಯ್ತಿರಲಿಲವೆ. ನೋಡಾಗ್ಲೆ ತಮುಳನಾಡಿನ ದೇವುಸ್ಥಾನ ನ್ಯಲ್ಲ ಸುತ್ತತ ಕುಂತವುನೆ" ಎಂದ ಉಗ್ರಿ.


"ತಮುಳನಾಡು ದೇವುಸ್ಥಾನ ಸುತ್ತತಾಯಿದ್ದನೆ?" ಎಂದು ಸೀರ ಅಚ್ಚರಿಯ ಕಣ್ಣುಬಿಟ್ಟ.

"ಊ ಕಣೊ ಸೀರ ಮಾವ. ಇಲ್ಲಿರೊ ದೇವುರಿಗೆ ಅಂಥಾ ಪವರ್‍ರಿಲ್ಲ, ಅದ್ಕಲ್ಲ ಚೆಕ್ ಮಾಡಿ ಕಂಡೂ ತಮುಳುನಾಡ ದೇವರ ಹಿಡಕಂಡವುನೆ."

"ತಮುಳನಾಡ ದೇವುರ ಪೂಜೆ ಮಾಡೋ ಅಂತ ಕಷ್ಟ ಅವುನಿಗೇನು ಬಂದದ್ಲಾ?" ಎಂದ ಸೀರ.

"ಅಯ್ಯೋ ಅವುನ ಕಷ್ಟ ಸದ್ದಿಕೆ ಯಾರಿಗೂ ಬಂದಿಲ್ಲ, ವತ್ರ್ಯಾಯ್ತು ಅಂದ್ರೆ ಹಿರಿ ಸ್ವಸೆ ಬಂದೂ ನಿನ್ನ ಮಗನ್ನ ಯಾವಾಗ ಮುಖ್ಯಮಂತ್ರಿ ಮಾಡ್ತಿ ಅಂತ ಳಂತೆ. ಆ ಬಾಲಕಿಷ್ಣೇಗೌಡ ಕುಮಾರನ ಪೈಲನ್ಯಲ್ಲ ನೋಡ್ತ ಕುಂತಿದ್ದ. ಅವುನು ಇನ್ನ ಯರಡು ತಿಂಗಳಲ್ಲಿ ನಾನು ನಿರುದ್ಯೋಗಿ ಆಯ್ತಿನಲ್ಲಾ ಅಂತ ಗ್ವಣಗತಾಯಿದ್ದನಂತೆ. ಆ ರಮೇಸ ಅವುನೆದ್ದಿ ಇಬ್ರು ಸೇರಿಕಂಡು ಬ್ಯಾರೇ ಸರಕಾರ ಬಂದ್ರೆ ಗಣಿ ಯಂಗೆ ಆಗಿಲಿ ಅಂದರಂತೆ. ಹಿಂಗಾಗಿ ದ್ಯಾವೇಗೌಡನಿಗೆ ಯುತ್ತಮುಂದಾಗಿ ನೋಡಿದ್ರು ಉತ್ತರ ಕೊಡಕ್ಯಾಗದಂತೆ ಸಮುಸ್ಯೆನೆ ಕಂಡವಂತೆ. ಅದಕೆ ಅವುನು ತಮುಳನಾದಿನ ಪವರ್‌ಪುಲ್ ದೇವುರ ಹುಡಿಕ್ಯಂಡೋಗಿದ್ದನಂತೆ."

"ದೇವರು ಯಲ್ಲ ಕಡೆನೂ ಒಂದೇ ಅಲವೇನ್ಲ?" ಎಂದಳು ಜುಮ್ಮಿ.



"ಇದೇನೇ ಗೊತ್ತಿದ್ದೂ ಗೊತ್ತಿದ್ದು ಹಿಂಗೆ ಮಾತಾಡ್ತಿ ನೀನು, ಇಲ್ಲೆ ಇರೊ ದೇವುರನೆ ನೋಡು. ಒಂದೇ ತರ ಇದ್ದವೆ?"

"ಇಲ್ಲ ಬುಡು."

"ತೂಬಿನ ಕ್ಯರಮ್ಮನಿಗಿಂತ ಜಲ್ದಗ್ಯರಮ್ಮ ಸ್ಟ್ರಾಂಗು ಅವುಳಿಗಿಂತ ಅಟ್ಟಲಕ್ಕಮ್ಮ ಸ್ಟ್ರಾಂಗು. ಇವುರ್ಯಲ್ಲಾರಿಗಿಂತ ಮುತ್ತಿನಮ್ಮ ಇನ್ನು ಸ್ಟ್ರಾಂಗು. ಅಮಾಸೆ ಕತ್ಲೆಲೋ ಕರಿವಾತುನ್ನ ಬಲಿಕೊಟ್ಟು ನಿನ್ನ ವೈರಿ ಹೆಸರೇಳಿದ ಅವುನು ಸತ್ತನಂತೆ" ಎಂದು ಉಗ್ರಿ ವಿವರಿಸುತ್ತಿದ್ದಾಗ ಕಾಣಿಸಿಕೊಂಡ ವಾಟಿಸ್ಸೆ,

"ಲಂಚ ತಿಂದು ಕ್ಯಟ್ಟ ಕ್ಯಲ... ಮಾಡವು ದೇವರೇನೊ ಉಗ್ರಿ?" ಎಂದ.

"ದ್ಯಾವೇಗೌಡನ ಲೋಕದ... ದೇವುರ್ಯಲ್ಲ ಅಂತವೆಯ ಕಣೊ. ಅದ... ಅವುನು ಯಾವಾಗ್ಲು ದೇವರು... ದಿಂಡ್ರು, ಹವನ ಹೋಮ ಅಂ... ತಿರುಗ್ತನೆ."

"ಅವುನು ಏಟೇ ತಿರುಗಾಡಿ... ತಿಪ್ಪರಲಾಗ ಹಾಕಿದ್ರೂ ಬಜೆಪಿಗಳಿಗೆ ಅಧಿಕಾರ ಕೊಡ್ಯೇಬೇಕಾಯ್ತದೆ."

"ಕೊಡ್ದಿಲ್ಲ ಅಂದ್ರೇನು ಮಾಡ್ತರ್ಲ?"

"ಅದೇ ಕಣಕ್ಕ ಮಜ, ಆಗ... ಯಲ್ಲ ಹೋಗಿ ಆ ಜನಾರ್ದನ ರೆಡ್ಡಿ... ರೆಡಿ ಮಾಡಿಸಿರೊ ಲಗ್‌ಜುರಿ ಬಸ್ಸಲ್ಲಿ... ಕೂತಗತರೆ. ಬಾಯಿಗೆ ಬಂದಂಗೆ... ದೇವೇಗೌಡ ಅವುನ ಮಕ್ಕಳ... ಜಾತಗನ್ಯಲ್ಲ ಬೈಕಂಡು ತಿರುಗ್ತರೆ" ಎಂದ ವಾಟಿಸ್ಸೆ.

"ಏ, ಅಂಗೇನು ಅನ್ನಕ್ಯಾಗದಿಲವಂತೆ ಕಣೊ... ದ್ಯಾವೇಗೌಡಾಗ್ಲೆ ಬಜೆಪಿಗಳ ಜಾತಗನ್ಯಲ್ಲ ಜೆರಾಕ್ಸ್...

'ಉಪಮುಖ್ಯಮಂತ್ರಿಯಾಗಿ ವಿಧಾನಸಭೆಯಲ್ಲಿ ಇದೇ ನನ್ನ ಕೊನೆಯ ಭಾಷಣ.'

'ಉಪಮುಖ್ಯಮಂತ್ರಿಯಾಗಿ ಇದೇ ನನ್ನ ಕೊನೆಯ ಸ್ವಾತಂತ್ರ್ಯ ದಿನಾಚರಣೆ.'

'ಈ ವರ್ಷದ ದೀಪಾವಳಿ ಹಬ್ಬವನ್ನು ಅನುಗ್ರಹದಲ್ಲಿಯೇ ಆಚರಿಸುತ್ತೇನೆ.'

'ಮುಂದಿನ ಮುಖ್ಯಮಂತ್ರಿ ನಾನೇ ಎಂಬುದರಲ್ಲಿ ಯಾವ ಸಂಶಯವೂ ಬೇಡ.'

ಹೀಗೆ ಪುಂಖಾನುಪುಂಖವಾಗಿ ಯಡಿಯೂರಪ್ಪ ಹೇಳಿಕೆ ನೀಡುತ್ತಿರಲು ಏನು ಕಾರಣ?

ಅವರು ಮುಖ್ಯಮಂತ್ರಿ ಆಗುವುದಿಲ್ಲ ಎಂಬುದು!

ಹೋಗಲಿ ಉಪಮುಖ್ಯಮಂತ್ರಿ ಪದವಿಯಾದರೂ ಖಾತರಿಯೆ?

ಇಲ್ಲ, ಅದನ್ನು ಅವರೇ ಹೇಳಿಕೊಂಡಿದ್ದಾರೆ!

'ಉಪಮುಖ್ಯಮಂತ್ರಿಯಾಗಿ ಇದೇ ನನ್ನ ಕೊನೆಯ ಭಾಷಣ' ಅಂದರೇ ಏನು ಅರ್ಥ? ಮುಂದೆ ಅವರು ಉಪಮುಖ್ಯಮಂತ್ರಿಯಾಗಿರುವುದಿಲ್ಲ ಎಂದು ತಾನೆ!

ಅನುಗ್ರಹದಲ್ಲಿಯೇ ಈ ಬಾರಿ ದೀಪಾವಳಿ ಹಬ್ಬ ಆಚರಿಸುತ್ತೇನೆ ಎಂದು ಹೇಳಿದ್ದಾರಲ್ಲ ಅಂದರೆ.... ಹೌದು, ಅದರಲ್ಲಿ ಸುಳ್ಳು ಇಲ್ಲ, 'ಅನುಗ್ರಹ' ಅಂತ ಒಂದೇನೆ ಅಲ್ವಲ್ಲ ಮನೆ ಇರೋದು. ಯಾವುದೋ ಒಂದು ಅನುಗ್ರಹದಲ್ಲಿ ಹಬ್ಬ ಆಚರಿಸುತ್ತಾರೆ!

ಮುಂದಿನ ಮುಖ್ಯಮಂತ್ರಿ ನಾನೆ ಎಂದು ಕಂಡಕಂಡ ಕಡೆಯಲ್ಲೆಲ್ಲ ತುತ್ತೂರಿ ಊದುತ್ತಿದ್ದಾರಲ್ಲ ಅಂದರೆ.... ಆಗಬಹುದು, ಮುಖ್ಯಮಂತ್ರಿ, ಚಂದ್ರು ತರಹದ ಮುಖ್ಯಮಂತ್ರಿ!

ಇದೆಲ್ಲ ಅಂಗೈ ಹುಣ್ಣಿನಷ್ಟೇ ಸ್ಪಷ್ಟ ಆಗಿದ್ದರೂ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಯಾಕೆ ಯಡಿಯೂರಪ್ಪನವರ ಮೇಲೆ ಬೇಸರಪಟ್ಟು ಕೊಂಡಿದ್ದಾರೆ ಅಂದರೆ... ಒಂದೇ ಸುಳ್ಳನ್ನು ಪದೇಪದೇ ಹೇಳಿದರೆ ಅದು ಸತ್ಯವೇನೋ ಎಂಬಂತೆ ಜನ ನಂಬಬಿಡುತ್ತಾರೆ. ಅಮೇಲೇನಾಗುತ್ತೆ, ಅಕ್ಟೋಬರ್ ಮೂರನೇ ತಾರೀಖು ಅಧಿಕಾರವನ್ನು ಈಗಾಗಲೇ ಯೋಜಿಸಿದಂತೆ, ನೀಡದೆ ಹೋದರೆ ಎಲ್ಲಿ ಈ ಹಾಳಾದ ಜನ ಅವರ ಮೇಲೆ ಸಹಾನುಭೂತಿ ತಾಳಿಬಿಡುತ್ತಾರೋ, ಅನುಕಂಪದ ಅಲೆ ಸೃಷ್ಟಿಸಿಬಿಡುತ್ತಾರೋ ಎಂಬ ಆತಂಕದಿಂದ ಅಂತೆ!

ದೇವರ ತೀರ್ಪು

ಈಗ ನಿಜಕ್ಕೂ ಅಧಿಕಾರದ ಹಸ್ತಾಂತರ ಆಗಿಯೇ ಬಿಡುತ್ತೋ, ಆಗುವುದೇ ಇಲ್ಲವೋ ಎನ್ನುವುದರ ಅತಂತ್ರ ಸ್ಥಿತಿಯಿಂದಾಗಿ ಬಹಳವಾಗಿ ತೊಂದರೆಯಾಗಿರುವುದು ಅಧಿಕಾರಿಗಳಿಗಂತೆ. ಇದುವರೆವಿಗೂ ಜನತಾದಳಕಿ ಜೈ ಅಂದುಕೊಂಡು ಮಂತ್ರಿಮಹೋದಯರ ಕೃಪಾಕಟಾಕ್ಷದಲ್ಲಿ ಅಧಿಕಾರದ ಸವಿಯನ್ನು ಉಣ್ಣುತ್ತಾ ಭ್ರಷ್ಟಾಚಾರವನ್ನು



ಯಾವ್ಲೋನ ಎಗ್ಗೂ ಇಲ್ಲದಂತೆ ಮಾಡಿಕೊಂಡು ಆರಾಮವಾಗಿದ್ದರು. ಈಗ ಇಲ್ಲಿಂದ ಟೆಂಟು ಕಿತ್ತು ಭಾಜಪ ಎದುರು ಠಿಕಾಣಿ ಹೂಡಬೇಕಾ, ಅಥವಾ ಇಲ್ಲೇ ಇರಬೇಕಾ ಎನ್ನುವುದು ಗೋಚರಿಸದೆ ಕಕ್ಕಾಬಿಕ್ಕಿಯಾಗಿದ್ದಾರಂತೆ! ಒಂದು ವೇಳೆ ಇಲ್ಲೇ ಇದ್ದರೆ ಅಧಿಕಾರ ಹಸ್ತಾಂತರ ಆಗಿಯೇ ಹೋದರೆ ಭಾಜಪ ಕೆಂಗಣ್ಣಿಗೆ ಗುರಿಯಾಗಬೇಕು; ಭಾಜಪ ಕಡೆ ಹಾರಿದರೆ ಅಧಿಕಾರ ಹಸ್ತಾಂತರ ಆಗದೆ ಹೋದರೆ ದಳದವರ ಕೋಪಾಗ್ನಿಗೆ ತುಪ್ಪಸುರಿದಂತಾಗುತ್ತದೆ ಎಂಬುದು ಅವರ ತೊಳಲಾಟಕ್ಕೆ ಕಾರಣವಂತೆ!

ಇನ್ನೊಂದು ಕಡೆ ಜಾತ್ಯತೀತ ಜನತಾದಳದ ಏಕೈಕ ನಾಯಕ ಹರದನಹಳ್ಳಿ ದೇವೇಗೌಡರು ಹಾಗೂ ಅವರ ಧರ್ಮಪತ್ನಿ ಚೆನ್ನಮ್ಮನವರು ತಿರುಚನಾಪಳ್ಳಿಗೆ ತಮ್ಮ ಪಾದ ಪದ್ಮಂಗಳನ್ನು ಬೆಳೆಸಿ ಅಂತ್ಯರಂಗನ ಎದುರು ಏನಕ್ಕೇನ ಪ್ರಕ್ಕಾರೇಣ ಅಧಿಕಾರ ಎಂಬ ಮಾಯಾವಿ ನಮ್ಮ ಗೃಹದಿಂದ ಆಚೆಗೆ ಇಣುಕಿಯೂ ನೋಡಲು ಬಾರದು ಎಂಬಂತೆ ಹೋಮ, ಹವನ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ದುಶ್ಶಕುನವೋ ಎಂಬಂತೆ ಎರಡು ತಿಂಗಳ ಹಿಂದೆ ಕೇರೆ ಹಾವೊಂದು ತಮ್ಮ ಮನೆಯಲ್ಲಿ ಪ್ರತ್ಯಕ್ಷಗೊಂಡಿದ್ದರ ಪರಿಹಾರಾರ್ಥ ಲೋಕೋಪಯೋಗಿ ಮಂತ್ರಿ ಹರದನಹಳ್ಳಿ ದೇವೇಗೌಡ ರೇವಣ್ಣ ಅವರೂ ಅದೇ ಸಂದರ್ಭದಲ್ಲಿ ಹಾಜರಿದ್ದು ಸುದರ್ಶನ ಯಾಗ ಪದರ್ಶನಯಾಗ ಎಂಬುದಾಗಿ ಹಲವಾರು ಯಾಗಗಳನ್ನು ಮಾಡಿಸುತ್ತಾ ಮುಖ್ಯಮಂತ್ರಿ ಗಾದಿಯತ್ತ ವಾರೆಕಣ್ಣು ಬೀರುತ್ತಿದ್ದರಂತೆ. ಮುಖ್ಯಮಂತ್ರಿ ಕುಮಾರಸ್ವಾಮಿಯುವರೂ ಅದರಲ್ಲಿ ಭಾಗಿಗಳಾಗಿದ್ದರಂತೆ. ಅದೇ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮಸಿಂಗರಿಗೂ ಆ ರಂಗನಾಥಸ್ವಾಮಿಯ ಸೆಳೆತ ಬಲವಾಗಿ ಅವರೂ ಅಲ್ಲಿ ಹಾಜರಿದ್ದರಂತೆ. ನಾವೆಲ್ಲ ನಂಬಬೇಕು. ದೇವರ ದರ್ಶನಕ್ಕಾಗಿ ತೆರಳಿರುವಾಗ ಅಲ್ಲಿಯೂ ಹೊಲಸು ರಾಜಕೀಯದ ಮಾತನಾಡುವವರಲ್ಲ ಆ ಶ್ರೀರಂಗನಾಥನ ಭಕ್ತರು! ರಾಜಕೀಯದ ಯಾವ ಮಾತನ್ನೂ ಆಡಲಿಲ್ಲವಂತೆ!

ಇಲ್ಲಿ ಒಂದು ಸಂಶಯ ತಲೆದೋರಬಹುದು. ದೇವೇಗೌಡರು ಇಪ್ಪತ್ತನಾಲ್ಕು ಗಂಟೆ ರಾಜಕಾರಣಿ. ಧರ್ಮಸಿಂಗ್ ಅಷ್ಟಿಲ್ಲದಿದ್ದರೂ ಹದಿನಾರು ಗಂಟೆ ರಾಜಕಾರಣಿ ಅನ್ನುವುದಂತೂ ಸತ್ಯ. ಅವರಿಬ್ಬರಿಗೂ ಹಳೆಯ ಸ್ನೇಹ. ಅವರು ಏನು ಮಾತನಾಡಿರಬಹುದು?

'ನಮಸ್ಕಾರ ಗೌಡಜಿ'

'ನಮಸ್ಕಾರ ಧರ್ಮಜಿ'

'ದೇವರ ದರ್ಶನ ಆಯಿತ?'

'ಆಯಿತು, ತಮ್ಮ ಯಾಗ ಯಜ್ಞಾದಿಗಳು ಸಾಂಗವಾಗಿ ನೆರವೇರಿದವೆ?'

'ನೆರವೇರಿತು, ಬನ್ನಿ ಪ್ರಸಾದ ಸ್ವೀಕರಿಸೋಣ'

ಇಬ್ಬರೂ ಹೋದರು. ಪ್ರಸಾದ ಸ್ವೀಕರಿಸಿದರು. ಅಷ್ಟೆ, ಇನ್ನೇನೂ ಇಲ್ಲ!

ಅತ್ತ.... ಇತ್ತೀಚೆಗೆ ತಾನೆ ದೇವರು ದಿಂಡರು ಹೋಮ ಹವನ ಅಂತ ಕಣ್ಣುಬಿಡುತ್ತಿರುವ ... ಜುಜುಬಿಗಳೇ ಅನಿಷ್ಟಗಳನ್ನು ದೂರಮಾಡಿ ದೇವ... ಕೃಪಾಶೀರ್ವಾದ ಪಡೆಯುತ್ತಿರಬೇಕಾದರೆ.... ಇ... ಕಾಲಾಂತರದಿಂದಲೂ ಇದೇ ಕೈಂಕರ್ಯ ಎಸಗುತ್ತ... ಈ ವಿದ್ಯೆಯಲ್ಲಿ ಪರಿಣಿತರಾಗಿರುವ ಭಾಜಪದವರು

ಅಣಕ

ಎಚ್.ಎಲ್. ಕೇಶವಮೂರ್ತಿ

ಇವರನ್ನು ಮೀರಿಸುವಂತಹ ಪೂಜೆ ಪುನಸ್ಕಾರಗಳನ್ನು ಹೋಮ ಹವನಗಳನ್ನು ಅತಿ ಗುಪ್ತವಾಗಿ ನೆರವೇರಿಸುತ್ತಿದ್ದಾರಂತೆ.

ಜಯಾಪಜಯಗಳನ್ನು ನಿರ್ಧರಿಸಬೇಕಾದ ಚೆಂಡು ಈಗ ದೇವರುಗಳ ಅಂಗಳದಲ್ಲಿ ಬಿದ್ದಿದೆಯಂತೆ. ದಯಾಮಯನಾದ ಆ ಪರಮಾತ್ಮ ತನ್ನ ಭಕ್ತ... ಅಭೀಷ್ಟೆಯವನ್ನುಪೂರೈಸಬೇಕೆಂದೂ, ಕರುಣಾನಿಧಿಯಾ... ಈ ಪರಮಾತ್ಮ ತನ್ನ ಭಕ್ತರ ಅಭಿಲಾಷೆಯನ್ನು ಈಡೇರಿಸಬೇಕೆಂದೂ ಚಂಡಿಹಿಡಿಯಲಾಗಿ ದೇವಲೋಕ ರಣರಂಗದಂತೆ ಪ್ರಜ್ವಲಿಸುತ್ತಿತ್ತಂತೆ. ದೇವರು-ದೇವರುಗಳ ಈ ಜಗಳ ಹುಲುಮಾನವರಿಗೆ ತಿಳಿದರೆ ತಮ... ಮೂರು ಕಾಸಿನ ಮರ್ಯಾದೆಯೂ ಸಿಗದಂ... ಆಗುವುದಲ್ಲಾ ಎಂದು ಚಿಂತಿಸಿದ ನಾರದ ಮಹಾಮು...ಗಳು ಮಧ್ಯೆ ಪ್ರವೇಶಿಸಿದರಂತೆ. ತಾವು ಭೂಲೋಕ ಸಂಚಾರ ಮಾಡಿ ವಿಷಯವನ್ನು ಕೂಲಂಕಷವಾ... ಪರಿಶೀಲಿಸಿದ ನಂತರ ಈ ಕುರಿತು ತೀರ್ಮಾ... ಕೈಗೊಳ್ಳಬಹುದು ಎಂದು ಸಲಹೆ ನೀಡಿದರಂತೆ. ತಮ್ಮ ಗೆಲುವಿನ ಬಗ್ಗೆ ಸಂಶಯ ಇದ್ದದ್ದರಿಂದಲೇ ಏನೊ... ಎರಡೂ ಪಂಗಡಗಳು ಈ ಸಲಹೆಗೆ ಸಮ್ಮತಿ...ದವಂತೆ.

ನಾರದ ಮುನಿಗಳಿಗೆ ಈ ಮಹಿಪೂರ ನಾ... ಪರಿಚಯ ತಾನೆ.... ಬೆಂದಕಾಳೂರಿನ ವಿಧಾನಸಭೆ...

ಜನರ ಹಕ್ಕುಗಳನ್ನು [illegible] ಸರಕಾರದ ಜವಾಬ್ದಾರಿ - ಬಿಲ್ ಕ್ಲಿಂಟನ್

ಾದಿಸಿಗಂಡು ಮುದಿಕಂದಿದ್ವನಂತೆ. ಎಡೂರಪ್ಪ ಆಸ್ತಿ ಏಟು ಮಾಡ್ಯವುನೆ? ೀಬನಿಗೂ ಇವುನಿಗೂ ಏನು ಸಮಂದ, ಈಶ್ವರಪ್ಪ ಮಾಡಿರೊ ಆಸ್ತಿ, ೋಕ ಅನ್ನೊನು ಮಾಡಿರೊ ಆಸ್ತಿ ಆ ಪೊನ್ನಾಳಿ ಎಮ್ಮೆಲ್ಲೆ ಸೆಕ್ಸ್ ್ಲಮ್ ಸಿದಿನ್ಯಲ್ಲಿ ತಯಾರು ಮಾಡಿ ಮುದಿಕಂಡಿದ್ದನಂತೆ. ಈ ಜೆಪಿಗಳೇನಾರ ಬಾಯಿ ಬುಟ್ರೂ ಅವುರ ಜಾತಗನ್ಯಲ್ಲ ತಗಿತನೆ ಆಗ."

"ನೀನೇಳದು ನಿಜವೆಯ. ಇತ್ತೀಚೆಗೆ ಒಬ್ಬ ರಾಜಕಾರಣಿ ಇನ್ನೊಬ್ಬ ಜಕಾರಣಿಯ ಭ್ರಷ್ಟ ಅಂತ ಬೈಯದ ನಿಲ್ಲಿಸಿ ಬುಟ್ಟವುರೆ. ಆದ್ದರಿಂದ ುಂದೆ ಯಲಕ್ಷನ್ ಬಂದಾಗ ಈ ಬಿಜೆಪಿ, ಜೆಡಿಎಸ್ ಇಬ್ರೂ ಕಾಂಗ್ರೆ ್ಕಂಡು ತಿರುಗಬವುದು" ಎಂದ ವಾಟಿಸ್ಸೆ.

"ಎಡೂರಪ್ಪ ನಾನು ಮುಖ್ಯಮಂತ್ರಿಯಾಗದ ಯಾರೂ ತಡಿಯಕ್ಕಾಗದಿಲ್ಲ ಂದವುನಂತೆ" ಎಂದ ಸೀರ.

"ಅಂಗಂದು ಸಿಗಾಯ್ಕಂಡವುನೆ ಚಿಗಪ್ಪ."

"ಅದ್ಯಾಕ್ ಸಿಗಾಯ್ಕಂಡಿದ್ದನೂ?"

"ನಾನು ಮುಖ್ಯಮಂತ್ರಿಯಾಗದ ಯಾರೂ ತಡಿಯುಕ್ಕಾಗದಿಲ್ಲ ಅಂದ್ರೆ ಡಿಯೋರ್‍ಯಾರೊ, ಅವುರೆ ಅಂದಂಗಾಯ್ತಲವೆ. ಅಂಗೆ ತಡಿಯೋರಿದ್ರೆ ನ್ಯಾರು, ಇವುರೆ ಅಪ್ಪ ಮಕ್ಕಳು ತಾನೆಯ. ಅದ್ಕೆ ಕುಮಾರಣ್ಣ ಎಡೂರಪ್ಪ ತರ ಬಾಯಿಗೆ ಬಂದಂಗೆ ಮಾತಾಡಿದ್ರೆ ಅವುರಿಗೇ ತೊಂದ್ರೆ ಅಂತ ದ್ರಿಸಿದ್ವನಂತೆ."

"ಈ ಎಡೂರಪ್ಪನುವೆ ಹಿಂಗೆ ಗತಿಗೆಟ್ಟೊನಂಗೆ ಕೂಗಾಡದಕಿಂತ ದರಾಯ್ತು ಹೋದರೋಯ್ತು ಅಂತ ಸುಮ್ಮನಿರಬೇಕಾಗಿತ್ತು ಕಂಡ್ಯ."

"ಅಂಗಿರಕ್ಕೆ ಅವುನೇನು ಎಂ.ಪಿ. ಪ್ರಕಾಶನೆ ಚಿಗಪ್ಪ?"

"ಅದು ನಿಜವೆ ಬುಡು."

"ಪ್ರಕಾಶ್ ಮುಖ್ಯಮಂತ್ರಿಯಾಗೊ ಯಲ್ಲಾ ಅನುಭವನೂ ಪಡಕಂಡಿ ್ದೊನು, ವಳ್ಳೊಳ್ಳೆ ಖಾತೆನ್ಯಲ್ಲ ನಿಭಾಯಿಸಿ ಉಪಮುಖ್ಯಮಂತ್ರಿಯಾಗಿದ್ದೊನು. ಂಥೋನೆ ಅಪ್ಪಿತಪ್ಪಿ ನಾನು ಮುಖ್ಯಮಂತ್ರಿ ಆಯ್ತಿನಿ ಅಂತ ಒಂದೇ ಂದು ಸತಿ ಅನ್ನಲಿಲ್ಲ, ಬಡವಾ ನೀನು ಮಡಿಗಿದಂಗಿರು ಅಂತ ಆ ್ಯವೇಗೌಡ ಮಡಗಿದ ಜಾಗದಲ್ಲಿ ಯಂಗವುನೆ ನೋಡು. ದ್ಯಾವೇಗೌಡನಿಗೆ ಗ್ಲು ಮಾನ ಮರಿಯಾದಿ ಅನ್ನದೇನಾರ ಇದ್ರೆ ಇನ್ನಿಪ್ಪತ್ತು ತಿಂಗಳಿಗೆ ಕಾಶನೆ ಮುಖ್ಯಮಂತ್ರಿ ಅಂತ ಹೇಳಿಕೆ ಕೊಡ್ಲಿ ಬೇಕಾದ್ರೆ. ಎಡೂರಪ್ಪ ಂಗೇ ಇರತಿನಿ ಅನ್ನಬವುದು."

"ಸರಿ ದ್ಯಾವೇಗೌಡ ಅಂಗಂದನೆ?"

"ಇಂಪಾಜಿಬಲ್."

■

ಿ ಸುಳಿದಾಡಿದಾಗ ಆಸಕ್ತರು ದೇವಾದಿದೇವತೆಗಳ ಪೂಜೆ ಪುನಸ್ಕಾರಗಳಲ್ಲಿ ಗ್ನರಾಗಿದ್ದುದು ಈಗಾಗಲೇ ಅವರಿಗೆ ತಿಳಿದಿದ್ದುದರಿಂದ ಇತರೆ ವರಿಷ್ಠರನ್ನು ಣಲು ಬಯಸಿದರಂತೆ. ಆದರೆ ಅವರೆಲ್ಲ ಸೋನಿಯಾ ಬಳಿಗೆ ದೂರು ುಯ್ಯಲು ದೆಹಲಿಗೆ ತೆರಳಿದ್ದಾರೆಂದು ತಿಳಿದು ಬರಲಾಗಿ ಅಲ್ಲಿಗೇ ಹೋದರಂತೆ. ಲ್ಲಿ ಸುಮಾರು ನಲವತ್ತು ಜನ ಶಾಸಕರಿದ್ದರಂತೆ. ಸೋನಿಯಾ ಜತೆ ಮೈ ಡಿಮಾಡಿಕೊಂಡು ಮಾತನಾಡುತ್ತಿದ್ದರಂತೆ.

'ಮೇಡಂ'

'ಹೇಳಿ'

'ದೇವೇಗೌಡಜೀ ಸಮಯಸಾಧಕ ಮೇಡಂ'

'ಹೌದು'

'ಅವರನ್ನ ನಂಬಲು ಸಾಧ್ಯವೇ ಇಲ್ಲ ಮೇಡಂ'

'ಹೌದು'

'ಈಗಾಗಲೇ ಒಂದು ಸಲ ವಂಚನೆಗೊಳಗಾಗಿದ್ದೇವೆ. ಮತ್ತೆ ಅವರ ಿತೆ ಕೈ ಜೋಡಿಸಬಾರದು ಮೇಡಂ'

'ಅದು ಸರಿ. ಆದರೆ....'

'ಎಸ್ ಮೇಡಂ'

'ಅದನ್ನ ಹೇಗೆ ತಪ್ಪಿಸುತ್ತೀರಾ ಹೇಳಿ?'

ಏನಿದೆ ಉತ್ತರ ಮಣ್ಣಾಂಗಟ್ಟಿ? ದೇವೇಗೌಡ ಬೇಡ ಅಂದರೆ ಭಾಜಪ ೀಕು ಅಂತ! ಭಾಜಪ ಬೇಡ ಅಂದರೆ ದೇವೇಗೌಡ ಬೇಕು ಅಂತ!

ನಾರದ ಮಹಾಮುನಿಗಳು ನೇರವಾಗಿ ದೇವಲೋಕಕ್ಕೆ ಬಂದರಂತೆ.

'ದೇವೇಗೌಡ ನಿಮ್ಮನ್ನ ಆರಾಧಿಸಿದ್ದಾನೆ. ಭಾಜಪ ನಿಮ್ಮನ್ನ ಪೂಜಿಸಿದೆ. ಧಿಕಾರ ಇಬ್ಬರಿಗೂ ಬೇಡ' ಅಂದರಂತೆ... 'ಹಾಗಾದರೆ?' ಎನ್ನುತ್ತಾ ್ದುಪೆದ್ದಾಗಿ ನೋಡಿದರಂತೆ ದೇವತೆಗಳು. 'ಕಾಂಗ್ರೆಸ್ ಬರಲಿ' ಎಂದು ಜಿಸ್ಟಾಯ ಹೇಳಿದರಂತೆ ನಾರದ ಮಹಾಮುನಿಗಳು!

ದೇವತೆಗಳ ಈ ತೀರ್ಮಾನ ಅಧಿಕಾರಶಾಹಿಗಳಿಗೆ ಅದು ಹೇಗೋ ುಟಿರಬೇಕು. ಅವರೆಲ್ಲ ತಮ್ಮ ಟೆಂಟುಗಳನ್ನು ಕಾಂಗ್ರೆಸ್ ಪಾಳಯದತ್ತ ಂಡೊಯ್ಯುತ್ತಿದ್ದಾರಂತೆ!


ಅಲ್ಲ, ಈ ಅಧಿಕಾರ ಹಸ್ತಾಂತರ ಅಂತ ಈಪಾಟ ಕಿತ್ತಾಡುತ್ತಿದ್ದಾರಲ್ಲ, ದಳಿತ ಅನ್ನೋದು ಸತ್ತೇ ಹೋಗಲ್ವಾ ಅಂತ ಕೇಳುತ್ತೀರಲ್ಲ, ನೀವೊಂದು. ಪ್ಪು ಅಧಿಕಾರಕ್ಕೆ ಹೇಗೆ ಬರುವುದು ಅಂತ ರಾಜಕಾರಣಿಗಳಂತೆ ಯಾರನ್ನು ್ಬೈಸಿದರೆ ಹೇಗೋ ಏನೋ ಅನ್ನೋದು ಅಧಿಕಾರಶಾಹಿಗಳ ತೊಳಲಾಟ. ್ರಪ ಆಡಳಿತ ಗೀಡಳಿತ ಅಂತ ಯೋಚಿಸುತ್ತಾ ಕುಳಿತರಲು ಎಲ್ರೀ ುಯು ಇರುತ್ತೆ... ಹೌದು, ದೇವರು ದೇವರು ಅಂತ ಸಾಯ್ತಾನೆ. ್ರೀರಾಂ ಅಂತ ಮುಕುಳಿ ಹರಿಯೋ ಹಂಗೆ ಅರಚುತ್ತವೆ. ಖಾಲಿ ಗ ಕಂಡ ಕಡೆಯಲ್ಲೆಲ್ಲ ದೇವಸ್ಥಾನ ಎಬ್ಬಿಸುತ್ತವೆ. ಅಂತಹ ಭಾಜಪನ ಂತಹನೂ ಕೈಬಿಟ್ಟು ಬಿಡುತ್ತಾನೆ ಅಂದರೆ......


■

ವ್ಯಾನೇಸಾ

ಒಳಲೆ ಮೂಗಿನ ಸುಂದರ ನಟಿ ವ್ಯಾನೇಸಾ, ಪೂರ್ಣ ಹೆಸರು ವ್ಯಾನೇಸಾ ರೆಡ್‌ಗ್ರೇವ್. ಇದೂ ಈಕೆಯ ಪರಿಚಯ ಪೂರ್ತಿ ಕೊಡುವುದಿಲ್ಲ, ಈಕೆಯ ತಂದೆ, ತಾಯಿ, ತಾತ, ತಂಗಿಯರೆಲ್ಲ ರಂಗಕಲಾವಿದರು, ಸಿನಿಮಾದಲ್ಲಿ ನಟಿಸಿದವರು. ತಂದೆ ರೆಡ್‌ಗ್ರೇವ್ ಇಂಗ್ಲೆಂಡಿನ ಪ್ರಖ್ಯಾತ ನಟ; ಗೌರವಾನ್ವಿತ ಕಲಾವಿದ. ಈತ ಒಮ್ಮೆ ಆತನಷ್ಟೇ ಪ್ರಖ್ಯಾತನಾದ ಲಾರೆನ್ಸ್ ಒಲಿವಿಯರ್ ಜೊತೆಯಲ್ಲಿ ಹ್ಯಾಮ್ಲೆಟ್ ನಾಟಕದಲ್ಲಿ ನಟಿಸುತ್ತಿದ್ದ. ಒಲಿವಿಯರ್ ಹ್ಯಾಮ್ಲೆಟ್ ಪಾತ್ರದಲ್ಲಿ; ರೆಡ್‌ಗ್ರೇವ್ ಹ್ಯಾಮ್ಲೆಟ್‌ನ ಗೆಳೆಯ ಲಯರ್ಟಿಸ್ ಪಾತ್ರದಲ್ಲಿ, ಆಗ ಒಲಿವಿಯರ್ ನಾಟಕದ ನಡುವಿನ ವಿರಾಮದಲ್ಲಿ ಪ್ರೇಕ್ಷಕರೆದುರು ಕಾಣಿಸಿಕೊಂಡು ಹೇಳಿದ; "ಮಹಿಳೆಯರೆ, ಮಹನೀಯರೆ ಇವತ್ತು ರಾತ್ರಿ ತಾರೆಯೊಂದರ ಜನನವಾಗಿದೆ. ಲಯರ್ಟಿಸ್‌ಗೆ ಹೆಣ್ಣು ಮಗು ಹುಟ್ಟಿದೆ."

ಇದಾದದ್ದು 1937ರಲ್ಲಿ, 52 ವರ್ಷಗಳ ಹಿಂದೆ. ಲಾರೆನ್ಸ್ ಒಲಿವಿಯರ್ ತನ್ನ ಗೆಳೆಯನನ್ನು ಖುಷಿಪಡಿಸಲು ಹೇಳಿದ್ದು ಅವಧೂತನ ಮಾತಿನಂತೆ ನಿಜವಾಯಿತು. ವ್ಯಾನೇಸಾ ಕೇವಲ ಇಪ್ಪತ್ತು ವರ್ಷಗಳಲ್ಲಿ ಪ್ರತಿಭಾವಂತ ನಟಿಯೆಂದು ಸಾಧಿಸಿ ತೋರಿಸಿದಳು. ಭಯಗೊಂಡಂತಿರುವ ಕಣ್ಣು, ಎತ್ತರದ ನಿಲುವು, ಸುಸಂಸ್ಕೃತ ಮನಸ್ಸು ಮತ್ತು ಅಪಾರ ಪ್ರತಿಭೆಯ ವ್ಯಾನೇಸಾ ಗ್ಲೆಂಡಾ ಜಾಕ್‌ಸನ್‌ಗಿಂತ, ಕ್ಯಾಥರೀನ್ ಹೆಬ್ಬರ್ನ್‌ಗಿಂತ, ಡಯಾನಾರಿಗ್‌ಗಿಂತ ಉತ್ತಮ ನಟಿಯೆಂದು ತೋರಿಸಿಕೊಂಡಳು. ಭಾರತಕ್ಕೆ ಬಂದ ಈಕೆಯ ಚಿತ್ರಗಳಾದ ಇಸಡೋರಾ ಡಂಕನ್, ಮೇರಿ ಕ್ವೀನ್ ಆಫ್ ಸ್ಕಾಟ್ಸ್, ಎ ಮ್ಯಾನ್ ಫಾರ್ ಆಲ್ ಸೀಸನ್ಸ್ ಚಿತ್ರಗಳನ್ನು ನೋಡಿದವರಿಗೆ ವ್ಯಾನೇಸಾಳ ಪ್ರಾಮಾಣಿಕತೆ, ವಸ್ತುನಿಷ್ಠೆ, ಪ್ರಬುದ್ಧತೆಯ ಅರಿವಾಗಿರುತ್ತದೆ. ಇವತ್ತು ವ್ಯಾನೇಸಾ ಜಗತ್ತಿನ ಅತ್ಯುತ್ತಮ ನಟಿ; ಇಂಗ್ಲಿಷ್ ಭಾಷೆ ಆಡುವ ದೇಶಗಳ ನಟಿಯರಲ್ಲಂತೂ ನಿಸ್ಸಂಶಯವಾಗಿ ಅಗ್ರಗಣ್ಯೆ.







ಮರೆಯುವ ಮುನ್ನ

■ ಪಿ. ಲಂಕೇಶ್


ಫೆಬ್ರವರಿ 26, 1989

ಇಷ್ಟೇ ಆಗಿದ್ದರೆ, ವ್ಯಾನೇಸಾ ಕೇವಲ ನಟಿಯಾಗಿದ್ದರೆ, ಇದನ್ನೆಲ್ಲ ಬರೆಯುವ ಅಗತ್ಯವಿರಲಿಲ್ಲ. ವ್ಯಕ್ತಿಯಾಗಿ ವ್ಯಾನೇಸಾ ಜೀವಂತ ಜ್ವಾಲೆ. ಈಕೆ ರಂಗಭೂಮಿಯ ಮೇಲೆ, ಬೆಳ್ಳಿತೆರೆಯ ಮೇಲೆ ವ್ಯಕ್ತಪಡಿಸುವುದು ತನ್ನ ವ್ಯಕ್ತಿತ್ವದ ಒಂದು ಭಾಗವನ್ನು ಮಾತ್ರ. ಇಂಗ್ಲೆಂಡಿನ ಬಡಿವಾರದ, ಇಬ್ಬಂದಿತನದ ವಾತಾವರಣದಲ್ಲಿ ಈಕೆ ತನ್ನ ಆತ್ಮಸಾಕ್ಷಿಗೆ ತಕ್ಕಂತೆ ವರ್ತಿಸುತ್ತಿರುವ ಹೆಣ್ಣು; ಪ್ರಧಾನಿ ಥ್ಯಾಚರಳ ಬಲಪಂಥೀಯ ಸ್ವಪ್ರತಿಷ್ಠೆಗೆ ವ್ಯಾನೇಸಾಳ ಹೊಣೆಯರಿತ ನಡವಳಿಕೆಯೇ ಉತ್ತರ. ಜಗತ್ತಿನ ಎಲ್ಲ ಬಡವರೂ, ತಬ್ಬಲಿಗಳೂ ಈಕೆಯ ಪ್ರೀತಿಗೆ ಪಾತ್ರರು; ಇಂಗ್ಲೆಂಡಿನ ಪುಟ್ಟ ಕಮ್ಯುನಿಸ್ಟ್ ಪಕ್ಷದ ಸದಸ್ಯೆಯಾದ ಈಕೆ ಪ್ಯಾಲಿಸ್ಟೇನಿನ ದಿಕ್ಕೆಟ್ಟ ಮುಸ್ಲಿಂರ, ಅಮೆರಿಕಾದ ದಿಗ್ಭ್ರಮೆಗೊಂಡ ನೀಗ್ರೋಗಳ, ದಕ್ಷಿಣ ಅಮೆರಿಕಾದ ದಮನಕ್ಕೊಳಗಾದ ಎಲ್ಲರ ಬೆಂಬಲಿಗಳು. ತನ್ನ ಭವ್ಯ ಮನೆಯನ್ನು ಮಾರಿ ಪ್ಯಾಲಿಸ್ಟೇನಿನ, ಪರದೇಶಗಳ ನೋವನ್ನು ಕುರಿತು ಸಿನಿಮಾ ಮಾಡಿದಳು; ತನ್ನ ಹೋರಾಟ ಅಥವಾ ಸ್ಪಂದನಕ್ಕೆ ಅವಕಾಶ ಕೊಡದ ಯಾವ ನಾಟಕದಲ್ಲೂ, ಸಿನಿಮಾದಲ್ಲೂ ಈಕೆ ನಟಿಸುವುದಿಲ್ಲ. ಬದುಕು ಮುಖ್ಯ; ಕಲೆ ಅಥವಾ ಆದಾಯ ಆಮೇಲೆ.

ಗಂಡ ಕೊಬ್ಬು ತೋರಿ ಇನ್ನೊಬ್ಬಳನ್ನು ಪ್ರೇಮಿಸತೊಡಗಿದಾಗ ತಾನೂ ಒಬ್ಬ ನಟನನ್ನು ಪ್ರೇಮಿಸಿ ಮದುವೆಯಾದಳು; ಮತ್ತೊಬ್ಬನನ್ನು ವರಿಸಿದಳು. ಜೀವನವೆಂಬುದು ಪ್ರಜ್ವಲಿಸುವ ಕ್ಷಣಗಳ ಮಾಲಿಕೆ ಎಂದು ತೋರುವಂತೆ ಪ್ರೇಮ, ಕಾಮ, ಕಲೆ ಮತ್ತು ಅನ್ಯಾಯಗಳ ವಿರುದ್ಧ ಹೋರಾಟದಲ್ಲಿ ಮುಳುಗಿದಳು. ಆದರೆ ವ್ಯಾನೇಸಾಳ ಧೈರ್ಯ ಮತ್ತು ವೈಚಿತ್ರ್ಯ ಅವಳನ್ನು ಏಕಾಂಗಿಯನ್ನಾಗಿಸಿತು. ಪ್ಯಾಲಿಸ್ಟೇನಿನ ಮುಸ್ಲಿಮರನ್ನು ಬೆಂಬಲಿಸಿದ್ದಕ್ಕಾಗಿ ಇಡೀ ಜಗತ್ತಿನ ಯಹೂದ್ಯರು ಅವಳನ್ನು ದ್ವೇಷಿಸತೊಡಗಿದರು. ಪಶ್ಚಿಮ ದೇಶಗಳಲ್ಲಿ ಪ್ರಭಾವಶಾಲಿಗಳಾದ ಯಹೂದ್ಯರು ಆಕೆಗೆ ಒಳ್ಳೆಯ ಪಾತ್ರಗಳು ಸಿಗದಂತೆ ನೋಡಿಕೊಳ್ಳತೊಡಗಿದರು. ಈಕೆಯ ರಾಜಕೀಯ ಚಟುವಟಿಕೆಗಳನ್ನು ಟೀಕಿಸಿ ಧೂಳಿಪಟ ಮಾಡಲಾಯಿತು. ಆಕೆಯೊಬ್ಬ ತಿಕ್ಕಲು ಹೆಂಗಸು ಎಂಬಂತೆ ವರ್ಣಿಸಲಾಯಿತು.

ಒಬ್ಬಂಟಿ ವ್ಯಾನೇಸಾ ಎಂದೂ ಆತ್ಮ ದಂಡನೆಯಲ್ಲಿ ಮುಳುಗುವುದಿಲ್ಲ, ತನ್ನ ಕ್ರಿಯೆಗಳ ಬಗ್ಗೆ ಪಶ್ಚಾತ್ತಾಪ ಪಡುವುದಿಲ್ಲ, ಏಕಾಂಗಿಯಾಗಿ, ಸರಳವಾಗಿ, ತೀವ್ರವಾಗಿ ಬದುಕುತ್ತಾಳೆ; ಪ್ರಜ್ವಲಿಸಿ ಬದುಕುತ್ತಿದ್ದಾಳೆ. ಆಕೆಯನ್ನು ತಾತ್ಸಾರದಿಂದ ಕಾಣುವವರೂ ಆಕೆ ನಟಿಸಿದಳೆಂದರೆ ಥಿಯೇಟರ್‌ಗೆ ಘೇರಾಯಿಸುತ್ತಾರೆ. ಆಕೆ ನಟಿಸುವಲ್ಲಿ ಬಾಂಬ್ ಬೀಳುವ ಅಪಾಯಗಳಿದ್ದರೂ ಆಕೆಯ ಕಲೆಯಲ್ಲಿ ಮುಳುಗಿ ಹಿಗ್ಗಿನಲ್ಲಿ ಈಜುತ್ತಾರೆ. ಜಗತ್ತಿನ ಅತ್ಯುತ್ತಮ ಅಭಿನೇತ್ರಿ ಜಗತ್ತಿನ ಅತ್ಯುತ್ತಮ ಜ್ವಾಲಾಮುಖಿ ಕೂಡ; ಅತ್ಯುತ್ತಮ ಮಹಿಳೆ ಕೂಡ ಇರಬಹುದೆನ್ನಿಸುತ್ತದೆ.

ವ್ಯಾನೇಸಾ ಅನೇಕ ಹೆಣ್ಣುಮಕ್ಕಳಿಗೆ ಸರಳ ಪಾಠದಂತಿದ್ದಾಳೆ.



ಹೊಣೆ ಯಾರು?

ಇದನ್ನು ಕಂಡು ಮೂರ್ಖನಂತೆ ಕ್ಷಣ ಹರ್ಷಿಸಿದರೂ ಮರುಕ್ಷಣದಲ್ಲಿ ದುಃಖಿತನಾಗುತ್ತೇನೆ. ಒಬ್ಬ ಹುಡುಗ. ನಾನು ತನ್ನ ಊರಿಗೆ ಬರುವುದನ್ನು ಕೇಳಿ ಸಂತೋಷದಿಂದ ಒಂದು ವಾರ ಊಟ ಮಾಡಿಲ್ಲ, ನಿದ್ರೆ ಮಾಡಿಲ್ಲ. 'ಪತ್ರಿಕೆ' ತೆರೆದು ಸಂತೋಷಕ್ಕೆ ಅಳತೊಡಗುತ್ತಾನೆ. ನಾನು ತನ್ನ ಊರಿಗೆ ಬಂದಾಗ ನನ್ನ ಭಾಷಣಕ್ಕೆ ಮುಂಚೆ (ಕೆಂಪು ಅಂಗಿ ತೊಟ್ಟ ಈತ) ಕೆಂಪು ಗುಲಾಬಿ ನೀಡುತ್ತಾನೆ. ಈತನ ಗೆಳೆಯರು ಈತನ ಬಗ್ಗೆ ಹೇಳುತ್ತಾರೆ. ನಾನು ಬೆನ್ನುತಟ್ಟಿ ಹೇಳುತ್ತೇನೆ, "ನನ್ನನ್ನು ನೋಡು, ನಿನ್ನ ಹಾಗೆ ಬಸವಳಿದಿಲ್ಲ, ದುರ್ಬಲನಾಗಿಲ್ಲ, ಕಟ್ಟುಮಸ್ತಾಗಿ ಇದ್ದೇನೆ. ಸಂಪಾದಕನಾದ ನಾನೇ ಹೀಗಿರಬೇಕಾದರೆ ನೀನು ಚೆನ್ನಾಗಿ ಉಂಟು ಪೈಲ್ವಾನ್ ತರಹ ಆಗಬೇಕು, ತಿಳೀತಾ?"

ರಾತ್ರಿ ಹನ್ನೊಂದು ಗಂಟೆ. ಇನ್ನೇನು ನಾನು ಮಲಗಬೇಕು, ಒಬ್ಬ ನಾವಿದ್ದ ಎಲ್ಲ ರೂಮುಗಳ ಬಾಗಿಲು ತಟ್ಟುತ್ತಾ ನನ್ನ ಹೆಸರು ಹಿಡಿದು ಕರೆಯುತ್ತಿದ್ದಾನೆ. ನಾನು ಕುತೂಹಲಗೊಂಡು ಹೊರಗೆ ಬಂದರೆ ಒಬ್ಬ ಹುಡುಗ, ವಿದ್ಯಾವಂತನಂತೆ ಇದ್ದಾನೆ. "ನಿಮ್ಮನ್ನು ನೋಡೋಕೆ ಬಂದೆ" ಅಂದ.

"ಬಹಿರಂಗ ಸಭೆಯಲ್ಲಿ ನೋಡಿದೆಯಲ್ಲ ಮಾರಾಯ" ಅಂದೆ.

"ನಿಮ್ಮನ್ನು ಸ್ಪರ್ಶಿಸಬೇಕು" ಅಂದ.

ಕೈ ಕುಲುಕಿದೆ.

"ನಾನಿಲ್ಲೇ ಕೂತಿರ್ತೀನೆ" ಅಂದು ಕೂತೇಬಿಟ್ಟ. ಅವನಿಗೆ ಎಲ್ಲರೂ ಹೋಗಲು ಪರಿಪರಿಯಾಗಿ ಹೇಳಿದರು. ಹಟ ಹಿಡಿದು ಕೂತೇ ಇದ್ದ. ಅವನ ಮನವೊಲಿಸಿ ಕರೆದೊಯ್ಯುವಲ್ಲಿ ಎಲ್ಲರೂ ಸುಸ್ತಾಗಿದ್ದರು.

ಹೊಟ್ಟೆಪಾಡಿಗಾಗಿ ಮನಸ್ಸಿಟ್ಟು ಮಾಡಿದ ನನ್ನ ಕೆಲಸ ಕೆಲವರ ಆಳಕ್ಕೆ ಹೋಗಿದ್ದರೆ ಅದು ಸಂತೋಷದ ವಿಷಯ. ಆದರೆ ಐಲು ಆಗಬಾರದು. ಇದೆಲ್ಲದರ ಬಗ್ಗೆ ತಮಾಷೆ ಮಾಡುವುದೇ ವಾಸಿ ಅನ್ನಿಸುತ್ತದೆ. ಒಮ್ಮೆ ಬರ್ನಾರ್ಡ್ ಶಾ ತನ್ನ ನಾಟಕವನ್ನು ನೋಡುತ್ತಿದ್ದಾಗ ಕೆಲವರು ಪುಂಡರು ಆತನನ್ನು ಕಿಚಾಯಿಸುವುದಕ್ಕಾಗಿ, "ಎಂಥ ಕೆಟ್ಟ ನಾಟಕ!" ಅಂದರು.

ಶಾ ಹೇಳಿದ, "ನನಗೂ ಹಾಗೇ ಅನ್ನಿಸುತ್ತೆ, ಏನು ಮಾಡುವುದು: ನಾನು ಮತ್ತು ನೀವು ಅಲ್ಪಸಂಖ್ಯಾತರಾಗಿದ್ದೇವೆ!"

ಬಹುಸಂಖ್ಯಾತರ ಚಪ್ಪಾಳೆ......

ಚೆಡ್ಡಿಗಳು ಆಸ್ತಿಕರೋ, ನಾಸ್ತಿಕರೋ?

ಇಂದಿರಾ ಶ್ರೀಧರ್, ದಾವಣಗೆರೆ

ದೇವೇಗೌಡರ ನಿಘಂಟಿನಲ್ಲಿ 'ಆದರ್ಶ ಸಿದ್ಧಾಂತಗಳು' ಎಂಬುದಕ್ಕೆ ಏನೆಂದು ಅರ್ಥವಿದೆ?

• ಅದನ್ನು ಈಗ ಕಾಂಗ್ರೆಸ್‌ನಲ್ಲಿ ಹುಡುಕಲಾರಂಭಿಸಿದ್ದಾರಂತೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಗೌಡ್ರು ಫ್ರೀ ಇದ್ದಾಗ ಏನ್ ಮಾಡ್ತಾರೆ?

• ಫ್ರೀ ಪದರ ಬಗ್ಗೆ ಅರ್ಥ ಹುಡುಕಿಕೊಳ್ಳುವಷ್ಟೂ ಪುರಸೊತ್ತಿಲ್ಲವಂತೆ ಅವರಿಗೆ!

ಕೆ.ಸಿ. ರತೀಶ್, ಬೆಂಗಳೂರು

ಪುಣ್ಯಕೋಟಿ ಕೊಟ್ಟಮಾತಿಗೂ, ಕುಮಾರಸ್ವಾಮಿ ಕೊಟ್ಟಮಾತಿಗೂ ಇರುವ ವ್ಯತ್ಯಾಸವೇನು?

• ಚೆಡ್ಡಿ ಯಡ್ಡಿ ಹುಲಿಯಂತೆ ಪ್ರಾಣತ್ಯಾಗ ಮಾಡುವುದಿಲ್ಲ ಎಂಬ ಅರಿವು.

ಡಿ.ಎಲ್. ನಾಗರಾಜ್, ಹರಪನಹಳ್ಳಿ

ಭೂಗತ ದೊರೆಗೂ, ದೇವು ದೊರೆಗೂ ಇರುವ ವ್ಯತ್ಯಾಸ?

• ಅಧಿಕಾರ ಹಿಡಿದರೆ ಹೇಗೆ ಅಧಿಕೃತವಾಗಿ ಲ್ಯಾಂಡ್ ದೀಲ್‌ಗಳಲ್ಲಿ ತೊಡಗಬಹುದು ಎಂಬ ಟೀಚರ್ ದೇವು!

ಎನ್. ವಿ. ಹಾಲಪ್ಪ, ಶಿವಮೊಗ್ಗ

ಕೋ-ಜಾ ಸರ್ಕಾರದ ೨೦ ತಿಂಗಳ ಸಂಸಾರದ ಪ್ರಸವ ವೇದನೆ ಆರಂಭವಾಗಿದ್ದು ಹುಟ್ಟುವ ಮಗು ಗಂಡೋ? ಅಥವಾ ಹೆಣ್ಣೋ?

• ಎರಡೂ ಅಲ್ಲ. ಕೋ-ಜಾದ ಕ್ಲೋನು (clone)!

ತೂರಗಲ್ಲ ಉಮೇಶ್, ರಾಮದುರ್ಗ

ಬೆಂಗಳೂರು ವಿವಿಯ ಮೈಲಾರಪ್ಪನಿಗೆ ಮೈಲಾರದಲ್ಲಿ ಪೂಜಾರಿ ಕೆಲಸ ಖಾಲಿ ಇದೆ, ಒಳ್ಳೆ ಹುಲ್ಲುಗಾವಲು! ನಿಮ್ಮ ಅಭಿಪ್ರಾಯ!

ಕನ್ನಡ ಮುಚ್ಚಾಲೆ

• ಮೈಲಾರಿಯ ಮಹಿಮೆ ಬೆಂಗಳೂರಿಗೆ ಸೀಮಿತವಾಗಿರಲಿ!

ಕವಿತಾ ಮಧುಸೂದನ್, ದಾವಣಗೆರೆ

ನರ್ಸ್ ಜಯಲಕ್ಷ್ಮಿಗೆ ಮಹಿಳಾ ಆಯೋಗದ ಅಧ್ಯಕ್ಷೆ ನೇಸರ್ಗಿ ಮೇಲೆ ನಂಬಿಕೆ ಯಾಕಿಲ್ಲ?

• ನೇಸರ್ಗಿಗೆ ನೈಸರ್ಗಿಕ ವಿಷಯಗಳ ಬಗ್ಗೆ ಹೆಚ್ಚಾಗಿ ಗೊತ್ತಿಲ್ಲದಿರುವುದರಿಂದ.

ಎಂ. ಎಸ್. ವಿನಯ್, ಕುಮಟಾ

ಅಕ್ಟೋಬರ್‌ನಲ್ಲಿ ಚೆಡ್ಡಿ ಹೋಗಿ ಲಂಗೋಟ ಸಿಗಬಹುದೇ?

• ಜನರಿಗೆ ಉಡುದಾರ ಮಾತ್ರ ಸಿಕ್ಕೀತು. ಜೋಕೆ!

ಕೆ. ಶ್ರೀನಿವಾಸ್, ಮಂಡ್ಯ

ಆಗಾಗ್ಗೆ ನಮ್ಮ ಇಂಗ್ಲಿಷ್ ಪತ್ರಿಕೆಗಳು ಸೆಕ್ಸ್‌ಸರ್ವೆ ಮಾಡೋದೇಕೆ!?

• *SE* ಆದ ಮೇಲ್ಕೆ ಮುಖ್ಯವೋ, ಮುಖ್ಯವೋ ಎಂಬ ಗೊಂದಲದಿಂದ.

ಬಿ.ಚಂದ್ರೇಗೌಡ, ಬೆಂಗಳೂರು

ಭಂಡತನ ಗಂಡಸರಿಗೆ ಮಾತ್ರ ಸೀಮಿತವೆ?

• ಈ ಪತ್ರಿಕೆಯ ಸಂಪಾದಕಿ ಮಹಿಳೆ ಅಂತ ಗೊತ್ತಿಲ್ಲವೇನು?

ಮಂಚಾಲಿ ಗುರುರಾಜಚಾರು, ಬಳ್ಳಾರಿ

ಸಮ್ಮಿಶ್ರ ಸರ್ಕಾರವೆಂಬ ಬುಗುರಿ ಕುಮಾರಸ್ವಾಮಿಯಾದರೆ ಚಾಟ ಯಾರು?

• ದೇವೇಗೌಡರಿಗೆ ನಂಬಿಕೆ ಇರುವ ದೇವಾ!

ಡಿ.ಎಲ್. ಸುರೇಶ್, ಹರಪನಹಳ್ಳಿ

ಕಾಯುವ ಕೈ ಕೋವಿ ಹಿಡಿದರೆ?

• ಕಾಯುವ ನೆಪದಲ್ಲಿ ಈಗಾಗಲೇ ಪೊಲೀಸರು ಕೋವಿ ಹಿಡಿದಿದ್ದಾರಲ್ಲಾ.

ಎಸ್. ಶಶಿಧರ, ದಾವಣಗೆರೆ

ವಿಧಾನಸಭೆಯಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿದ್ದರೂ ಅದು ತಬ್ಬಲಿಯಂತೆ ಕಂಗಾಲಾಗಿರುವುದೇಕೆ?

• ಚೆಡ್ಡಿಗೆ ಲಾಡಿ ಇಲ್ಲದಿರುವುದೇ ಕಾರಣ!

ಕಿರುಗುಂದ ರಫೀಕ್, ಕಿರುಗುಂದ

ಮಾಧ್ಯಮವನ್ನು ಧರ್ಮಾಸ್ತ್ರ ಅಂದುಕೊಂಡವರು?

• ಚೆಡ್ಡಿ ಪತ್ರಿಕೆಗಳ ಸಂಪಾದಕ / ಪ್ರಕಾಶಕರಾಗಿದ್ದಾರೆ.

ಬಹುಮಾನಿತ ಪ್ರಶ್ನೆ

ನಾಗೇಶ್, ಕಲ್ಲುಗೋಪಳ್ಳಿ

ಚೆಡ್ಡಿಗಳು ಆಸ್ತಿಕರೋ, ನಾಸ್ತಿಕರೋ?

• ಅಧಿಕಾರ ಸಿಕ್ಕರೆ ಬರೀ 'ಆಸ್ತಿ'ಕರು.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

ಕವಿತಾಳಿಗೆ ಗ(ಂ)ಡಸು ದನಿ ಏಕೆ?

• ತಂದೆಗೆ ಇಲ್ಲದ್ದು ಅವಳಿಗೆ ದಕ್ಕಿದೆ!

ಜಿ.ಡಿ.ಎಲ್. ನವೀನ್, ಗಡ್ಡಂಬಚ್ಚಹಳ್ಳಿ

ತಾಯಿಯಿಂದ ಜನನ, ಪ್ರೇಯಸಿಯಿಂದ ಮರಣ, 'ಲಂಕೇಶ್'ನಿಂದ?

• ಪುನರ್ ಜನ್ಮ!

ಹರಳಹಳ್ಳಿ ಪುಟ್ಟರಾಜು, ದೊಡ್ಡಬ್ಯಾಡರಹಳ್ಳಿ

ದೇವೇಗೌಡರು ಸದಾ ಪಂಚೆಯನ್ನು ತೊಡುವುದೇಕೆ?

• ಒಳಗಿನ ಚೆಡ್ಡಿ ಕಾಣಿಸದಿರಲೆಂದು.

ಎಂ. ನಿಸರ್ಗ, ದಾವಣಗೆರೆ

ಕುವೆಂಪು ಈಗ ಇದ್ದಿದ್ದರೆ 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಹೇಳಲು ಮನಸ್ಸು ಮಾಡುತ್ತಿದ್ದರೆ?

• 'ಸರ್ವ ಜನಾಂಗದ ಕ್ರಾಂತಿಯ ತೋಟ' ಅಂದು ನಮ್ಮೆಲ್ಲರಲ್ಲಿ ಹುರಿದುಂಬಿಸುತ್ತಿದ್ದರು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ತಿರುಕನ ಕನಸಿಗೂ ಯಡ್ಡಿಯ ಕನಸಿಗೂ ಏನು ವ್ಯತ್ಯಾಸ?

ಪ್ರಶ್ನೆ ನಂ. 22ರ ನಮ್ಮ ಪ್ರಶ್ನೆ: ಸಂಜಯ್ ದತ್‌ನ ಜೈಲುವಾಸಕ್ಕೂ ಗಾಂಧಿಯ ಬಂಧನಕ್ಕೂ ಏನು ವ್ಯತ್ಯಾಸ?

ನಿಮ್ಮ ಉತ್ತರ: ಅಂದಿನದು ದೇಶಕ್ಕಾಗಿ, ಇಂದಿನದು ಜಾಲಿಗಾಗಿ!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು : ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

ಬೆಳ್ಳಿ ತೆರೆಯ ಮೇಲೆ 'ಅವ್ವ' ರಾರಾಜಿಸಲಿ

ತೆಗಳಿಕೆ ಹೊಗಳಿಕೆ


ಆರೋಗ್ಯ ಮಂತ್ರಿ ಆರ್. ಅಶೋಕನ ಭೂಗಳ್ಳತನದ ಬಗ್ಗೆ ಸರಣಿ ವರದಿ ಓದಿದೆ. ನಿಮಗೆ ಧನ್ಯವಾದಗಳು. ಉತ್ತರಹಳ್ಳಿ ಚೆಡ್ಡಿ ಶಾಸಕ ಆರ್. ಅಶೋಕ್ ಕೋ-ಜಾ ಸರ್ಕಾರದ ಬಕಾಸುರ ಅಂದರೆ ತಪ್ಪಾಗುವುದಿಲ್ಲ. ಈ ಅಶೋಕನು ಆರ್‌ಎಸ್‌ಎಸ್ ಹಣೆಪಟ್ಟಿ ಹಚ್ಚಿಕೊಂಡು ಭೂಗಳ್ಳನಾಗಿ ಮೆರೆಯುತ್ತಿದ್ದಾನೆ. ಪತ್ರಿಕೆ ತನ್ನ ತನಿಖಾ ವರದಿ ಮೂಲಕ ಈತನ ಕಬಳಿಕೆಯನ್ನು ಬಹಿರಂಗ ಪಡಿಸಿದ್ದು ಸ್ವಾಗತಾರ್ಹ.



-ರಮಜಾನ ಕೆ. ಕೊರ್ತಿ, ಬಾದಾಮಿ

'ಲಂಕೇಶರ ಮುಸ್ಸಂಜೆ ಅವ್ವಳಾಗಿ ಬೆಳ್ಳಿತೆರೆಗೆ' ಈ ಬಗ್ಗೆ ಓದಿ ತುಂಬಾ ತುಂಬಾ ಹೆಮ್ಮೆಯಾಯ್ತು. ಇಂತಹ ಕಾದಂಬರಿ ಆಧಾರಿತ ಚಿತ್ರದಲ್ಲಿ ಪ್ರಶಸ್ತಿ ವಿಜೇತರು ಸಮಾಗಮವಾಗುತ್ತಿರುವುದರ ಬಗ್ಗೆ ಓದಿ ಹಾಲು-ಜೇನು ಸವಿದಂತಾಯ್ತು. ಒಳ್ಳೆಯ ನಟನೆ, ನಿರ್ದೇಶನ, ಪಾತ್ರಗಳು, ಉತ್ತಮ ಸಂಗೀತ, ಕಾದಂಬರಿ ಆಧಾರಿತ ಚಿತ್ರಗಳಿಗೆ ಯಶಸ್ಸು ಎನ್ನುವುದು ಕಟ್ಟಿಟ್ಟಬುತ್ತಿ. ಈ ನಿಟ್ಟಿನಲ್ಲಿ ಕವಿತಾ ಲಂಕೇಶರಿಗೆ ಈ ಚಿತ್ರ ಒಂದು ಸವಾಲಾಗಿ ಯಶಸ್ಸು ಸಾಧಿಸಲಿ ಎಂದು ಆಶಿಸುತ್ತೇನೆ. ಪ್ರೇಕ್ಷಕರ ನಿರೀಕ್ಷೆಗೂ ಮೀರಿದ ಚಿತ್ರವಾಗಿ 'ಅವ್ವ' ಬೆಳ್ಳಿತೆರೆಯ ಮೇಲೆ ರಾರಾಜಿಸಲಿ. ಈ ಸಡಗರ, ಸಂಭ್ರಮದಲ್ಲಿ ಮೇಷ್ಟ್ರು ನೆನಪಾದರು. ನನಗೆ ಗೊತ್ತಿಲ್ಲದಂತೆ ಕಣ್ಣಾಲಿಗಳು ತೇವಗೊಂಡವು. ಅವರು ದೂರದಲ್ಲೆಲ್ಲೋ ನಿಂತು ಈ ಚಿತ್ರತಂಡವನ್ನು ಅಭಿನಂದಿಸುತ್ತಾರೆ ಎನ್ನುವ ನಂಬಿಕೆ ನನಗಿದೆ. ಆಲ್ ದಿ ಬೆಸ್ಟ್ 'ಅವ್ವ' ಚಿತ್ರತಂಡಕ್ಕೆ.

-ಕಾಳೀಹುಂಡಿ ಶಿವಕುಮಾರ್, ಮೈಸೂರು



ರಾಜ್ಯದಲ್ಲಿ ನಕ್ಸಲ್ ಚಳವಳಿ ಬೆಳೆಯಲು, ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳವರು ಗದ್ದರ್‌ರವರಿಗೆ ಬಸವ ಪ್ರಶಸ್ತಿ ಕೊಟ್ಟಿರುವುದೇ ಕಾರಣ ಎಂದು ಹೇಳಿರುವ ಹಾರ್ನಳ್ಳಿ ರಾಮಸ್ವಾಮಿಯವರ ಹೇಳಿಕೆಯನ್ನು ಅಸಂಬದ್ಧ ಎಂದು ಪತ್ರಿಕಾಗೋಷ್ಠಿಯಲ್ಲಿ ಡಾ. ಮರುಳಸಿದ್ಧಪ್ಪ, ಶಾಸಕ ಬಿ.ಆರ್.ಪಾಟೀಲ್ ಅವರುಗಳು ಖಂಡನೆ ಮಾಡಿರುವುದು ವಿಚಾರವಂತರಿಗೆ ಹರ್ಷ ತಂದಿದೆ.



ಸ್ಥಾಪಿತ ಮೌಲ್ಯದಲ್ಲೇ ಸಾಮಾಜಿಕ ಸ್ತಂಭಗಳನ್ನು ನೆಡದೆ, ಪುರಾಣದಲ್ಲಿರುವ ಕಥೆಗಳನ್ನು ದೈವೀಕರಿಸದೆ, ಸಂಪ್ರದಾಯಗಳಿಗೆ ಶರಣಾಗದೆ, ವೈಜ್ಞಾನಿಕವಾಗಿ, ವೈಚಾರಿಕವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗಿ, ದಲಿತರ ಮತ್ತು ಆರ್ಥಿಕವಾಗಿ ಶೋಷಣೆಗೊಳಗಾಗಿರುವವರ ಏಳಿಗೆಗಾಗಿ ಶ್ರಮಿಸುತ್ತಿರುವ, ಶೋಷಿತರಲ್ಲಿ ಆತ್ಮಸ್ಥೈರ್ಯ ತುಂಬಿ ಅಮಾವಾಸ್ಯೆಯಲ್ಲೂ ಕೂಡ ಶುಭಕಾರ್ಯಗಳನ್ನು ನೆರವೇರಿಸುವ ಮೂಲಕ ಸಮಾಜದಲ್ಲಿ ಕ್ರಾಂತಿಕಾರಕ ಸಾಧನೆ ಮತ್ತು ಕೊಡುಗೆ ನೀಡುತ್ತಿರುವ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳಿಗೆ ಎಲ್ಲಾ ವರ್ಗದ ಜನಗಳ ಮತ್ತು ಮಾಧ್ಯಮಗಳ ಬೆಂಬಲ ತುಂಬಾ ಅವಶ್ಯಕವಾಗಿ ಬೇಕಾಗಿದೆ.

-ಎನ್. ಕುಮಾರ್, ಬೆಂಗಳೂರು



ಹೊಸಪೇಟೆಯ ಹಂಪಿಯಿಂದ ಈ ಪತ್ರ ಬರೆಯುತ್ತಿದ್ದೇನೆ. ಕಳೆದ ಸಂಚಿಕೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಸ್ಥಾನಕ್ಕೆ ಲಾಬಿ ಮಾಡುತ್ತಿರುವ ಮಲ್ಲೇಪುರಂ ವೆಂಕಟೇಶ್ ಎಂಬಾತನ ಬಗ್ಗೆ ಸರಿಯಾಗಿ ಬರೆದಿದ್ದೀರಿ. ನಿಮಗೆ ತುಂಬು ಹೃದಯದ ಧನ್ಯವಾದಗಳು. ಈತನ ಬಗ್ಗೆ ಇನ್ನೂ ಹಿಮಾಲಯದಷ್ಟು ಬರೆಯುವುದಿದೆ. ನೀವು ಸ್ವಲ್ಪ ಬರೆದಿದ್ದೀರಿ ಅಷ್ಟೇ.

-ಹೆಸರು ಬೇಡ

ನೀವು ಮಲ್ಲೇಪುರಂ ಬಗ್ಗೆ ಬಹಳ ಚೆನ್ನಾಗಿ ಬರೆದಿದ್ದೀರಿ. ನಿಮಗೆ ತುಂಬಾ ನಮಸ್ಕಾರಗಳು. ಅವನು ವಿ.ಸಿ. ಆಗಬಾರದು.

-ಹೆಸರು ಬೇಡ

ತಮ್ಮ ಘನ ಪತ್ರಿಕೆಯಲ್ಲಿ ನನ್ನ ಕುರಿತು ವೈಯಕ್ತಿಕ ನಿಂದನೆಯಿಂದೊಡಗೂಡಿದ ಕಪೋಲಕಲ್ಪಿತ ವರದಿ ಪ್ರಕಟವಾಗಿರುವುದು ನನಗೆ ತುಂಬಾ ಆಘಾತವಾಗಿದೆ. ಅಂತಹ ವರದಿಯೊಂದನ್ನು ತಮ್ಮ ಪ್ರತಿಷ್ಠಿತ ಪತ್ರಿಕೆಯಲ್ಲಿ ನಾನು ನಿರೀಕ್ಷಿಸಿರಲಿಲ್ಲ. ನಾವು ದಕ್ಷಿಣ ಕನ್ನಡ ಜಿಲ್ಲಾ ಎಡಿಟರ್ಸ್ ಕ್ಲಬ್ ಎಂಬ ಸಂಘಟನೆಯನ್ನು ಹುಟ್ಟು ಹಾಕಿರುವುದರಿಂದ ಅಸೂಯೆಗೊಂಡ ಕೆಲವರು ನೀಡಿರುವ ಸುಳ್ಳು ಮತ್ತು ಕಪೋಲಕಲ್ಪಿತ ಮಾಹಿತಿಯನ್ನು ಆಧರಿಸಿ ತಾವು ಈ ಸುದ್ದಿಯನ್ನು ಪ್ರಕಟಿಸಿದಂತಿದೆ. ವರದಿಯಲ್ಲಿ ಪ್ರಕಟವಾಗಿರುವ ನನ್ನ ವಿರುದ್ಧದ ಎಲ್ಲಾ ನಕಾರಾತ್ಮಕ ವಿಷಯ ಸಂಪೂರ್ಣ ಸುಳ್ಳಾಗಿರುತ್ತದೆ. ನನ್ನ ವಿರುದ್ಧ ಯಾವುದೇ ಠಾಣೆಯಲ್ಲಿ ಯಾವುದೇ ಮೊಕದ್ದಮೆಗಳಿಲ್ಲ. ಆ ಕುರಿತು ತಾವು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಸಂಪರ್ಕಿಸಬಹುದು. ನನಗಾಗದವರು ನೀಡಿರುವ ಮಾಹಿತಿಯನ್ನು ಸತ್ಯ ಎಂದು ಏಕಪಕ್ಷೀಯವಾಗಿ ತೀರ್ಮಾನಿಸಿ ತಾವು ಸುದ್ದಿ ಪ್ರಕಟಿಸಿ ನನಗೆ ಮಾನಸಿಕ ಮತ್ತು ಆರ್ಥಿಕ ನಷ್ಟ ಉಂಟುಮಾಡಿದ್ದೀರಿ. ತಮ್ಮ ಪ್ರತಿಷ್ಠಿತ ಘನ ಪತ್ರಿಕೆಯಲ್ಲಿ ಇಂತಹ ಸುದ್ದಿಯನ್ನು ನಾನು ನಿರೀಕ್ಷಿಸಿರಲಿಲ್ಲ.

-ನಳಿನ್ ಕುಮಾರ್ ರೈ, ಮಂಗಳೂರು

ಸರಕಾರಕ್ಕೆ ಹಣ ಮತ್ತು ಅಧಿಕಾರವನ್ನು ಕೊಡುವುದೂ, ಯುವಕರಿಗೆ ಗುಂಡು ಮತ್ತು ಕಾರಿನ ಕೀ ಕೊಡುವುದೂ ಒಂದೇ - ಪಿ.ಜೆ.ಓ. ರೂರ್ಕ

ಜಯ(ಗಳ)ಮಾಲಾ!



ಈ ವರ್ಷ ಜಯಮಾಲಾರವರ ಅದೃಷ್ಟ ಖುಲಾಯಿಸುತ್ತಿರುವಂತಿದೆ. ಮೊನ್ನೆ ತಾನೇ ಡಾಕ್ಟರೇಟ್ ಪದವಿಯನ್ನು ಪಡೆದ ಜಯಮಾಲಾರವರ ಮುಡಿಗೆ ಮತ್ತೊಂದು ಯಶಸ್ಸು ಏರಿದೆ. ಅವರು ನಿರ್ಮಿಸಿದ್ದ 'ತುತ್ತೂರಿ' ಒಂದು ಮಕ್ಕಳ ಚಿತ್ರವಾದರೂ ಅದಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪರಿಸರದ ಮೇಲೆ ಪರಿಣಾಮ ಬೀರುವ ಅತ್ಯುತ್ತಮ ಚಿತ್ರ ಎಂಬ ಪ್ರಶಸ್ತಿ ಲಭಿಸಿದೆ. ಈ ಮಧ್ಯೆ ಪತ್ರಕರ್ತ ಜೋಗಿ ಬರೆದಿರುವ ಕತೆಯನ್ನಾಧರಿಸಿ ಅವರು ಚಿತ್ರವೊಂದನ್ನು ನಿರ್ದೇಶಿಸಲು ಸಜ್ಜಾಗುತ್ತಿದ್ದಾರೆ.

ಇದೆಲ್ಲಕ್ಕಿಂತ ಇನ್ನೂ ಲೇಟೆಸ್ಟ್ ಸುದ್ದಿಯಾವುದೆಂದರೆ ಮುಂದಿನ ತಿಂಗಳು ನಡೆಯಲಿರುವ ಚಲನಚಿತ್ರ ವಾಣಿಜ್ಯ ಮಂಡಳಿಯ ಚುನಾವಣೆಯಲ್ಲಿ ಈಕೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ ಎಂಬುದು. ಹಿಂದೊಮ್ಮೆ ಇದೇ ಸ್ಥಾನಕ್ಕೆ ಸ್ಪರ್ಧಿಸಿದ್ದ ಜಯಮಾಲಾ ಪರಾಭವಗೊಂಡಿದ್ದರು. "ಚಲನಚಿತ್ರ ವಾಣಿಜ್ಯ ಮಂಡಳಿಯಂಥ ಸಂಸ್ಥೆಗೆ ಹೆಣ್ಣುಮಗಳೊಬ್ಬಳು ಅಧ್ಯಕ್ಷೆಯಾಗುವುದು ನಮಗೆ ಅವಮಾನ" ಎಂದೇ ಭಾವಿಸಿದ್ದ ಪುರುಷರು ಒಗ್ಗೂಡಿ ಅಂದು ಆಕೆಯನ್ನು ಸೋಲಿಸಿದ್ದರು.

ಆದರೆ ಈಗ ಅಲ್ಲಿನ ವಾತಾವರಣ ಬದಲಾಗಿದೆ. "ನಮ್ಮ ರಾಜ್ಯದ ಅಧ್ಯಕ್ಷೆಯಾಗಿ ಮಹಿಳೆಯನ್ನು ಆಯ್ಕೆ ಮಾಡಿರುವಾಗ ನಮ್ಮ ಛೇಂಬರ್‌ಗೂ ಮಹಿಳೆಯೇ ಅಧ್ಯಕ್ಷೆಯಾದರೆ ಚೆನ್ನ" ಎಂದು ಹಾಲಿ ಅಧ್ಯಕ್ಷ ತಲ್ಲಂ ನಂಜುಂಡಶೆಟ್ಟಿ ಸೇರಿದಂತೆ ಕಾರ್ಯದರ್ಶಿ ಕೆ.ಸಿ.ಎನ್. ಕುಮಾರ್‌ತನಕ ಎಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದಾರೆ. ಈಗಾಗಲೇ ಛೇಂಬರ್‌ನಲ್ಲಿ ಉಪಾಧ್ಯಕ್ಷೆ, ಕಾರ್ಯದರ್ಶಿ, ಖಜಾಂಚಿಯಾಗಿ ಕಾರ್ಯನಿರ್ವಹಿಸಿರುವ ಜಯಮಾಲಾರವರು ಅಧ್ಯಕ್ಷೆ ಸ್ಥಾನವನ್ನೂ ನಿಭಾಯಿಸಬಲ್ಲರು.

ಅಂತೂ, ಈ ವರ್ಷ ನಿಜವಾಗಲೂ ಜಯಮಾಲಾರವರಿಗೆ ಜಯಗಳ ಮಾಲೆಯೇ ಆಗಿದೆ!



ನಟಿಯಾಗದವಳ ನಾಟ್ಯ

ಸುಮನ್ ರಂಗನಾಥ್ ಎಂಬ ಬಾಲಿವುಡ್ ಬೆಡಗಿ ಕನ್ನಡಕ್ಕೆ ಬಂದಿದ್ದಾಳೆ. ಆದರೆ ಆಕೆಯ ಬಗ್ಗೆ ತಿಳಿದವರಿಗೆ ಗೊತ್ತು ಆಕೆ ಬಾಲಿವುಡ್ ಬೆಡಗಿಯಲ್ಲ; ಬದಲಾಗಿ ಆಕೆ ಮೇಡ್‌ಇನ್ ಕರ್ನಾಟಕ ಮಾಡಲ್ ಎಂಬುದು. ಸುಮಾರು ಹತ್ತು ವರ್ಷಗಳ ಹಿಂದೆ ಈಕೆ ಶಂಕರ್‌ನಾಗ್ ಮತ್ತು ದೇವರಾಜ್ ಜೊತೆ ಒಂದೆರಡು ಚಿತ್ರಗಳಲ್ಲಿ ನಟಿಸಿ ಕ್ಲಿಕ್ ಆಗಿದ್ದಳು. ಆದರೆ ಅದೇ ಹೊತ್ತಿಗೆ ಮಾಲಾಶ್ರೀ ಜಮಾನ ಶುರುವಾಗಿತ್ತು. ಆಗ ಸುಮನ್ ರಂಗನಾಥ್ ಸ್ವಲ್ಪ ಮನಸ್ಸು ಮಾಡಿದ್ದರೆ ಮಾಲಾಶ್ರೀಗೆ ಸವಾಲು ಒಡ್ಡಬಹುದಿತ್ತು. ಯಾಕೆಂದರೆ ಒಬ್ಬ ನಟಿಗೆ ಬೇಕಾಗಿದ್ದ ಸುಂದರವಾದ ಮೈಕಟ್ಟು ಆಕೆಗಿತ್ತು. ಅಷ್ಟೇ ಅಲ್ಲ, ಆಗಲೇ ಆಕೆ ಮೈಬಿಚ್ಚಿ ನಟಿಸುವ ಪಾತ್ರ ಮತ್ತು ಉಡುಪುಗಳಲ್ಲಿ ಕಾಣಿಸಿಕೊಂಡು ಗಾಂಧಿನಗರದವರ ಹೃದಯಕ್ಕೆ ಕಿಚ್ಚಿಟ್ಟಿದ್ದಳು. ಆಕೆಯ ಕೋರೆ ಹಲ್ಲಿನ ನಗುವೇ ಒಂದು ಆಕರ್ಷಣೆಯಾಗಿತ್ತು.

ಆದರೆ ಯಾಕೋ ಏನೋ ಆಕೆಗೂ ಬಾಲಿವುಡ್ ಹುಚ್ಚು ತಗುಲಿತ್ತು. ಅಪಾರ ನಿರೀಕ್ಷೆಯಲ್ಲಿ ಅಲ್ಲಿಗೆ ಹೋದ ಸುಮನ್ ಅಲ್ಲೇನೂ ಅಷ್ಟಾಗಿ ವಿಜೃಂಭಿಸಲಿಲ್ಲ. ಬದಲಿಗೆ 'ಆಶಿಕಿ' ಖ್ಯಾತಿಯ ರಾಹುಲ್ ರಾಯ್ ಜೊತೆಗಿನ ಪ್ರಣಯ, ಮದುವೆ ಮತ್ತು ಕಿತ್ತಾಟಗಳೇ ಅಲ್ಲಿಯ ಪತ್ರಿಕೆಗಳಲ್ಲಿ ರಾರಾಜಿಸಿದ್ದವು.

ಚಿತ್ರನಟಿಯಾಗದಿದ್ದರೂ ಮುಂಬೈ ಚಿತ್ರರಂಗದ ರಂಗುರಂಗಿನ ಪಾರ್ಟಿಗಳಲ್ಲಂತೂ ಈಕೆ ಎಲ್ಲರಿಗೂ ಬೇಕಾದ ಬೆಡಗಿಯಂತೆ ಕಾಣಿಸಿಕೊಂಡಳು. ತಲೆ-ಬುಡ ಇರದ ಪೇಜ್-3 ಕಾಲಮ್‌ಗಳಲ್ಲಂತೂ ಖಾಯಂ ಆಗಿದ್ದಳು. ಅದಕ್ಕಿಂತ ಹೆಚ್ಚು ಆಕೆ ಗಾಸಿಪ್ ಕಾಲಂಗಳಿಗೆ ಯದ್ವಾತದ್ವಾ ಆಹಾರವಾದಳು.

ಈಗ 'ಗಜ' ಚಿತ್ರದಲ್ಲಿ ದರ್ಶನ್ ಜೊತೆ ಐಟಂ ಸಾಂಗ್‌ವೊಂದರಲ್ಲಿ ಕುಣಿದು ಕುಪ್ಪಳಿಸಲು ಈ ಕನ್ನಡದ ಹುಡುಗಿ ಬಂದಿದ್ದಾಳೆ. ಬಾಲಿವುಡ್‌ಗೆ ಹೋದಾಗ ಹದಿನಾರರ ಆಜುಬಾಜಿನಲ್ಲಿದ್ದ ಈ ಸುಂದರ ನಟಿ ಈಗ ಮೂವತ್ತೈದರ ಆಜುಬಾಜಿನಲ್ಲಿದ್ದರೂ ಐಟಂಸಾಂಗ್ ಬೆಡಗಿಯಾಗಿ ಮರಳಿ ಮನೆಗೆ ಬಂದಿದ್ದಾಳೆ. ಕನ್ನಡದ ಹುಡುಗಿಯ ದುರಂತವೆಂದರೆ ಇದೇ ತಾನೆ?


ಬಂದಳು ಹೊಸ ತಂಗಿ

ಚಿತ್ರರಂಗದಿಂದ 'ತಂಗಿ'ಯೊಬ್ಬಳು ನಿರ್ಗಮಿಸುತ್ತಿದ್ದಂತೆಯೇ ಗಾಂಧಿನಗರಿಗಳು ಆ ಸ್ಥಾನದಲ್ಲಿ ಮತ್ತೊಬ್ಬಳನ್ನು ಕೂರಿಸಿದ್ದಾರೆ. ರಾಧಿಕಾ ಎಂಬ ಅಳುಮುಂಜಿ 'ತಂಗಿ' ಕೋಟ್ಯಾಧಿಪತ್ನಿಯಾಗಿ ಈಗ ಚಿತ್ರನಿರ್ಮಾಣಕ್ಕೆ ಇಳಿಯುತ್ತಿರುವಾಗಲೇ ಆಕೆಯ ಜಾಗಕ್ಕೆ ಆಕೆಯ ಊರಿನವಳೇ ಆದ ರಶ್ಮಿಯನ್ನು ತಂದಿದ್ದಾರೆ.

'ದುನಿಯಾ' ಚಿತ್ರದಲ್ಲಿ ರಶ್ಮಿ ಓಕೆ ಎನಿಸಿಕೊಂಡಿದ್ದಳು. ಆದರೆ ಅಷ್ಟೇನು ಗ್ಲಾಮರಸ್ ಅಲ್ಲದ, ಮತ್ತು ಅಂತಹ ಪಾತ್ರಗಳ ಬಗ್ಗೆ ಒಲವಿಲ್ಲದ ಈಕೆಯನ್ನು ಕರೆಕ್ಟಾಗಿ 'ತಂಗಿ' ಮಾಡಿದ್ದಾರೆ. ಈಕೆಗೆ ಈ ಪಟ್ಟವನ್ನು ಮೊದಲು ಕೊಟ್ಟವರು ರಮೇಶ್ ಯಾದವ್. ಅವರ ನಿರ್ಮಾಣದ 'ಅಕ್ಕ-ತಂಗಿ' ಚಿತ್ರದಲ್ಲಿ ಶೃತಿ ಅಕ್ಕ, ರಶ್ಮಿ ತಂಗಿ. ಈಗ ಶಿವರಾಜ್‌ಕುಮಾರ್ ನಟಿಸುತ್ತಿರುವ ಹೊಸ ಚಿತ್ರ 'ತಂಗಿಯ ಮನೆ' ಚಿತ್ರಕ್ಕೂ ಈಕೆಯೇ ನಾಯಕಿ/ ತಂಗಿಯಾಗಿ ಆಯ್ಕೆಯಾಗಿದ್ದಾಳೆ.



60ರ ರಾಧಾಗೆ ರವಿಯ 16ರ ಲವ್!



ಗತಕಾಲದ ನಾಯಕಿ ಬಿ.ವಿ. ರಾಧಾ ಮೊನ್ನೆ ಶನಿವಾರದಂದು ತಮ್ಮ ೬೦ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಆದರೆ ಕೇಕು, ಕ್ಯಾಮರಾಗಳಿಲ್ಲದೆ ವಿಭಿನ್ನವಾಗಿ ಆಚರಿಸಿದರು ರಾಧಾ ಪತಿ ರವಿ! ಕೆ.ಎಸ್.ಎಲ್. ಸ್ವಾಮಿ ಉರುಫ್ ರವಿ ಉದ್ಯಮದ ಎಲ್ಲ ನಿರ್ದೇಶಕರು, ನಿರ್ಮಾಪಕರು, ಪತ್ರಕರ್ತರನ್ನು ಮನೆಗೆ ಕರೆದು ಗಡದ್ದಾಗಿ ಊಟ ಹಾಕಿಸಿ, ವಿಜೃಂಭಣೆಯಿಂದ ನಡೆಸಿದರು. ಆಫ್ ಕೋರ್ಸ್ ಪೂಜೆ ಪುನಸ್ಕಾರಗಳೂ ಜೋರಾಗಿ ನಡೆದವು.

"ಆಗಸ್ಟ್ 18ರಂದು ಯಾವುದೇ ಕಾರ್ಯಕ್ರಮ ಇಟ್ಟುಕೊಳ್ಳಬೇಡಿ. ಆವತ್ತು ನಮ್ಮ ಮನೆಯಲ್ಲೊಂದು ಕಾರ್ಯಕ್ರಮವಿದೆ" ಎಂದು ರವಿ ನಾಲ್ಕು ತಿಂಗಳ ಹಿಂದಿನಿಂದಲೇ ಎಲ್ಲರನ್ನೂ ಪ್ರೀತಿಯಿಂದ ಆಹ್ವಾನಿಸುತ್ತಲಿದ್ದರು. ಹೆಂಡತಿಯ 60 ನೇ ಹುಟ್ಟುಹಬ್ಬಕ್ಕೆ ಇಷ್ಟೊಂದು ಮುಂಚಿತವಾಗಿ 16 ವರ್ಷ ವಯಸ್ಸಿನ ಪ್ರೇಮಿಯಂತೆ ಪ್ಲಾನ್ ಮಾಡಿದ ಮತ್ತೊಬ್ಬ ಗಂಡ ಚಿತ್ರರಂಗದಲ್ಲಿ ಖಂಡಿತಾ ಸಿಗಲಾರರು.

ಅದೇನೇ ಇರಲಿ, ರಾಧಾ-ರವಿ ದಂಪತಿಗಳು ತಮ್ಮ ಜೀವನದ ಸಂಧ್ಯಾ ಕಾಲದಲ್ಲಿ ಸಂತೋಷ, ಸಂಭ್ರಮದಿಂದ ಓಡಾಡುತ್ತಿರುವುದು ಖುಷಿಯ ವಿಷಯ. ನಿರ್ದೇಶಕ ರವೀ ಕೈ ಹಿಡಿದಾಗ ರಾಧಾ ಚಿತ್ರರಂಗದಲ್ಲಿ ಅತ್ಯಂತ ಚಾಲ್ತಿಯಲ್ಲಿದ್ದ ಗ್ಲಾಮರಸ್ ತಾರೆ. ಈಗ ಅರವತ್ತರ ಘಟ್ಟ ತಲುಪಿದಾಗ ಈಕೆಯ ಪತಿ ರವಿ ಕಿರುತೆರೆಯಲ್ಲಿ ಜನಪ್ರಿಯ ನಟರಾಗಿದ್ದಾರೆ. ಮುಂದಿನ ಫೆಬ್ರವರಿಗೆ ರವಿಯವರಿಗೆ ಎಪ್ಪತ್ತು ವರ್ಷ ತುಂಬುತ್ತದೆಯಂತೆ. ಆಗ ಮತ್ತೊಂದು ವಿನೂತನ ಕಾರ್ಯಕ್ರಮ 70ರ ಅಜ್ಜನಿಗಾಗಿ ಕಾದಿದೆ ಯಂತೆ!

ಎಲ್ಲೆಡೆ ರಾಜಕಾರಣಿಗಳು ಒಂದೇ ತರಹ, ನದಿ ಇಲ್ಲದಿದ್ದರೂ ಸೇತುವೆ ಕಟ್ಟುತ್ತೇವೆ ಎಂದು ಭರವಸೆ ನೀಡುತ್ತಾರೆ - ನಿಕಿತಾ ಕ್ರುಶ್ಚೇವ್

RANJANE BODHANE PRACHODANE LANKESH, Kannada Weekly Price Rs. 10/- 29-8-2007 RNI No. KARKAN2005/14648 Regd.No.KA/BG(S)/2036/2005-07



'ಇತಿ ನಿನ್ನ ಪ್ರೀತಿಯ'

ಭಾವನಾ ಎಂಬ ಗ್ಲಾಮರ್ ಬೊಂಬೆ ಕನ್ನಡಕ್ಕೆ ಪುನಃ ಆಗಮಿಸಿದ್ದಾಳೆ. ಭಾವನಾ ಎಂದರೆ ಯಾರು? ಎಂದು ಕೇಳುವಷ್ಟರ ಮಟ್ಟಿಗೆ ಆಕೆ ಕನ್ನಡ ಚಿತ್ರರಂಗದಿಂದ ಅದೃಶ್ಯವಾಗಿದ್ದಳು. ಈಗ ಭಾವನಾಳನ್ನು ಪರಿಚಯಿಸಬೇಕಾದರೆ ಕವಿತಾರ 'ಪ್ರೀತಿ ಪ್ರೇಮ ಪ್ರಣಯದ' ಕಬ್ಬಿನ ಜಲ್ಲೆ ಹುಡುಗಿ ಎಂದರೆ ಮಾತ್ರ ಪಡ್ಡೆ ಹುಡುಗರಿಗೆ ನೆನಪಾಗುತ್ತದೆ.

ಈಕೆ ಸೌಂದರ್ಯ ಮತ್ತು ಪ್ರತಿಭೆ- ಎರಡನ್ನೂ ಹೊಂದಿದ್ದರೂ ಕನ್ನಡ ಚಿತ್ರರಂಗದಲ್ಲಿ ಮೂರಕ್ಕೂ ಏರಲಿಲ್ಲ, ಆರಕ್ಕೂ ಇಳಿಯಲಿಲ್ಲ. ಕೊನೆಕೊನೆಗೆ 'ನಿನಗಾಗಿ' ಚಿತ್ರದಲ್ಲಿ ಆಕೆ ತನ್ನ ದೇಹ ಸೌಂದರ್ಯ ತೋರಿಸಿ ಐಟಂ ಡ್ಯಾನ್ಸ್‌ನಲ್ಲಿ ಕುಣಿದಿದ್ದೇ ತಡ ಆಕೆಯ ಡೌನ್ ಫಾಲ್ ಆರಂಭವಾಯಿತು. ಆಗ ಭವಿಷ್ಯ ಅರಸಿ ಬಾಲಿವುಡ್‌ಗೆ ತೆರಳಿದ್ದಳು. ಅಲ್ಲಿ ಲಂಬೂಜಿ ಅಮಿತಾಬ್ ಬಚ್ಚನ್ ಮಗಳಾಗಿ 'ಫ್ಯಾಮಿಲಿ' ಎಂಬ ಚಿತ್ರದಲ್ಲಿ ನಟಿಸಿದ್ದು ಬಿಟ್ಟರೆ, ಆನಂತರ ಬೇರೇನೂ ಸುದ್ದಿ ಮಾಡಲೇ ಇಲ್ಲ. ಮಧ್ಯದಲ್ಲಿ ಬೆಂಗಳೂರಿಗೆ ಬಂದು ಬೆನ್ನು ಪೂರ್ತಿ ಕಾಣಿಸುವ ಉಡುಪಿನಲ್ಲಿ ಒಂದೆರಡು ಸಮಾರಂಭದ ನಿರೂಪಕಿಯಾಗಿ ಕಾಣಿಸಿಕೊಂಡಿದ್ದಳು.

ಈಗ 'ದುನಿಯಾ' ಖ್ಯಾತಿಯ ಸೂರಿ ನಿರ್ದೇಶನದ 'ಇತಿ ನಿನ್ನ ಪ್ರೀತಿಯ' ಚಿತ್ರದಲ್ಲಿ ಆಕೆಗೊಂದು ಪ್ರಮುಖ ಪಾತ್ರವಿದೆ. ಈ ಚಿತ್ರ ತನಗೆ ಪುನರ್ಜನ್ಮ ನೀಡಬಹುದು ಎಂಬ ನಂಬಿಕೆಯಲ್ಲಿದ್ದಾಳೆ.



'ಚಕ್ ದೆ'ಯಲ್ಲಿ ಬೆಂಗಳೂರಿನ ಬೆಡಗಿಯರು!

ದುನಿಯಾ ಮತ್ತು ಮಳೆ ಒಂದಾದಾಗ..





'ದುನಿಯಾ' ನಿರ್ದೇಶಕ ಸೂರಿ ಮತ್ತು 'ಮುಂಗಾರು ಮಳೆ' ನಿರ್ದೇಶಕ ಯೋಗರಾಜ್ ಭಟ್ ಜೊತೆಗೂಡಿ ಹೊಸ ಚಿತ್ರ ಮಾಡುತ್ತಿದ್ದಾರೆ. ಆದರೆ ಈ ಬಾರಿ ಸೂರಿ ನಿರ್ದೇಶಿಸುತ್ತಿದ್ದರೆ, ಅವರು ಮತ್ತು ಭಟ್ ಚಿತ್ರದ ಜಂಟಿ ನಿರ್ಮಾಪಕರಾಗಿದ್ದಾರೆ. ಇವರಿಬ್ಬರ ಜೊತೆ ಮತ್ತೊಬ್ಬ ನಿರ್ದೇಶಕ ಸುಬ್ರಮಣ್ಯ ಕೂಡ ಸೇರಿಕೊಂಡಿದ್ದಾರೆ. ರವಿಚಂದ್ರನ್ ಗರಡಿಯಲ್ಲಿ ಪಳಗಿದ ಸುಬ್ಬು ಒಂದು ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಅಂತೂ, ಮೂರು ಜನ ನಿರ್ದೇಶಕರು ಸೇರಿ ಒಂದು ಚಿತ್ರ ನಿರ್ಮಿಸುತ್ತಿರುವುದು ಕನ್ನಡದಲ್ಲಂತೂ ಇದೇ ಮೊದಲ ಬಾರಿ.

'ಇತಿ ನಿನ್ನ ಪ್ರೀತಿಯ' ಚಿತ್ರದ ಹೆಸರಾಗಿದ್ದು, ಶ್ರೀನಗರದ ಕಿಟ್ಟಿ ಎಂಬ ಯುವಕ ನಾಯಕನಾಗಿ ನಟಿಸುತ್ತಿದ್ದಾನೆ. ರಂಗಭೂಮಿಯ ನೆರಳಿನಲ್ಲೇ ಬೆಳೆದ ಈತ ತಮಿಳಿನ 'ಬೈಟು' ಎಂಬ ಚಿತ್ರದಲ್ಲಿ ನಟಿಸಿದಾಗ ಶ್ರೀನಗರದ ಕಿಟ್ಟಿ ಚೆನ್ನೈ ಪಾಲಾಗುತ್ತಾನೆ ಎಂದು ಹಲವರು ಭವಿಷ್ಯ ನುಡಿದಿದ್ದರು. ಆದರೆ ಆರಂಭದಿಂದಲೇ ಅದೃಷ್ಟ ಆತನೊಂದಿಗೆ ಇರಲಿಲ್ಲ. 'ಬೈಟು' ನೆಲಕಚ್ಚಿತಲ್ಲದೆ ಅದಕ್ಕಿಂತ ಮುನ್ನ ಆತ ನಟಿಸಿದ್ದ 'ಗಿರಿ' ಎಂಬ ಕನ್ನಡ ಚಿತ್ರವೂ ಸೋತಿತ್ತು.


ಈಗ ಈತ ತನ್ನ ಹೆಸರನ್ನು ಕೃಷ್ಣ ಎಂದು ಬದಲಾಯಿಸಿಕೊಂಡಿದ್ದಾನೆ. ಬದಲಾದ ಹೆಸರು ಮತ್ತು ಸೂರಿಯ ಚಮತ್ಕಾರ ಇವನ ದುನಿಯಾವನ್ನು ಬದಲಾಯಿಸುತ್ತದೆಯೇ ನೋಡಬೇಕು.

ಅರ್ಜೆಂಟಾಗಿ 'ಮಿಸ್ಟರ್ ಗರಗಸ'



'ಅವ್ವ' ಚಿತ್ರದಲ್ಲಿ ವಿಜಯ್, ಸ್ಮಿತಾ

ದಿನೇಶ್ ಬಾಬು ನಿರ್ದೇಶನದ ಚಿತ್ರವೊಂದು ಮೊನ್ನೆ ಸದ್ದಿಲ್ಲದೆ ಆರಂಭವಾಗಿದೆ. ಅದರ ಹೆಸರು 'ಮಿಸ್ಟರ್ ಗರಗಸ' ಎಂದಾಗಿದ್ದು, ಅದು ಇಂಗ್ಲಿಷ್ ಚಿತ್ರದ ಕಾಪಿ ಎಂಬ ಮಾತಿದೆ. ವಿಷಯ ಏನೆಂದರೆ, ಈ ಚಿತ್ರವನ್ನು ಕೇವಲ ಹನ್ನೆರಡೇ ದಿನಗಳಲ್ಲಿ ಮುಗಿಸಲು ದಿನೇಶ್ ಬಾಬು ಹೊರಟಿದ್ದಾರೆ. ಅವರಿಗೆ ಇದೇನು ಹೊಸ ಸಾಹಸವಲ್ಲ, ಯಾಕೆಂದರೆ ಅವರು ಚಿತ್ರರಂಗಕ್ಕೆ ಎಂಟ್ರಿಮಾಡಿದ್ದೇ ಶಿವರಾಜ್‌ಕುಮಾರ್ ಅಭಿನಯದ 'ಇನ್ಸ್‌ಪೆಕ್ಟರ್ ವಿಕ್ರಂ' ಚಿತ್ರವನ್ನು ಇಪ್ಪತ್ತೆರಡೇ ದಿನಗಳಲ್ಲಿ ಮುಗಿಸುವ ಮುಖಾಂತರ. ಆನಂತರ ನಲವತ್ತೆಂಟು ಗಂಟೆಗಳಲ್ಲಿ 'ಇದು ಸಾಧ್ಯ' ಎಂಬ ಚಿತ್ರವನ್ನೂ ಮಾಡಿದ್ದರು ಇವರು.




'ಮಿಸ್ಟರ್ ಗರಗಸ' ಚಿತ್ರದಲ್ಲಿ ಅನಂತ್‌ನಾಗ್ ಮುಖ್ಯ ಪಾತ್ರವಹಿಸಲಿದ್ದಾರೆ. ಮಾಜಿ ನಟ ಲಕ್ಷ್ಮಿಯವರ ಮಗಳು ಐಶ್ವರ್ಯ ಬಹಳ ದಿನಗಳ ನಂತರ ಈ ಚಿತ್ರದ ಮುಖಾಂತರ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ. ಇದರಲ್ಲಿ ನಿರ್ದೇಶಕ ನಾಗಾಭರಣ ಕೂಡ ನಟಿಸುತ್ತಿದ್ದು ಅವರ ಜೋಡಿಯಾಗಿ ಸುಧಾ ರಾಣಿ ಇರುತ್ತಾರೆ. "ನಾನಂತೂ ಈ ಚಿತ್ರದಲ್ಲಿ ಎರಡೆರಡು ನಿರ್ದೇಶಕರ ನಡುವೆ ಭಯದಿಂದ ನಟಿಸಬೇಕಾಗಿದೆ" ಎನ್ನುತ್ತಾರೆ ಸುಧಾರಾಣಿ.

ದಿನೇಶ್ ಬಾಬು ತುಂಬಾ ಗಡಿಬಿಡಿಯಲ್ಲಿ ಈ ಚಿತ್ರವನ್ನು ಮುಗಿಸುತ್ತಿದ್ದಾರೆ ಎಂದೆನಿಸಿದರೂ ಅವರನ್ನು ಅಷ್ಟು ಸುಲಭವಾಗಿ ನಿರ್ಲಕ್ಷಿಸುವಂತಿಲ್ಲ.

'ಚಕ್ ದೆ'ಯಲ್ಲಿ ಬೆಂಗಳೂರಿನ ಬೆಡಗಿಯರು!

ಈಗ ಎಲ್ಲೆಡೆ ಬಿಡುಗಡೆಗೊಂಡು ಜನರಿಂದ ಪ್ರಶ[...]
ಗಳನ್ನು ಪಡೆಯುತ್ತಿರುವ 'ಚಕ್ ದೆ! ಇಂಡಿಯಾ' ಎಂ[...]
ಹಿಂದಿ ಚಿತ್ರದಲ್ಲಿ ಇಬ್ಬರು ಬೆಂಗಳೂರಿನ ಹುಡುಗಿಯರು
ಇದ್ದಾರೆ ಎಂಬ ವಿಷಯ ಬಹಳಷ್ಟು ಜನಕ್ಕೆ ಗೊತ್ತಿಲ್ಲ, ಆದರೆ
ಅದು ನಿಜ. ಈ ಚಿತ್ರದ ಕತೆ ಹಾಕಿ ಆಟದ ಸು[...]
ಕೇಂದ್ರಿತವಾಗಿದ್ದು, ಅದರಲ್ಲಿ ಮಹಿಳಾ ಹಾಕಿ ತಂಡದ ಸದಸ್ಯರಾಗಿ ಅನ್ವಿತಾ ಮತ್ತು ಆರ್ಯ ಎಂಬ ಬೆಂಗಳೂರಿನ ಹುಡುಗಿಯರು ನಟಿಸಿ ಭೇಷ್ ಎನಿಸಿಕೊಂಡಿದ್ದಾರೆ.



ಇಪ್ಪತ್ತು ವರ್ಷ ವಯಸ್ಸಿನ ಅನ್ವಿತ ಮೂಲತಃ ಬೆಂಗಳೂರಿನವಳಾಗಿದ್ದು ಈಗ ಮುಂಬೈಯಲ್ಲಿ ನೆಲೆಸಿದ್ದಾಳೆ. ಈ ಚಿತ್ರದಲ್ಲಿ ನಟಿಸುವ ಅವಕಾಶ, ಅದರಲ್ಲೂ ಹುಡುಗಿಯರಿಗೆ ತುಂಬಾ
ಪ್ರಿಯವಾಗಿರುವ ಶಾರುಖ್ ಖಾನ್ ಜೊತೆ ನಟಿಸುವ ಚಾ[...]
ಸಿಕ್ಕಾಗ ಅನ್ವಿತಳಿಗೆ ಸಂತೋಷವೋ ಸಂತೋಷ. ಆ[...]
ಇದಕ್ಕೆಂದು ಮೂರು ತಿಂಗಳ ಕಾಲ ಹಗಲು-ರಾ[...]
ಮಳೆ-ಬಿಸಿಲು.... ಯಾವುದನ್ನೂ ಲೆಕ್ಕಿಸದೆ ಹಾಕಿ ಆಟವ[...]
ಕಲಿಯಬೇಕಾಗಿತ್ತು ಆಕೆ.

ಈಗ ಆ ಶ್ರಮ ಫಲ ನೀಡಿದೆ. ಆಕೆಗೆ ನಾಗೇಶ್ ಕುಕ್ನೂ[...]
ನಿರ್ದೇಶನದ 'ಆಶಾಯೇ' ಚಿತ್ರದಲ್ಲಿ ನಟಿಸಲು ಕರೆ ಬಂದಿ[...]

ಆರ್ಯ ಎಂಬ ಹುಡುಗಿಯ ಕತೆ ಇದಕ್ಕಿಂತ ಭಿನ್ನವಾ[...]
ನಿಲ್ಲ. ಆಕೆ ರೂಪದರ್ಶಿಯಾಗಿದ್ದು, ಅವಳ ಚಿತ್ರವೊಂದ[...]
ನೋಡಿದ್ದ ಸಹಾಯಕ ನಿರ್ದೇಶಕನಿಂದ ಕರೆ ಬಂತ[...]
"ಶಾರುಖ್ ಖಾನ್ ಜೊತೆ ನಟಿಸುವುದೆಂದರೆ ನನ್ನ ಕ[...]
ನನಸಾದಂತೆ. ಅವರು ನಮ್ಮೆಲ್ಲರೊಂದಿಗೆ ಫ್ರೆಂಡ್ಲಿಯಾಗಿದ್ದ[...]
'ಡಾನ್' ಮತ್ತು 'ಧೂಮ್ 2' ಚಿತ್ರಗಳನ್ನು ನೋಡ[...]
ನಮ್ಮನ್ನೆಲ್ಲ ಕರೆದುಕೊಂಡು ಹೋಗಿದ್ದರಲ್ಲದೆ, ಒಮ್ಮೆ ಇ[...]
ತಂಡವನ್ನು ಡಿಸ್ಕೋವೊಂದಕ್ಕೆ ಕರೆದುಕೊಂಡು ಹೋಗಿದ[...]
ಈ ಚಿತ್ರದಲ್ಲಿ ಹಾಕಿ ಆಡುವುದೇ ತುಂಬಾ ಕಷ್ಟವಾ[...]
ಹಾಗೆಯೇ ನನಗೆ ಹಿಂದಿ ಬರುವುದಿಲ್ಲವಾದ್ದರಿಂದ
ಭಾಷೆಯಲ್ಲಿ ಮಾತನಾಡುವುದೂ ಕಷ್ಟವಾಗಿತ್ತು" ಎನ್ನು[...]
ಆರ್ಯ.

ಈಗ ಈಕೆಗೂ ಒಂದೆರಡು ತಮಿಳು ಚಿತ್ರಗಳಲ್ಲಿ ನಟ[...]
ಆಹ್ವಾನಗಳು ಬಂದಿವೆಯಂತೆ.

ಬೆಂಗಳೂರಿನ ಈ ಇಬ್ಬರು ಬೆಡಗಿಯರಿಗೆ 'ಚಕ್ [...]
ಎನ್ನೋಣವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4